ವಿಶ್ವರಂಗ

ಮೇ ದಿನ
ಶತಮಾನೋತ್ಸವ
ವಿಶೇಷಾಂಕ



NATIONAL AWARD

FOR INTERNATIONAL ACCLAIM!



BHARATH BEEDI WORKS is awarded Govt. of India Trophy for outstanding export performance.

A fitting reward for the excellence of the famous **Thirty Brand Beedies** recognised world-wide! And a great tribute to our founder the Late **Shri B. Manjunath Pai,** whose singular dedication to the highest standards of quality has become a tradition at Bharath Beedi Works Ltd. As a recipient of this prestigious award, we re-affirm our dedication to the excellence in our products- at home and abroad.

30 REGD

BHARATH BEEDI WORKS PRIVATE LIMITED
MANGALORE

ratibha/BB/8602

ಐಕ್ಯರಂಗ

ಈ
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ
ಮುಖಪತ್ರಿಕೆ

ಮೇ ದಿನ ಶತಮಾನೋತ್ಸವ ವಿಶೇಷಾಂಕ

ಸಂಪುಟ - 8

ಸಂಚಿಕೆ - 17-18

ದಿನಾಂಕ 1, ಮೆ 1986

ಒಳಪುಟಗಳಲ್ಲಿ........

ಸಂಪಾದಕೀಯ :

ಮೇ ಶತಮಾನೋತ್ಸವದ ವಿಶೇಷಾಂಕ

ಜಗತ್ತಿನಾದ್ಯಂತ ದುಡಿಯುವ ವರ್ಗ ಮೇ ದಿನದ ಶತಮಾನೋತ್ಸವವನ್ನು ಆಚರಿಸುತ್ತಿದ್ದಾರೆ. ಇಂದು ಜಗತ್ತಿನಲ್ಲೇ ಅತ್ಯಂತ ಶ್ರೀಮಂತವಾದ, ಬಲಿಷ್ಟವಾದ, ತನ್ನ ಸಾಮ್ರಾಜ್ಯಶಾಹಿ ಧೋರಣೆಗನುಸರಿಸಿ ಜಗತ್ತನ್ನು ಬೆದರಿಸಿ, ಏಕಾಧಿಪತಿಯಾಗಿ ಮೆರೆಯಲು ಮೂರನೇ ಮಹಾ ಯುದ್ಧದ ತಯಾರಿಯಲ್ಲಿರುವ ಅಮೇರಿಕ ದೇಶದ ಚಿಕಾಗೋ ನಗರದ ಕಾರ್ಮಿಕರು 1885-86 ರಲ್ಲಿ ಎಂಟು ಗಂಟೆ ಕೆಲಸಕ್ಕಾಗಿ ನಡೆಸಿದ ಹೋರಾಟ, ಮೇ ದಿನಕ್ಕೆ ನಾಂದಿ ಹಾಕಿತ್ತು. ಅವರು ಮಾಡಿದ ತ್ಯಾಗ ಬಲಿದಾನ ಜಗತ್ತಿನಾದ್ಯಂತ ಕಾರ್ಮಿಕ ಸಂಘಟನೆಗೆ ಸ್ಫೂರ್ತಿ ನೀಡಿತು. ಅವರ ಹೋರಾಟಕ್ಕೆ ಚೈತನ್ಯ ತುಂಬಿಸಿತು. ಆ ಕಾರಣದಿಂದಾಗಿ ಜನತ್ತಿನಾದ್ಯಂತ ನಡೆದ ಧೀರ ಹೋರಾಟಗಳ ಫಲವಾಗಿ ಇಡೀ ಕಾರ್ಮಿಕ ವರ್ಗ ಹಲವಾರು ಬೇಡಿಕೆಗಳನ್ನು ಪಡೆಯಲು ಸಾಧ್ಯವಾಯಿತು. ಭಾರತ ದೇಶದ ದುಡಿಯುವ ಜನತೆ ಕೂಡ 8 ಗಂಟೆ ಕೆಲಸ, ಎರಡು ಪಟ್ಟು ಓವರ್ ಟೈಂ, ಪ್ರಾವಿಡೆಂಟ್ ಫಂಡ್, ಗ್ರಾಚ್ಯುಟಿ, ನಿವೃತ್ತಿ ವೇತನ, ಸಮವಸ್ತ್ರ, ಬೋನಸ್, ಮೊದಲಾದ ಬೇಡಿಕೆಗಳನ್ನು ಪಡೆಯ್ಯಲು ಸಾಧ್ಯವಾಯಿತು.

ಮಾರ್ಕ್ಸ್‌ವಾದ-ಲೆನಿನ್‌ವಾದ ಸಿದ್ಧಾಂತದಿಂದ ಮಾರ್ಗದರ್ಶನ ಪಡೆದ ದುಡಿಯುವ ಜನ ಬಂಡವಾಳಶಾಹಿ ಸಂಕೋಲೆಯಿಂದ ಪೂರ್ಣ ವಿಮೋಚನೆಗೊಳ್ಳುವ ಸಲುವಾಗಿ ರಶ್ಯಾ ದೇಶದಲ್ಲಿ ಕ್ರಾಂತಿ ಮಾಡಿ ಜಯಭೇರಿ ಹೊಡೆದರು. ಅದನ್ನೇ ಮುಂದುವರಿಸಿ ಜನತ್ತಿನ ಒಂದನೇ ಮೂರಂಶ ಪ್ರದೇಶದಲ್ಲಿ ಶೋಷಣೆ ರಹಿತ ಸಮಾಜ ರಚಿಸಿದರು. ಇಡೀ ಜನತ್ತನ್ನೇ ಸುಲಿಗೆ ರಹಿತ ಸಮಾಜವನ್ನಾಗಿ ಪರಿವರ್ತಿಸುವ ಪಣ ತೊಟ್ಟು ತಮ್ಮ ಐಕ್ಯತೆ-ಸಂಘಟನೆ-ಹೋರಾಟಗಳನ್ನು ಮುಂದುವರಿಸಿದ್ದಾರೆ. ತ್ಯಾಗ ಬಲಿದಾನದಿಂದ ತಾವು ಸಾಧಿಸಿದ್ದನ್ನೆಲ್ಲ ನಾಶ ಮಾಡಲು ಹೊರಟಿರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಅಣುಯುದ್ಧ, ತಾರಾ ಯುದ್ಧಗಳನ್ನು ವಿರೋಧಿಸಲು, ವಿಫಲಗೊಳಿಸಲು ಸಿದ್ಧತೆ ನಡೆಸಿದ್ದಾರೆ.

ಭಾರತ ದೇಶ ಹಾಗೂ ಕರ್ನಾಟಕದಲ್ಲಿ ಕೂಡ ಸಂಘಟಿತ-ಅಸಂಘಟಿತ ಕಾರ್ಮಿಕ ವರ್ಗ ಮೇ ದಿನದ ಚರಿತ್ರಾರ್ಹ ಪಾಠಗಳನ್ನೂ ಅನುಭವಗಳನ್ನೂ ನೆನೆಸಿಕೊಂಡು, ಅತ್ಯಂತ ಸ್ಫೂರ್ತಿಯಿಂದ, ಉತ್ಸಾಹದಿಂದ ಮೇ ಶತಮಾನೋತ್ಸವವನ್ನು ಆಚರಿಸುತ್ತಿದ್ದಾರೆ. ಪಶ್ಚಿಮ ಬಂಗಾಲದ ಎಡರಂಗ ಸರಕಾರ ವರ್ಷವಿಡೀ ಮೇ ಶತಮಾನೋತ್ಸವ ಆಚರಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ.

ಕಾರ್ಮಿಕರ ಸಂಘಟನೆಗಳಿಗೆ, ಹೋರಾಟಗಳಿಗೆ ಮಾರ್ಗದರ್ಶನ ಸ್ಫೂರ್ತಿ ನೀಡುತ್ತಾ, ಕಾಂಗ್ರೆಸ್ ವಿರುದ್ಧ ಎಡ ಮತ್ತು ಪ್ರಜಾಪ್ರಭುತ್ವ ರಂಗ ರಚನೆ, ಜನತಾ ಪ್ರಜಾಪ್ರಭುತ್ವ ರಂಗದ ಮೂಲಕ ಕಾಂಗ್ರೆಸ್ ಸರಕಾರದ ಬದಲಾಗಿ ಜನತಾ ಪ್ರಜಾಪ್ರಭುತ್ವ ರಂಗದ ಸರಕಾರ ಸ್ಥಾಪಿಸಲು ಪ್ರತಿಪಾದನೆ ಮಾಡುತ್ತಿರುವ ಸಿ. ಪಿ. ಐ (ಎಂ) ಮುಖಪತ್ರ ಐಕ್ಯರಂಗದ ಮೇ ಶತಮಾನೋತ್ಸವದ ವಿಶೇಷಾಂಕವನ್ನು ಪ್ರಕಟಿಸಿ ದುಡಿಯುವ ಜನತೆಗೆ, ಓದುಗರಿಗೆ ಅರ್ಪಿಸಲು ಸಂತೋಷ ಪಡುತ್ತೇವೆ.

ಹೇ ಮಾರ್ಕೆಟ್ ಹೋರಾಟದಲ್ಲಿ ಹುತಾತ್ಮರಾದ ಸಂಗಾತಿಗಳ ಮೂಲೋದ್ದೇಶ, ಸುಲಿಗೆಗೊಳಪಟ್ಟಿರುವ ಕೋಟ್ಯಾನುಕೋಟಿ ಶೋಷಿತ ಜನತೆಯ ಕನಸಾದ "ಸಮಾಜವಾದಿ ಕ್ರಾಂತಿ" "ಶೋಷಣೆ ರಹಿತ ಸಮಾಜ ನಿರ್ಮಾಣ" ನನಸಾಗುವಂತೆ ಮಾಡಲು ಕ್ರಾಂತಿಕಾರಿ ಸಂಘಟನೆ, ಹೋರಾಟ ನಡೆಸಲು ದಾರಿದೀಪವಾಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಲಿ

ಈ ವಿಶೇಷಾಂಕಕ್ಕೆ ವಿಚಾರ ಪೂರಿತ ಲೇಖನ ಹಾಗೂ ಕವನಗಳನ್ನು ನೀಡಿದ ಸಂಗಾತಿಗಳಿಗೆ, ಈ ವಿಶೇಷಾಂಕವನ್ನು ಅಂದವಾಗಿ ಹೊರತರುವಲ್ಲಿ ನೆರವಾದ ಸಂಗಾತಿಗಳಿಗೆ ಮತ್ತು ಜೈ ಪ್ರಿಂಟರ್ಸ್ ಹಾಗೂ "ಸಂಜೆವಾಣಿ" ಪ್ರೆಸ್ಸಿನ ಕಾರ್ಮಿಕ ಬಾಂಧವರು ಹಾಗೂ ಮಾಲೀಕರುಗಳಿಗೆ, ರೂಪಲೇಖದ ಶ್ರೀಯುತ ರಾಮನ್ ಅವರಿಗೆ, ಜಾಹೀರಾತು ನೀಡಿ ಪ್ರೋತ್ಸಾಹಿಸಿದ ಗೆಳೆಯರಿಗೆ ನಮ್ಮ ಹಾರ್ದಿಕ ಕೃತಜ್ಞತೆಗಳು.

ಶತಮಾನೋತ್ಸವ ಆಚರಿಸುತ್ತಿರುವ

ಮೇ ದಿನಾಚರಣೆ

—ಬಿ. ಟಿ. ರಣದಿವೆ

ಕಾರ್ಮಿಕರನ್ನು ಶೋಷಿಸುವುದರಲ್ಲಿ ಯಾವುದೇ ಮಿತಿಗೊಳಪಡಲು ನಿರಾಕರಿಸಿದ್ದ ಬಂಡವಾಳಶಾಹಿ ವರ್ಗದ ವಿರುದ್ಧ ದಿನಕ್ಕೆ ಎಂಟು ಗಂಟೆಗಳ ಕೆಲಸದ ಅವಧಿಯ ಬೇಡಿಕೆಯನ್ನಿಟ್ಟು ದುಡಿಯುವ ವರ್ಗದ ಚಳುವಳಿಗೆ ನಾಂದಿ ಹಾಡಿದ ವೀರ ಹುತಾತ್ಮರ ನೆನಪಿನ ದಿನವಾದ ಮೇ ದಿನವು ಈ ವರ್ಷ ಶತಮಾನೋತ್ಸವವನ್ನು ಆಚರಿಸುತ್ತಿದೆ.

ಚಿಕಾಗೋ ಹುತಾತ್ಮರ ವೀರ್ಯವಂತಿಕೆ ತ್ಯಾಗ ಬಲಿದಾನಗಳನ್ನು ಸ್ಮರಿಸುತ್ತಾ ನಂತರ ಕ್ರಾಂತಿಕಾರಿ ಹೋರಾಟಗಳ ಮೂಲಕ ದುಡಿಯುವ ಜನತೆ ಗಳಿಸಿರುವ ಹಲವಾರು ಮಹತ್ತರ ಸಾಧನೆಗಳ ಹಿನ್ನೆಲೆಯಲ್ಲಿ ಭಾರತದ ದುಡಿಯುವ ಜನತೆ ಅತ್ಯಂತ ಯೋಗ್ಯ ರೀತಿಯಲ್ಲಿ ಈ ದಿನವನ್ನಾಚರಿಸಬೇಕಾಗಿದೆ. ಅಂತೆಯೇ ಅವಿರತವಾಗಿ ವರ್ಗ ಹೋರಾಟವನ್ನು ನಡೆಸಿಕೊಂಡು ಬರುತ್ತಿರುವ ಅಸಂಖ್ಯಾತ ವೀರ ಹುತಾತ್ಮರಿಗೆ ನಮಿಸೋಣ. ಸೋವಿಯತ್ ಒಕ್ಕೂಟದ ನೇತೃತ್ವದ ಫ್ಯಾಸಿಸ್ಟ್ ವಿರೋಧಿ ಹೋರಾಟದಲ್ಲಿ ಭಾಗ ವಹಿಸಿದ ಮಿಲಿಯಾಂತರ ದುಡಿಯುವ ವರ್ಗದ ಜನತೆಯ ಬಲಿದಾನಗಳನ್ನು ನೆನೆಯಬೇಕಾಗಿದೆ. ಇವರ ಶ್ರಮದ ಫಲವಾಗಿ ಇಂದು ಜಗತ್ತಿನ ಮೂರನೆ ಒಂದು ಭಾಗ ಬಂಡವಾಳಶಾಹಿಯ ಹಿಡಿತದಿಂದ ಮುಕ್ತಿಗೊಂಡಿದ್ದು ದುಡಿಯುವ ಜನತೆಯ ಕೆಂಪು ಬಾವುಟ ಅಲ್ಲಿ ಕಂಗೊಳಿಸುತ್ತಿದೆ. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ದುಡಿಯುವ ವರ್ಗದ ಉದಾತ್ತ ಪರಂಪರೆಯನ್ನು ಭಾರತೀಯ ಕಾರ್ಮಿಕರು ಎತ್ತಿಹಿಡಿದು ಅಪಾರ ಬಲಿದಾನಗಳನ್ನು ಮಾಡಿದ್ದಾರೆ.

ಪುನಃ ಇಂದು ದೇಶವನ್ನು ಆಳುತ್ತಿರುವ ಬಂಡವಾಳಶಾಹಿ ಭೂಮಾಲಿಕ ಸಖ್ಯತೆಯ ಆಡಳಿತದಡಿಯಲ್ಲಿ ಶೋಷಣೆಯಿಂದ ಮುಕ್ತಿ ಹೊಂದಲು ಮೂಲಭೂತ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಮತ್ತು ಸಮಾಜವಾದಿ ಪಥದ ಅಡೆತಡೆಗಳನ್ನು ಕಿತ್ತೊಗೆಯಲು ದೇಶದ ಕಾರ್ಮಿಕರು ಬಂದೂಕಿನ ನಳಿಕೆಯನ್ನೆದುರಿಸಬೇಕಾಗಿದೆ. ಚಳುವಳಿಯ ಸಮರ ಶೀಲತೆಯನ್ನು ದೃಢ ನಿರ್ಧಾರದೊಂದಿಗೆ ಮುಂದೆ ಕೊಂಡೊಯ್ಯಲು ಅಪಾಯಕಾರಿ ಪರಿಸ್ಥಿತಿಯನ್ನು ಎದುರಿಸುತ್ತಿರುವ ನಮ್ಮ ದೇಶವನ್ನು ಅದರಿಂದ ಪಾರುಮಾಡಲು ಶತಮಾನೋತ್ಸವವು ಕಾರ್ಮಿಕ ವರ್ಗಕ್ಕೆ ಚೈತನ್ಯ ಪೂರ್ಣ ಕರೆ ನೀಡುತ್ತದೆ.

> ನಮ್ಮ ದೇಶದ ಮೇ ದಿನಾಚರಣೆಯಲ್ಲಿಯೂ ಸುಧಾರಣಾವಾದಿ ಗುಣಗಳು ಕಂಡುಬರುತ್ತಿವೆ. ಪ್ರಜಾಪ್ರಭುತ್ವ, ರಾಷ್ಟ್ರೀಯ ಐಕ್ಯತೆ ಹಾಗೂ ಸಾಮ್ರಾಜ್ಯಶಾಹಿಗಳ ಪಿತೂರಿಗಳಿಗೆ ಮಹತ್ವ ನೀಡಲಾಗುತ್ತಿಲ್ಲ. ಕೇವಲ ತಾತ್ಪೂರ್ತಿಕ ಬೇಡಿಕೆಗಳಿಗಾಗಿ ಶತಮಾನೋತ್ಸವವನ್ನು ಐಕ್ಯ ಮೇ ದಿನಾಚರಣೆಯನ್ನಾಗಿ ಆಚರಿಸಿದರೆ ನಿಜಕ್ಕೂ ಚಿಕಾಗೋ ಹುತಾತ್ಮರಿಗೆ ಅಪಮಾನ ಮಾಡಿದಂತಾಗುತ್ತದೆ

ನೂರು ವರ್ಷಗಳ ಹಿಂದೆ ಪಾಶವೀ ಬಂಡವಾಳಶಾಹಿ ವ್ಯವಸ್ಥೆಯು ದುಡಿಯುವ ವರ್ಗದ ಯಾವುದೇ ಹಕ್ಕುಗಳನ್ನು ಮಾನ್ಯ ಮಾಡಿರಲಿಲ್ಲ. ಆದರೂ ಕೆಲಸದ ಅವಧಿಯನ್ನು 8 ಗಂಟೆಗೆ ನಿಯಮಿತಗೊಳಿಸುವ ಬೇಡಿಕೆಯ ಹೋರಾಟವು ಬಂಡವಾಳಶಾಹಿಯ ಆವಾಸಸ್ಥಾನವಾದ ಯುರೋಪು ಮತ್ತು ಅಮೇರಿಕದಲ್ಲಿ ಆಗಲೇ ಸ್ಪಷ್ಟ ರೂಪು ಪಡೆಯುತ್ತಿತ್ತು.

1866ರ ಆಗಸ್ಟ್‌ನಲ್ಲಿ ಅಮೇರಿಕದ ಬಾಲ್ಟಿಮೋರ್‌ನಲ್ಲಿ ನಡೆದ ದುಡಿಯುವ ಜನತೆಯ ಅಧಿವೇಶನವೊಂದರಲ್ಲಿ ಎಂಟು ಗಂಟೆ ಕೆಲಸವನ್ನು ಒತ್ತಾಯಿಸಿ ಗೊತ್ತುವಳಿಯನ್ನು ಅನುಮೋದಿಸಲಾಗಿತ್ತು. ಮಾರ್ಕ್ಸ್‌ರವರು ಸ್ಥಾಪಿಸಿದ ಮೊದಲನೇ ಅಂತರರಾಷ್ಟ್ರೀಯದ ಜಿನೇವಾ ಮಹಾಧಿವೇಶನ, "ದಿನ ದಿನದ ದುಡಿಯುವ ಅವಧಿಯ ಮೇಲೆ ಕಾನೂನುಬದ್ಧ ಮಿತಿಯನ್ನು ನಿರ್ಧರಿಸದೆ ದುಡಿಯುವ ಜನತೆಯ ವಿಮೋಚನೆ ಮತ್ತು ಇನ್ನಿತರ ಸೌಲಭ್ಯಗಳ ಸಾಧನೆಯ ಪ್ರಯತ್ನ ನಿಷ್ಪ್ರಯೋಜಕ. ಈ ಅಧಿವೇಶನವು ದುಡಿಯುವ ಅವಧಿಯನ್ನು 8 ಗಂಟೆಗೆ ಕಾನೂನುಬದ್ಧಗೊಳಿಸಬೇಕೆಂದು ಆಗ್ರಹಪಡಿಸುತ್ತದೆ." ಎಂದು ಒತ್ತಾಯಿಸಿತು.

ಐಕ್ಯವೇದಿಕೆ

ದುಡಿಯುವ ವರ್ಗದ ಎರಡು ವಿಭಾಗಗಳು ಏಕಕಾಲದಲ್ಲಿ ಒಂದೇ ಬೇಡಿಕೆಯನ್ನು ಮುಂದಿಟ್ಟ

ಮೇ ದಿನದ ಶತಮಾನೋತ್ಸವದ ಈ ಸಂದರ್ಭದಲ್ಲಿ ದೇಶದ ಐಕ್ಯತೆ ಸಮಗ್ರತೆ ಕಾಪಾಡಲು, ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಮುರಿದು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ವಿಸ್ತರಿಸಲು ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಪ್ರಯತ್ನವನ್ನು ಸೋಲಿಸಲು ಮತ್ತು ಅಂತರರಾಷ್ಟ್ರೀಯ ಶಾಂತಿಗಾಗಿ ಹೋರಾಡಲು ದೇಶದ ಕಾರ್ಮಿಕವರ್ಗ ಪಣತೊಡಬೇಕಾಗಿದೆ.

ಐಕ್ಯತೆಯಿಂದ, ಸಖ್ಯತೆಯಿಂದ ಕೂಡಿದ ಸಾರ್ವತ್ರಿಕ ಹೋರಾಟಕ್ಕೆ ವೇದಿಕೆಯೊಂದನ್ನು ರೂಪಿಸುತ್ತಿದ್ದವು. ಜಿನೇವಾ ಮಹಾಧಿವೇಶನದ ಗೊತ್ತುವಳಿಯಲ್ಲಿ ಈ ಅಂಶವನ್ನು ಸ್ಪಷ್ಟಪಡಿಸಲಾಗಿದೆ. "ಈ ಬೇಡಿಕೆಯು ಉತ್ತರ ಅಮೆರಿಕದ ಸಂಯುಕ್ತ ಸಂಸ್ಥಾನದ ಕಾರ್ಮಿಕರೆಲ್ಲರ ಬೇಡಿಕೆಯನ್ನು ಪ್ರತಿನಿಧಿಸುತ್ತಿದ್ದು ಜಾಗತಿಕ ಕಾರ್ಮಿಕರೆಲ್ಲರ ಸಾರ್ವತ್ರಿಕ ವೇದಿಕೆಯಾಗಿ ಈ ಬೇಡಿಕೆಯನ್ನು ಪರಿವರ್ತಿಸಲು ಮಹಾಧಿವೇಶನವು ಇಚ್ಛಿಸುತ್ತದೆ" ಹೀಗೆ ಕ್ರಿಯಾತ್ಮಕವಾದ ಅಂತರರಾಷ್ಟ್ರೀಯ ವೇದಿಕೆಯು ಪ್ರಾರಂಭಗೊಂಡಿತು.

ಆದರೆ ಇದು ಮಹಾನ್ ಹೋರಾಟವೊಂದರ ಆರಂಭದ ಘಟ್ಟವಾಗಿತ್ತಷ್ಟೆ. 1866—86ರ ನಡುವೆ ಸಮರಶೀಲ ಸಂಪ್ರದಾಯಗಳ ಮೇದಿನಾಚರಣೆಯ ಉದಯದೊಂದಿಗೆ ದುಡಿಯುವ ವರ್ಗದ ಚಳುವಳಿಯು ಭೀಕರ ಹತ್ಯೆ, ದಬ್ಬಾಳಿಕೆಗಳನ್ನು ಎದುರಿಸಬೇಕಾಯಿತು. ಆದಾಗ್ಯೂ ಅದು ಯಶಸ್ವೀ ಮುನ್ನಡೆ ಸಾಧಿಸಿತ್ತು. ಅಲ್ಲದೆ ಮಾರ್ಕ್ಸ್—ಎಂಗೆಲ್ಸ್ ಮತ್ತು ಅವರುಗಳು ಸ್ಥಾಪಿಸಿದ ದುಡಿಯುವವರ ಅಂತರರಾಷ್ಟ್ರೀಯಗಳಂತ ನೆಚ್ಚಬಹುದಾದ ಮಾರ್ಗದರ್ಶಿಗಳನ್ನು ಪಡೆಯಿತು. ಮೊದಲನೆ ಅಂತರರಾಷ್ಟ್ರೀಯದ ಚಟುವಟಿಕೆಯು ಪ್ಯಾರಿಸ್ ಕಾರ್ಮಿಕರ ಬಂಡಾಯದಲ್ಲಿ ಮತ್ತು ಪ್ಯಾರಿಸ್ ಕಮ್ಯೂನ್‌ನ—ಕಾರ್ಮಿಕ ವರ್ಗದ ಪ್ರಪ್ರಥಮ ರಾಜ್ಯ (1871)—ಸ್ಥಾಪನೆಯಲ್ಲಿ ಪರಾಕಾಷ್ಠೆಯನ್ನು ಮುಟ್ಟಿತು, ಇದರೊಂದಿಗೆ ಕಮ್ಯೂನಿಸ್ಟರ ಭೀಕರ ಹತ್ಯೆ ನಡೆದುದಲ್ಲದೆ, ಯೂರೋಪಿನಾದ್ಯಂತ ತೀವ್ರ ದಬ್ಬಾಳಿಕೆಗಳು ಪ್ರಾರಂಭಗೊಂಡವು. ಪರಿಣಾಮವಾಗಿ ಕಾರ್ಮಿಕರ ನಡುವೆ ಅಂತರರಾಷ್ಟ್ರೀಯ ಸಖ್ಯತೆ ಮತ್ತು ಐಕ್ಯತೆಯನ್ನು ಬೆಸೆದ ಮೊದಲನೆ ಸಂಘಟನೆಯು ತನ್ನ ಅಂತ್ಯ ಕಂಡಿತು.

ಆದರೆ ದುಡಿಯುವ ವರ್ಗದ ಚಳುವಳಿಯನ್ನು ಸಂಪೂರ್ಣವಾಗಿ ದಮನ ಮಾಡಲಾಗಲಿಲ್ಲ. 1884ರ ಅಕ್ಟೋಬರ್‌ನಲ್ಲಿ ನಡೆದ ಅಮೆರಿಕ ಮತ್ತು ಕೆನಡಾದ ಸಂಘಟಿತ ಉದ್ಯೋಗಗಳು ಮತ್ತು ಲೇಬರ್ ಯೂನಿಯನ್‌ಗಳ ಒಕ್ಕೂಟದ ಅಧಿವೇಶನದಲ್ಲಿ 1886 ಮೇ ಒಂದರಿಂದ ದುಡಿಯುವ ವೇಳೆಯು 8 ಗಂಟೆಯಿರಬೇಕೆಂದು ನಿರ್ಧರಿಸಲಾಯಿತು.

ಈ ಗೊತ್ತುವಳಿಯಲ್ಲಿ ಮೇ ಒಂದರಂದು ಮುಷ್ಕರಕ್ಕೂ ನೀಡಿದ್ದರಿಂದಾಗಿ ಅಂದಿನಿಂದ ಮೇ ದಿನದ ಸಮರಶೀಲ ಮುಷ್ಕರಗಳ ಪರಂಪರೆಯು ಪ್ರಾರಂಭವಾಗಿದೆ. 1886 ಮೇ ಹೊತ್ತಿಗೆ ಸಾವಿರಾರು ಕಾರ್ಮಿಕರು ಮತ್ತು ಅಸಂಖ್ಯಾತ ಸಂಘಟನೆಗಳು 8 ಗಂಟೆಗಳ ಕೆಲಸದ ಅವಧಿಯ ಬೇಡಿಕೆಗಾಗಿ ಹೋರಾಡಲು ಸಿದ್ಧವಾಗಿದ್ದುವು.

ಚಿಕಾಗೋ ಮುಷ್ಕರ

ಸಹಸ್ರಾರು ಕಾರ್ಮಿಕರು ನೇರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಚಿಕಾಗೋ ಮುಷ್ಕರವು ಅತ್ಯಂತ ಸಮರಶೀಲವಾಗಿತ್ತು. ಅಮೆರಿಕದ ಬಂಡವಾಳಶಾಹಿ ಸರ್ಕಾರ ಮತ್ತು ಮಾಲೀಕರು ಕಾರ್ಮಿಕರ ವಿರುದ್ಧ ಪ್ರತಿಕ್ರಮ ಕೈಗೊಳ್ಳಲು ನಿರ್ಧರಿಸಿದರು.

ಮೇ 3 ರಂದು ಕಾರ್ಮಿಕರ ವಿರುದ್ಧದ ಪೋಲಿಸರ ಕಾರ್ಯಾಚರಣೆಯ ವಿರುದ್ಧ ಪ್ರತಿಭಟಿಸಲು ಮೇ 4 ರಂದು ಏರ್ಪಡಿಸಿದ್ದ ಪ್ರತಿಭಟನಾ ಪ್ರದರ್ಶನದಲ್ಲಿ ಬಂಡವಾಳಗಾರರ ಏಜೆಂಟರು ಗೂಂಡಾಗಳು ಬಾಂಬ್ ಸಿಡಿಸುವುದರ ಮೂಲಕ ಕಾರ್ಮಿಕರ ನಾಯಕರುಗಳಿಗೆ ಮಸಿ ಬಳಿಯಲು ಮತ್ತು ಆರೋಪ ಹೊರಿಸಲು ಪ್ರಯತ್ನಿಸಿದರು. 'ಹೇಮಾರುಕಟ್ಟೆ ಪ್ರಕರಣ'ವೆಂದು ಪ್ರಚಲಿತವಾಗಿರುವ ಮೇ 3, ಮತ್ತು 4ರ ಘಟನೆಗಳು ಮೇ ಮುಷ್ಕರದ ಪ್ರತಿಫಲನವಾಗಿವೆ. ಮೇ 3 ರಂದು ಮುಷ್ಕರ ನಿರತ ಕಾರ್ಮಿಕರ ಸಭೆಯೊಂದರ ಮೇಲೆ ಪೋಲಿಸರು ಭೀಕರ ಹಲ್ಲೆಯನ್ನು ನಡೆಸಿ ಆರು ಜನ ಕಾರ್ಮಿಕರು ಸತ್ತು ಹಲವಾರು ಜನ ಗಾಯ

ಮಾರ್ಕ್ಸ್ ನನ್ನ ಜೊತೆಗಿದ್ದಿದ್ದರೆ

—ಮೇ ದಿನದ ಬಗ್ಗೆ ಎಂಗೆಲ್ಸ್

"....ಸಮಸ್ತ ಯೂರೋಪ್ ಹಾಗೂ ಅಮೆರಿಕಾದ ಕಾರ್ಮಿಕವರ್ಗ ತನ್ನ ಶಕ್ತಿಸಾಮರ್ಥ್ಯಗಳ ಪರಾಮರ್ಶೆ ನಡೆಸುತ್ತಿದೆ. ಮೊತ್ತಮೊದಲಬಾರಿಗೆ ಅದು ಒಂದು ಸೇನೆಯಾಗಿ ಒಂದು ಬಾವುಟದಡಿ ಒಂದು ತಕ್ಷಣದ ಉದ್ದೇಶಕ್ಕಾಗಿ-ದುಡಿಯುವ ಜನರ ಅಂತರರಾಷ್ಟ್ರೀಯದ ಜಿನೇವಾ ಸಮ್ಮೇಳನ ಒತ್ತಾಯಿಸಿದಂತೆ, ನಂತರ ಪ್ಯಾರಿಸ್ಸಿನಲ್ಲಿ 1889ರಲ್ಲಿ ನಡೆದ ಅಂತರರಾಷ್ಟ್ರೀಯ ಸಮಾಜವಾದೀ ಕಾಂಗ್ರೆಸ್ ಮತ್ತೊಮ್ಮೆ ಒತ್ತಾಯಿಸಿದಂತೆ 8 ಗಂಟೆಯ ದುಡಿಯುವ ದಿನದ ಕಾನೂನನ್ನು ರೂಪಿಸಬೇಕು ಎಂಬ ಉದ್ದೇಶಕ್ಕಾಗಿ-ಹೋರಾಡುತ್ತಿದೆ. ನಾವೀಗ ನೋಡುತ್ತಿರುವ ದೃಶ್ಯ ಎಲ್ಲಾ ದೇಶಗಳ ಕಾರ್ಮಿಕರು ಪ್ರತಿಯೊಂದು ಅರ್ಥದಲ್ಲಿಯೂ ಒಗ್ಗಟ್ಟಾಗಿದ್ದರೆ ಎಂಬುದನ್ನು ಎಲ್ಲಾ ದೇಶಗಳ ಬಂಡವಾಳಶಾಹಿಗಳು ಹಾಗೂ ಭೂಮಾಲೀಕರು ಅರಿತುಕೊಳ್ಳುವಂತೆ ಮಾಡಿದೆ. ಇದನ್ನು ನೋಡಲು ಮಾರ್ಕ್ಸ್ ನನ್ನ ಜೊತೆಗಿದ್ದಿದ್ದರೆ !....."

—ಫ್ರೆಡರಿಕ್ ಎಂಗೆಲ್ಸ್
ಮೇ 1, 1890 ಕಮ್ಯುನಿಸ್ಟ್
ಮ್ಯಾನಿಫೆಸ್ಟೋದ ನಾಲ್ಕನೇ ಜರ್ಮನ್
ಆವೃತ್ತಿಯ ಮುನ್ನುಡಿಯಲ್ಲಿ

ಗೊಂಡಿದನ್ನು ಪ್ರತಿಭಟಿಸಲು ಮೇ 4 ರಂದು ಹೇ ಮಾರುಕಟ್ಟೆ ಚೌಕದಲ್ಲಿ ಸಭೆಯನ್ನು ಕರೆಯಲಾಗಿತ್ತು. ಸಭೆಯು ಶಾಂತವಾಗಿದ್ದರೂ ಪೋಲಿಸರು ಅಪ್ರಚೋದಿತ ಧಾಳಿಯನ್ನು ಮಾಡಿದರು. ಸಭೆಯ ಮೇಲೆ ಬಾಂಬೊಂದನ್ನು ಎಸೆದು ಪೋಲಿಸ್ ಸಾರ್ಜೆಂಟ್‌ನೊಬ್ಬನು ಮೃತಪಟ್ಟನು. ಪರಿಣಾಮವಾಗಿ ನಡೆದ ಘರ್ಷಣೆಯಲ್ಲಿ ಏಳು ಜನ ಪೋಲಿಸರು ನಾಲ್ಕು ಜನ ಕಾರ್ಮಿಕರು ಮಡಿದರು. ಕಾರ್ಮಿಕರ ಈ ರಕ್ತ ದೋಕುಳಿಯಾಟದಿಂದ ಆಳುವವರು ತಣಿಯಲಿಲ್ಲ. ಕಾರ್ಮಿಕ ಮುಂದಾಳುಗಳಾದ ಪಾರಸನ್ಸ್ ಸ್ಪೈಸ್ಲಿಸ್, ಫಿಷರ್ ಮತ್ತು ಎಂಜೆಲ್‌ರನ್ನು ಸುಳ್ಳು ಮೊಕದ್ದಮೆಯಲ್ಲಿ ಸಿಲುಕಿಸಿ ಗಲ್ಲುಗಂಬಕ್ಕೇರಿಸಿದರು. ಮತ್ತು ಇನ್ನಿತರ ಸಮರಶೀಲ ಕಾರ್ಮಿಕರನ್ನು ದೀರ್ಘಾವಧಿಯ ಕಾರಾಗೃಹಕ್ಕೆ ತಳ್ಳಿದರು.

ಕಾರ್ಮಿಕರ ಶೋಷಣೆಯ ಅವಧಿಯನ್ನು 8 ಗಂಟೆಗಳಿಗೆ ಮಿತಿಗೊಳಿಸಲು ಪ್ರಯತ್ನಿಸಿದ್ದಕ್ಕಾಗಿ ಬಂಡವಾಳಶಾಹಿ ನ್ಯಾಯ ದೇವತೆಯು 4 ಜನ ಕಾರ್ಮಿಕ ನಾಯಕರ ಪ್ರಾಣವನ್ನು ಬಲಿ ತೆಗೆದುಕೊಂಡಿತು. ಹೀಗೆ ಮೇ ದಿನ ಸಮರಶೀಲ ಪರಂಪರೆ, ಕ್ರಾಂತಿಕಾರಿ ತ್ಯಾಗದ ಪರಂಪರೆ ಪ್ರಾರಂಭಗೊಂಡಿತು

ಕಾರ್ಮಿಕ ವರ್ಗದ ನಾಯಕರುಗಳು ಗಲ್ಲುಗಂಬವನ್ನು ವಿರೋಚಿತವಾಗಿ ಏರಿ ಎತ್ತಿದ ಧ್ವನಿಯಲ್ಲಿ ಜಗತ್ತಿಗೆ ಸಾರಿ ಹೇಳಿದರು. "ಜನತೆಯ ದನಿ ಅಮರ"

ಸ್ವಾಭಾವಿಕವಾಗಿಯೇ ಅಮೆರಿಕನ್ ಕಾರ್ಮಿಕರ ಬಲಿದಾನವು ದುಡಿಯುವ ವರ್ಗದ ಅಂತರ ರಾಷ್ಟ್ರೀಯ ಚಳುವಳಿಗೆ ನಾಂದಿ ಹಾಡಿತು. ಎರಡನೆ ಅಂತರ ರಾಷ್ಟ್ರೀಯವು ಮೇ ದಿನಾಚರಣೆಯನ್ನು ಅಂತರ ರಾಷ್ಟ್ರೀಯ ಕಾರ್ಮಿಕ ದಿನವನ್ನಾಗಿಸುವ ಗೊತ್ತುವಳಿಯನ್ನು ಅಂಗೀಕರಿಸಿತು. ನಿಗದಿತ ದಿನದಂದು ಜಗತ್ತಿನಾದ್ಯಂತ ತಮ್ಮ ದೇಶದ ಪರಿಸ್ಥಿತಿಗನುಗುಣವಾಗಿ ಕಾರ್ಮಿಕರು ಪ್ರತಿಭಟನೆ ನಡೆಸಬೇಕೆಂದು ಕರೆನೀಡಿತು. ಅಂತೆಯೇ ಅಮೆರಿಕ ಮತ್ತು ಯುರೋಪಿನ ಹಲವಾರು ದೇಶಗಳಲ್ಲಿ ದಿನಾಚರಣೆಯನ್ನು ನಡೆಸಿ ಎರಡು ಖಂಡಗಳಲ್ಲೂ ಹಮ್ಮಿಕೊಂಡ ಕಾರ್ಮಿಕ ವರ್ಗದ ಮೊದಲ ಅಂತರ ರಾಷ್ಟ್ರೀಯ ಕಾರ್ಯಕ್ರಮವಾಗಿದೆ– ಮೇ ದಿನ.

1891ರಲ್ಲಿ ಬ್ರುಸ್ಸೆಲ್ಸಿನಲ್ಲಿ ನಡೆದ ಮುಂದಿನ ಅಧಿವೇಶನದಲ್ಲೂ .ದೇಶಗಳ ನಡುವೆ ಶಾಂತಿ ಮತ್ತು 8 ಗಂಟೆಗಳ ಕೆಲಸದ ಅವಧಿಯನ್ನು ಒತ್ತಾಯಿಸಿ ಮೇ ದಿನಾಚರಣೆ ನಡೆಸಲು ಕರೆ ನೀಡಲಾಯಿತು. ಶಾಂತಿಯಿಲ್ಲದೆ ಅಂತರಾಷ್ಟ್ರೀಯಕಾರ್ಮಿಕ ಸಖ್ಯತೆ ಅರ್ಥಹೀನವೆಂದು ಕಾರ್ಮಿಕವರ್ಗಕ್ಕೆ ಮನವರಿಕೆಯಾಗಿತು. ಫ್ರಾನ್ಸ್—ಜರ್ಮನಿಯ ಯುದ್ಧ ಕುರಿತಂತೆ ಕಾರ್ಲ್ ಮಾರ್ಕ್ಸ್‌ರವರ ನೇತೃತ್ವದ ಮೊದಲನೆ ಅಂತರರಾಷ್ಟ್ರೀಯವು ಶಾಂತಿ ರಕ್ಷಣೆ ಮತ್ತು ಭ್ರಾತೃತ್ವಕ್ಕೆ ಕರೆ ನೀಡಿತು. ಈ ಮಹತ್ವದ ಕರೆಗೆ ಅನುಗುಣವಾಗಿ ಮೇಲಿನ ದೇಶಗಳ ಆಳುವ ವರ್ಗಗಳು ಯುದ್ಧದಲ್ಲಿ ನಿರತವಾಗಿದ್ದಾಗ ಪ್ಯಾರಿಸ್‌ನ ಕಾರ್ಮಿಕರು ಜರ್ಮನಿಯ ಕಾರ್ಮಿಕರಿಗೆ ಭ್ರಾತೃತ್ವದ ಶುಭ ಹಾರೈಕೆ ಕಳಿಸಿದರು.

ಸುಧಾರಣಾವಾದಿ ಬೆಳವಣಿಗೆ

ದುರದೃಷ್ಟವಶಾತ್ ಬ್ರಿಟನ್, ಜರ್ಮನಿ, ಅಮೇರಿಕ ಮತ್ತಿನ್ನಿತರ ದೇಶಗಳ ಸುಧಾರಣಾವಾದಿ ನಾಯಕರುಗಳಿಂದಾಗಿ ಮೇ ದಿನದ ಸಮರಶೀಲ ಸಂಪ್ರದಾಯಗಳು ಕಳೆಗುಂದಲಾರಂಭಿಸಿದವು.

ನೇ ಪುಟ ನೋಡಿ

ಮೇ ದಿನದ ಬಗ್ಗೆ ಲೆನಿನ್

"... ಎಂಟು ಗಂಟೆಯ ದುಡಿಯುವ ದಿನದ ಬೇಡಿಕೆ ಎಲ್ಲಾ ಕಾರ್ಮಿಕ ವರ್ಗದ ಬೇಡಿಕೆ. ಇದು ಕೆಲವು ಮಾಲಿಕರೆದುರು ಕೆಲವು ಕಾರ್ಮಿಕರು ಇಟ್ಟಿರುವ ಬೇಡಿಕೆಯಲ್ಲ. ಸದ್ಯದ ಸಮಸ್ತ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯ ಪ್ರತಿನಿಧಿಗಳಾದ ಪ್ರಭುತ್ವದ ಅಧಿಕಾರಿಗಳ ಸಮಸ್ತ ಬಂಡವಾಳಶಾಹೀ ವರ್ಗದ ಉತ್ಪಾದನಾ ಸಾಧನಗಳ ಒಡೆಯರ ಎದುರು ಇಟ್ಟಿರುವ ಬೇಡಿಕೆಯಿದು. ಇದು ಅಂತರರಾಷ್ಟ್ರೀಯ ಸಮಾಜವಾದೀ ಆಂದೋಲನದೊಂದಿಗೆ ಐಕ್ಯವಾಗುವ ಒಂದು ಘೋಷಣೆ. ಕಾರ್ಮಿಕರು ಈ ಬೇಡಿಕೆಯನ್ನು ಪುಕ್ಕಟೆ ರೈಲು ಟಿಕೇಟು, ಕಾವಲುಗಾರನ ವಜಾ ಮುಂತಾದ ಬೇಡಿಕೆಗಳ ಮಟ್ಟಕ್ಕೆ ಇಳಿಸದಂತೆ ಮಾಡಬೇಕಾದರೆ ಅವರು ಈ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳುವಂತೆ ಮಾಡಬೇಕು. ವರ್ಷವಿಡೀ ಕಾರ್ಮಿಕರು ಒಂದೆಡೆ ಒಮ್ಮೆ, ಇನ್ನೊಂದೆಡೆ ಇನ್ನೊಮ್ಮೆ ವಿಧ-ವಿಧವಾದ ಭಾಗಶಃ ಬೇಡಿಕೆಗಳನ್ನು ತಮ್ಮ ಮಾಲಿಕರ ಮುಂದಿಟ್ಟು ಅದಕ್ಕಾಗಿ ಹೋರಾಡುತ್ತಾರೆ. ಕಾರ್ಮಿಕರಿಗೆ ಈ ಹೋರಾಟಗಳಲ್ಲಿ ನೆರವು ನೀಡುವಾಗ ಸಮಾಜವಾದಿಗಳು ಸದಾ ಈ ಹೋರಾಟಗಳಿಗೂ ಎಲ್ಲಾ ದೇಶಗಳ ಕಾರ್ಮಿಕ ವರ್ಗದ ವಿಮೋಚನಾ ಹೋರಾಟಗಳಿಗೂ ಇರುವ ಸಂಬಂಧವನ್ನು ವಿವರಿಸಬೇಕು. ಮತ್ತು ಮೇದಿನ, ತಾವು ಈ ಸಂಬಂಧವನ್ನು ಅರಿತುಕೊಂಡಿದ್ದೇವೆ ಎಂದು ಕಾರ್ಮಿಕರು ಘೋಷಿಸುವ ಹಾಗೂ ದೃಢ ನಿರ್ಧಾರದಿಂದ ಈ ಹೋರಾಟದಲ್ಲಿ ಸೇರಿಕೊಳ್ಳುತ್ತೇವೆ ಎಂದು ಸಾರುವ ದಿನವಾಗಬೇಕು.

—ಲೆನಿನ್

ರಷ್ಯಾದ ಖಾರ್ಕೊವ್‌ನಲ್ಲಿ 1900ರ ಮೇ
ದಿನದ ಕರಪತ್ರದ ಮುನ್ನುಡಿಯಲ್ಲಿ

ಬಂಡವಾಳಶಾಹಿಯನ್ನು ತೊಡೆದುಹಾಕಿ ಸಮಾಜವಾದವನ್ನು ಸ್ಥಾಪಿಸುವಲ್ಲಿ ವರ್ಗಗಳ ಬಲಾಬಲಗಳನ್ನು ವಿಮರ್ಶಿಸುವ ದಿನವನ್ನಾಗಿ ಮೇ ದಿನವನ್ನು ಆಚರಿಸುವ ಬದಲು ಸಾರ್ವತ್ರಿಕ ರಜಾದಿನವನ್ನಾಗಿ ಪರಿವರ್ತಿಸಿದರು. ಅಂದು ಮುಷ್ಕರಳನ್ನು ನಡೆಸುವುದನ್ನು ಕೈಬಿಟ್ಟರು. ಅಲ್ಲದೆ ಅವರ ವರ್ಗ ಸಹಯೋಗ ನೀತಿಗನುಗುಣವಾಗಿ ಕ್ರಮೇಣ ಅಂತರರಾಷ್ಟ್ರೀಯ ದೃಷ್ಟಿಕೋನವನ್ನು ತ್ಯಜಿಸಿ ಸಾಮ್ರಾಜ್ಯಶಾಹಿ ಯುದ್ಧ ಕುರಿತಂತೆ ಪ್ರತಿಗಾಮಿ ನಿಲುವು ತೆಗೆದುಕೊಂಡರು. ಪರಿಣಾಮವಾಗಿ ಮೊದಲನೆ ಜಾಗತಿಕಯುದ್ಧ ಪ್ರಾರಂಭವಾದಾಗ ಅದನ್ನು ವಿರೋಧಿಸಿ ಕಾರ್ಮಿಕರ ಅಂತರರಾಷ್ಟ್ರೀಯ ಐಕ್ಯತೆಯನ್ನು ಬಲಪಡಿಸುವುದರ ಬದಲು ಸಾಮ್ರಾಜ್ಯಶಾಹಿ ಆಳುವ ವರ್ಗಗಳನ್ನು, ಅವರ ಯುದ್ಧವನ್ನು ಬೆಂಬಲಿಸಿದರು. ಆದರೆ ರಷ್ಯಾದ ಲೆನಿನ್‌ರ ನೇತೃತ್ವದ ಬಾಲ್ಶೆವಿಕ್ ಪಕ್ಷ ಮತ್ತು ಜರ್ಮನಿಯ ರೋಸ ಲಕ್ಸೆಂಬರ್ಗ್ ನೇತೃತ್ವದ ಕ್ರಾಂತಿಕಾರಿ ಪಕ್ಷ ಅಂತರರಾಷ್ಟ್ರೀಯತೆಯನ್ನು ಎತ್ತಿ ಹಿಡಿದು ಯುದ್ಧವನ್ನು ವಿರೋಧಿಸಿದವು. ಮೇ ದಿನದ ಸಮರಶೀಲ ಪರಂಪರೆಯನ್ನು ಕೇವಲ ಕಮ್ಯೂನಿಸ್ಟರು ಮತ್ತು ಕ್ರಾಂತಿಕಾರಿ ಕಾರ್ಮಿಕ ಸಂಘಗಳು ಮುಂದುವರಿಸಿಕೊಂಡು ಬಂದವು ಮತ್ತು ಫ್ಯಾಸಿಸ್ಟ್ ವಿರೋಧಿ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಆದರೆ ಇದೇ ಸಮಯದಲ್ಲಿ ಕಾರ್ಮಿಕ ವರ್ಗದ ಸಿದ್ಧಾಂತ ಮತ್ತು ಸಮಾಜವಾದಿ ಕ್ರಾಂತಿ ರಷ್ಯಾದ ಮತ್ತು ಇನ್ನಿತರ ಖಂಡಗಳ ಹಲವಾರು ದೇಶಗಳಿಗೆ ಹರಡಿತು. ಈ ದೇಶಗಳು ಮೇ ದಿನದ ಸಮರಶೀಲ ಪರಂಪರೆಯನ್ನು ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಜೀವಂತವಾಗಿಟ್ಟವು. ಪರಿಣಾಮವಾಗಿ ಜಾಗತಿಕ ಮಹತ್ವದ ಚೀನೀ ಕ್ರಾಂತಿ ನಂತರ ಕೊರಿಯಾ, ವಿಯಟ್ನಾಂ, ಪೂರ್ವ ಯೂರೋಪಿನ ಹಲವಾರು ದೇಶಗಳಲ್ಲಿ ಕ್ರಾಂತಿ ಸಂಭವಿಸಿತು.

ನಮ್ಮ ಮುಂದಿರುವ ಗುರಿ

ಮೇ ದಿನದ ಶತಮಾನೋತ್ಸವದ ಈ ಸಂದರ್ಭದಲ್ಲಿ ಹುತಾತ್ಮರ ಮಹತ್ತರ ತ್ಯಾಗ ಬಲಿದಾನಗಳನ್ನು ಮತ್ತು ಕಾರ್ಮಿಕ ವರ್ಗದ ಮಹತ್ತರ ಸಾಧನೆಗಳನ್ನು ನೆನೆಯುತ್ತ ನಮ್ಮ ದೇಶವನ್ನು ಸಮಾಜವಾದದತ್ತ ಕೊಂಡೊಯ್ಯುವ ನಮ್ಮ ಪ್ರಯತ್ನವನ್ನು ತೀವ್ರಗೊಳಿಸಬೇಕಾಗಿದೆ. ನಮ್ಮ ದೇಶದ ಮೇ ದಿನಾಚರಣೆಯಲ್ಲೂ ಸುಧಾರಣಾವಾದಿ ಗುಣಗಳು ಕಂಡು ಬರುತ್ತಿವೆ. ಪ್ರಜಾಪ್ರಭುತ್ವ, ರಾಷ್ಟ್ರೀಯ ಐಕ್ಯತೆ ಮತ್ತು ಸಾಮ್ರಾಜ್ಯಶಾಹಿ ಪಿತೂರಿಗಳಿಗೆ ಮಹತ್ವ ನೀಡಲಾಗುತ್ತಿಲ್ಲ. ಕೇವಲ ತಾತ್ಕಾಲಿಕ ಬೇಡಿಕೆಗಳಿಗಾಗಿ ಶತಮಾನೋತ್ಸವವನ್ನು ಐಕ್ಯ ಮೇದಿನಾಚರಣೆಯನ್ನಾಗಿ ಆಚರಿಸಿದರೆ ನಿಜಕ್ಕೂ ಚಿಕಾಗೋ ಹುತಾತ್ಮರಿಗೆ ಅಪಮಾನ ಮಾಡಿದಂತಾಗುತ್ತದೆ.

ಈ ವರ್ಷದ ಮೇ ದಿನದಂದು ಜಾಗತಿಕ ಶಾಂತಿ ಮತ್ತು ಸಮಾಜವಾದಿ ವ್ಯವಸ್ಥೆಯ ವಿರುದ್ಧ ಸಾಮ್ರಾಜ್ಯಶಾಹಿಯ ಪಿತೂರಿ ಕುರಿತಂತೆ ಇಡೀ ಕಾರ್ಮಿಕ ವರ್ಗ ಹೋರಾಟಕ್ಕಿಳಿಯುವಂತೆ ಮಾಡಬೇಕಾಗಿದೆ ಸೋವಿಯತ್ ಒಕ್ಕೂಟದ ವಿರುದ್ಧ ಯುದ್ಧ ಹೂಡುವುದರೊಂದಿಗೆ ಸಮಾಜವಾದಿ ಸಾಧನೆಗಳನ್ನು ಹಾಳುಗೆಡಹುವ ಮತ್ತು ಹೊಸದಾಗಿ ವಿಮೋಚನೆಗೊಂಡ ದೇಶಗಳ ಕಾರ್ಮಿಕರನ್ನು ಪುನಃ ಗುಲಾಮರನ್ನಾಗಿ ಮಾಡಿಕೊಳ್ಳುವ ಪಿತೂರಿಯಿದೆ. ನೂರು ವರ್ಷಗಳ ಕಾರ್ಮಿಕ ವರ್ಗದ ಸಾಧನೆಯನ್ನು ನುಚ್ಚುನೂರು ಮಾಡುವ ದುರಾಲೋಚನೆಯಿದೆ.

ದೇಶವು ಎದುರಿಸುತ್ತಿರುವ ಅಪಾಯಕಾರಿ ಪರಿಸ್ಥಿತಿಯನ್ನು ಕಾರ್ಮಿಕವರ್ಗ ಮರೆತರೆ ತನ್ನ ಚಾರಿತ್ರಿಕ ಕರ್ತವ್ಯದಿಂದ ವಿಮುಖವಾದಂತಾಗುತ್ತಿದೆ. ದೇಶದಲ್ಲಿ ಪ್ರಜಾಪ್ರಭುತ್ವವು ಅಪಾಯದಲ್ಲಿವೆ. ಆಡಳಿತ ವರ್ಗ ಅನುಸರಿಸುತ್ತಿರುವ ಆರ್ಥಿಕ ನೀತಿಯು ದೇಶವನ್ನು ಅಪಾಯದ ಅಂಚಿಗೆ ತಳ್ಳುತಿದೆ. ಸಾಮ್ರಾಜ್ಯಶಾಹಿ ಪಿತೂರಿಗಾರರು ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಛಿದ್ರಗೊಳಿಸಲು ಮತ್ತು ಜಾತೀಯ ಶಕ್ತಿಗಳು ಕಾರ್ಮಿಕವರ್ಗವನ್ನು ಒಡೆಯಲು ಯತ್ನಿಸುತ್ತಿವೆ.

ಮೇ ದಿನದ ಶತಮಾನೋತ್ಸವದ ಈ ಸಂದರ್ಭದಲ್ಲಿ ದೇಶದ ಐಕ್ಯತೆ–ಸಮಗ್ರತೆ ಕಾಪಾಡಲು, ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಮುರಿದು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ವಿಸ್ತರಿಸಲು ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ದಕ್ಕೆ ತರುವ ಪ್ರಯತ್ನವನ್ನು ಸೋಲಿಸಲು ಮತ್ತು ಅಂತರರಾಷ್ಟ್ರೀಯ ಶಾಂತಿಗಾಗಿ ಹೋರಾಡಲು ದೇಶದ ಕಾರ್ಮಿಕ ವರ್ಗ ಪಣತೊಡಬೇಕಾಗಿದೆ.

ಮೇ ದಿನದ ಪ್ರಣಾಳಿಕೆ

ಕಾರ್ಮಿಕ ವರ್ಗದ ನೂರು ವರ್ಷಗಳ ಅನುಭವ ಭಾರತದ ಕಾರ್ಮಿಕ ವರ್ಗಕ್ಕೆ ತನ್ನ ಕಾರ್ಯಾಚರಣೆ ಹಾಗೂ ಹೋರಾಟಗಳನ್ನು ಪರಾಮರ್ಶಿಸಿ ಅಂತರ್ರಾಷ್ಟ್ರೀಯ ಆಂದೋಲನದ ಕ್ರಾಂತಿಕಾರಿ ಪರಂಪರೆಗಳಿಗೆ ಅನುಗುಣವಾಗಿದೆಯೇ ಎಂದು ಪರೀಕ್ಷಿಸಲು ಕರೆ ನೀಡುತ್ತದೆ.

ಅಂತರ್ರಾಷ್ಟ್ರೀಯ ಆಂದೋಲನಕ್ಕೆ ಸಂಬಂಧಪಟ್ಟಂತೆ ತನ್ನ ತಕ್ಷಣದ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವಷ್ಟು ಕಾರ್ಮಿಕ ವರ್ಗದ ಪ್ರಜ್ಞೆ ಉನ್ನತಗೊಂಡಿದೆಯೇ ಎಂಬುದನ್ನು ಪರೀಕ್ಷಿಸಬೇಕೆಂದು ಭಾರತದ ಕಾರ್ಮಿಕ ವರ್ಗಕ್ಕೆ ಈ ಶತಮಾನೋತ್ಸವ ಕರೆ ನೀಡುತ್ತದೆ.

ಎರಡನೇ ಮಹಾಯುದ್ಧದ ನಂತರ ಸಮಾಜವಾದಿ ಜಗತ್ತು
ಶೇ. ೩೦.೬ ರಷ್ಟು ಪ್ರದೇಶ
ಶೇ. ೩೩ ರಷ್ಟು ಜನಸಂಖ್ಯೆಯನ್ನು ಆವರಿಸಿದೆ.
ಜಗತ್ತಿನ ಕೈಗಾರಿಕಾ ಉತ್ಪಾದನೆಯ
ಶೇ. ೪೦ ರಷ್ಟನ್ನು ಉತ್ಪಾದಿಸುತ್ತದೆ.

ರಷ್ಯಾದ ಪ್ರಥಮ ಬೂರ್ಜ್ವಾ ಕ್ರಾಂತಿ

ಝಾರ್‌ಶಾಹೀ ರಶ್ಯಾ. ತೀವ್ರ ದಬ್ಬಾಳಿಕೆ, ಶೋಷಣೆಯಿಂದ ಜನ ಜರ್ಝರಿತರಾಗಿದ್ದರು. ಆದರೂ ಝಾರನ ಬಗ್ಗೆ ಇನ್ನೂ ವಿಶ್ವಾಸವಿತ್ತು. ತಮ್ಮ ಅಹವಾಲು ತೋಡಿಕೊಂಡರೆ ಝಾರ್ ಕೇಳಬಹುದೆಂಬ ನಿರೀಕ್ಷೆ. 1905 ಜನವರಿ 9 ಭಾನುವಾರ ಪಿಟರ್ಸ್ ಬರ್ಗ್‌ನ ಕಾರ್ಮಿಕರು ತಮ್ಮ ಸಂಕಷ್ಟಗಳ ಬಗ್ಗೆ ಒಂದು ಮನವಿಯನ್ನು ಝಾರ್‌ಗೆ ಅರ್ಪಿಸಲು ನಿರ್ಧರಿಸಿದರು. ತಮ್ಮ ತಮ್ಮ ಕಾರ್ಖಾನೆಗಳಿಂದ ಕಾರ್ಮಿಕರು, ಅವರ ಹೆಂಡಿರು, ಮಕ್ಕಳು ಝಾರ್‌ನ ಭಾವಚಿತ್ರಗಳನ್ನು ಹೊತ್ತು "ಚಳಿಗಾಲದ ಅರಮನೆ" ಯತ್ತ ಶಾಂತಿಯುತ ಮೆರವಣಿಗೆಯಲ್ಲಿ ಹೊರಟರು.

ಆದರೆ ಅರಮನೆಯಲ್ಲಿ ಅವರು ಕಂಡದ್ದು ಝಾರ್‌ರನ್ನಲ್ಲ. ಆಗಿನ 12 ಸಾವಿರ ಸಶಸ್ತ್ರ ಪೋಲೀಸರನ್ನು. ಅವರ ಅಮಾನುಷ ಗೋಲೀಬಾರನ್ನು. ಪೀಟರ್ಸ್‌ಬರ್ಗ್‌ನ ಬೀದಿಗಳು ಕಾರ್ಮಿಕರ ರಕ್ತದಿಂದ ತೊಯ್ದುಹೋದವು. 4600 ಮಂದಿ ಆಹುತಿಯಾದರು. ಜನವರಿ 9 "ಕರಾಳ ಭಾನುವಾರ" ವಾಯಿತು.

ಒಂದೇ ದಿನದಲ್ಲಿ ಝಾರ್‌ನ ಬಗೆಗಿದ್ದ ಭಕ್ತಿ ಮಾಯವಾಯಿತು. ಪೀಟರ್ಸ್ ಬರ್ಗ್‌ನ ಕಾರ್ಮಿಕ ವರ್ಗ ಝಾರ್‌ಶಾಹಿಯ ವಿರುದ್ಧ ಸಮರಸಾರಿತು. ಕೆಲವೇ ದಿನಗಳಲ್ಲಿ ಝಾರ್ ಸಾಮ್ರಾಜ್ಯದ ಉದ್ದಗಲವೂ ಕಾರ್ಮಿಕರ ಮುಷ್ಕರಗಳ ಸುದ್ದಿಗಳು. ಜನವರಿಯಲ್ಲಿ 5 ಲಕ್ಷ ಕಾರ್ಮಿಕರು ಮುಷ್ಕರಕ್ಕಿಳಿದರು. ಫೆಬ್ರವರಿಯಲ್ಲಿ 3 ಲಕ್ಷ ಕಾರ್ಮಿಕರು ಸೇರಿಕೊಂಡರು. ಮಾರ್ಚ್‌ನಲ್ಲಿ ಮತ್ತೆ 73 ಸಾವಿರ. ಏಪ್ರಿಲ್ 1905. ಬೋಲ್ಶೆವಿಕ್‌ರ 3ನೇ ಅಧಿವೇಶನದಲ್ಲಿ ಕಾರ್ಮಿಕರ ಸಶಸ್ತ್ರ ಬಂಡಾಯದ ನಿರ್ಣಯ.

"ಈ ವರ್ಷದ ಮೇದಿನ ನಮಗೆ ಜನತೆಯ ಬಂಡಾಯದ ಉತ್ಸವವಾಗಲಿ......." ಎಂದು ಕರೆಯಿತ್ತರು ಲೆನಿನ್. 2 ಲಕ್ಷ ಕಾರ್ಮಿಕರು ಮುಷ್ಕರ ನಡೆಸಿ 1905ರ ಮೇ ದಿನವನ್ನು ರಶ್ಯನ್ ಕಾರ್ಮಿಕ ವರ್ಗದ ಕ್ರಾಂತಿಕಾರೀ ಸೌಹಾರ್ದತೆಯನ್ನು ತೋರಿಸಿಕೊಟ್ಟ ಚಾರಿತ್ರಿಕ ದಿನವನ್ನಾಗಿಸಿದರು.

ದಿನಗಳೆಯುತ್ತಾ ಹೋದಂತೆ ಕಾರ್ಮಿಕ ವರ್ಗದ ಹಿಂದುಳಿದ ವಿಭಾಗಗಳೂ ಹೋರಾಟಕ್ಕಿಳಿಯಲಾರಂಭಿಸಿದವು.

ಮುಷ್ಕರ ಸಮಿತಿಗಳ ಬದಲು ಕಾರ್ಮಿಕ ಪ್ರತಿನಿಧಿಗಳ ಸೋವಿಯೆತ್‌ಗಳೆಂಬ ಚುನಾಯಿತ ಸಂಸ್ಥೆಗಳು ಸ್ಥಾಪನೆಗಳಾದವು. ಇವು ಭವಿಷ್ಯದ ಕಾರ್ಮಿಕರ-ರೈತರ ಸರಕಾರಗಳ ಆದಿರೂಪವಾಗಿತ್ತು. ಭಯಭೀತ ಝಾರ್‌ಶಾಹಿಯ ದಮನ ಮುಷ್ಕರಗಳನ್ನು ಇನ್ನಷ್ಟು ತೀವ್ರಗೊಳಿಸಿತು, ವ್ಯಾಪಕಗೊಳಿಸಿತು. ಮುಷ್ಕರಗಳು ಹೆಚ್ಚೆಚ್ಚು ರಾಜಕೀಯ ಸ್ವರೂಪ ಪಡೆಯಲಾರಂಭಿಸಿತು. ಸಶಸ್ತ್ರ ಹೋರಾಟಗಳಾಗಿ ಪರಿವರ್ತನೆಗೊಳ್ಳಲಾರಂಭಿಸಿದವು.

ಸೈನಿಕರ ನಡುವೆಯೂ ತೀವ್ರ ಪ್ರಚಾರ ಕಾರ್ಯದ ಫಲವಾಗಿ ಕಾರ್ಮಿಕರ ಹೋರಾಟಗಳ ಪರವಾಗಿ ಸೈನಿಕರು 1905 ರಲ್ಲಿ 34 ಕಾರ್ಯಾಚರಣೆಗಳನ್ನು ನಡೆಸಿದರು. ಒಡೆಸಾದ ಕಾರ್ಮಿಕರ ಮೇಲೆ ದಮನ ಕ್ರಮ ನಡೆಸಿದುದರ ವಿರುದ್ಧ "ಪೋಟೆಮ್ಕಿನ್" ಯುದ್ಧ ಹಡಗುಗಳ ನಾವಿಕರ ದಂಗೆ ಇಂತಹ ಒಂದು ಪ್ರಸಿದ್ಧ ಕಾರ್ಯಾಚರಣೆ.

1905 ಸೆಪ್ಟಂಬರ್. ಮಾಸ್ಕೋ ಕ್ರಾಂತಿಕಾರೀ ಹೋರಾಟದ ಕೇಂದ್ರವಾಗಲಾರಂಭಿಸಿತು. ಮಾಸ್ಕೋ ಕಾರ್ಮಿಕರ ಶ್ರಮದಿಂದಾಗಿ ಅಕ್ಟೋಬರ್‌ನಲ್ಲಿ ದೇಶವ್ಯಾಪೀ ಸಾರ್ವತ್ರಿಕ ಮುಷ್ಕರ. ಏಳು ಲಕ್ಷ ರೈಲ್ವೇ ಕಾರ್ಮಿಕರು ಹಾಗೂ ಇತರ ಎರಡು ಲಕ್ಷ ಜನ ಮುಷ್ಕರಕ್ಕಿಳಿದರು. ಹಲವಾರು ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕ ಪ್ರತಿನಿಧಿಗಳ ಸೋವಿಯೆತ್‌ಗಳ ರಚನೆ. ಝಾರ್‌ಶಾಹಿಯ ಯಾವ ದಮನ ಕ್ರಮವೂ ಕಾರ್ಮಿಕರ ಎದುರು ನಡೆಯಲಿಲ್ಲ.

ಪರಿಸ್ಥಿತಿ ಕೈಮೀರಿ ಹೋಗದಂತೆ ಝಾರ್ ತನ್ನ ವಿರೋಧಿಗಳಲ್ಲಿ ಒಡಕು ತರಲು ಯತ್ನಿಸಿದ. ಬೂರ್ಜ್ವಾವರ್ಗ, ಮಧ್ಯಮವರ್ಗ ಹಾಗೂ ಕಿರಿಬೂರ್ಜ್ವಾಗಳನ್ನು ಕಾರ್ಮಿಕ ವರ್ಗದಿಂದ ಪ್ರತ್ಯೇಕಿಸುವ ಒಂದು ಯೋಜನೆ ರೂಪಿಸಿದ. ಶಾಸನಾಧಿಕಾರವುಳ್ಳ ಪ್ರತಿನಿಧಿ ಸಭೆಯನ್ನು ರಚಿಸುವುದಾಗಿ ಘೋಷಿಸಿದ. ಕಾರ್ಮಿಕ ವರ್ಗದ ವೀರಾವೇಶದಿಂದ ಭಯಭೀತರಾಗಿದ್ದ ಬೂರ್ಜ್ವಾಗಳು, ಕಿರಿಬೂರ್ಜ್ವಾಗಳು ಇದನ್ನು ತಕ್ಷಣ ಬಾಚಿ ತಬ್ಬಿಕೊಂಡವು, ಕಾರ್ಮಿಕ ಆಂದೋಲನದಲ್ಲಿದ್ದ ಕೆಲವು ಸುಧಾರಣಾವಾದಿಗಳು ಗೊಂದಲದಲ್ಲಿ ಬಿದ್ದರು. ಇನ್ನೊಂದೆಡೆ ಕಾರ್ಮಿಕರ ವಿರುದ್ಧ ದಮನ ತೀವ್ರಗೊಳ್ಳುತ್ತಾ ಹೋಯಿತು.

ಡಿಸೆಂಬರ್ 1905. ಮಾಸ್ಕೋ ಕಾರ್ಮಿಕರು ಈ ದಮನಕ್ಕೆ ಉತ್ತರವಾಗಿ ಸಾರ್ವತ್ರಿಕ ರಾಜಕೀಯ ಮುಷ್ಕರ ನಡೆಸಲು ನಿರ್ಧರಿಸಿದರು.

ಡಿಸೆಂಬರ್ 7. ಅಭೂತಪೂರ್ವ ಐಕ್ಯತೆಯೊಂದಿಗೆ ಮುಷ್ಕರದ ಆರಂಭ. ಆಳುವ ವಲಯಗಳು ತುರ್ತು ಪರಿಸ್ಥಿತಿ ಘೋಷಿಸಿದವು. ಸೈನ್ಯಗಳಿಗೆ ಗೋಲೀಬಾರು ಮಾಡಲು ಆಜ್ಞೆ ನೀಡಲಾಯಿತು, ಮಾಸ್ಕೋದ ನಗರ ಬೀದಿಗಳಲ್ಲಿ ಸೈನ್ಯಗಳ ಕಾರ್ಯಾಚರಣೆಗೆ ಅಲ್ಲಿಯುಂಟು ಮಾಡುವ ಅಡ್ಡಗೋಡೆಗಳು ಬ್ಯಾರಿಕೇಡುಗಳು ಕಾಣಿಸಿಕೊಳ್ಳಲಾರಂಭಿಸಿದವು.

ಮಾಸ್ಕೋದ ಬೀದಿಗಳು 9 ದಿನಗಳ ಕಾಲ ಕ್ರಾಂತಿಕಾರಿ ಕಾರ್ಮಿಕರು ಹಾಗೂ ಝಾರ್‌ಶಾಹೀ ಸೈನ್ಯದ ನಡುವಿನ ಭೀಷಣ ಕದನದ ರಂಗವಾಗಿತ್ತು. ಕದನ ನಿಲ್ಲಿಸಿದ ಕಾರ್ಮಿಕರ ಸಶಸ್ತ್ರ ತುಕಡಿಯ ಕೊನೆಯ ಆಜ್ಞೆ ಹೀಗಿತ್ತು—

"ನಾವಿದನ್ನು ಆರಂಭಿಸಿದೆವು. ಕೊನೆಯವರೆಗೂ ನಡೆಸಿದೆವು.....

....ಭವಿಷ್ಯ ಕಾರ್ಮಿಕ ವರ್ಗಕ್ಕೆ ಸೇರಿದ್ದು. ಹೇಗೆ ಛಲದಿಂದ ಕೆಲಸ ಮಾಡಬೇಕೆಂದು ನಮ್ಮ ಅನುಭವದಿಂದ ಸಕಲ ದೇಶಗಳ ಬರಲಿರುವ ಪೀಳಿಗೆಗಳು ಕಂಡುಕೊಳ್ಳುತ್ತವೆ" ●

ಶ್ರೀಮಂತ ದೇಶಗಳ ಬಡತನ

1985, ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸಾಮಾಜಿಕ ಅಗತ್ಯಗಳಿಗಾಗಿ ಸರಕಾರೀ ಹಣ ವಿನಿಯೋಗದಲ್ಲಿ ಮತ್ತೆ ತೀವ್ರ ಕಡಿತವುಂಟಾಗಿದೆ. ಪರಿಣಾಮವಾಗಿ ಬಜೆಟ್‌ನಲ್ಲಿ ಶಿಕ್ಷಣ, ಆರೋಗ್ಯ ಮತ್ತು ಯುವ ಜನರು ಹಾಗೂ ವಯಸ್ಸಾದವರಿಗೆ ನೆರವು ಬಾಬ್ತುಗಳಲ್ಲಿ ತೀವ್ರ ಕಡಿತ. ಅವಲಂಬಿತ ಮಕ್ಕಳಿರುವ ಬಡ ಕುಟುಂಬಗಳಿಗೆ ಕೊಡುತ್ತಿದ್ದ ನೆರವನ್ನು ನಿಲ್ಲಿಸಿ 63.3 ಕೋಟಿ ಡಾಲರುಗಳನ್ನು ಉಳಿಸಲಾಗಿದೆ. 1979 ರಿಂದ 1983 ರ ನಡುವೆ ಬಡ ಜನರ ಸಂಖ್ಯೆ 84 ಲಕ್ಷ ಒಟ್ಟು ಹೆಚ್ಚಿದೆ.

FRG — 40 ಲಕ್ಷ ಜನ ಬಡತನದ ರೇಖೆಯ ಕೆಳಗಿದ್ದರೆ 1 ಲಕ್ಷ ಮನೆ-ಮಾರು ಇಲ್ಲದವರು.

ಪ್ಯಾರಿಸ್ಸಿನಲ್ಲಿ 1982 ರಲ್ಲಿ 8000 ಜನ ಮನೆಮಾರಿಲ್ಲದೆ ಬೀದಿ ಬೀದಿಗಳಲ್ಲಿ, ರೇಲ್ವೇ ನಿಲ್ದಾಣಗಳಲ್ಲಿ ವಾಸಿಸುತ್ತಿದ್ದರೆ, ಈಗ ಅದು 22 ಸಾವಿರಕ್ಕೇರಿದೆಯೆಂದು ಪಾಶ್ಚಿಮಾತ್ಯ ಅಂದಾಜುಗಳಿಂದ ತಿಳಿದು ಬಂದಿದೆ.

ಅಮೆರಿಕಾದಲ್ಲಿ ಹಿಂದಿನ ಎರಡು ಆರ್ಥಿಕ ಹಿಂಜರಿತಗಳಲ್ಲಿ ಪ್ರತಿ ಮೂವರು ನಿರುದ್ಯೋಗಿಗಳಲ್ಲಿ ಇಬ್ಬರಿಗೆ ನಿರುದ್ಯೋಗ ಸೌಲಭ್ಯ ದೊರೆತರೆ ಈಗ ಒಬ್ಬರಿಗೆ ಮಾತ್ರ ದೊರೆಯುತ್ತಿದೆ.

○

ಮಾನವ ಕುಲದ ಶಾಂತಿಭಂಜಕರು ಯಾರು ?

ಕೆಲವು ತಿಂಗಳ ಹಿಂದೆ ಮುಗಿದ ಸಂಯುಕ್ತ ರಾಷ್ಟ್ರದ ಸಂಘಟನೆ (U N O) ಯ ಸಾಮಾನ್ಯ ಸಭೆಯಲ್ಲಿ ಅಂತರ್‍ರಾಷ್ಟ್ರೀಯ ಶಾಂತಿ ಕುರಿತಾದ ಕೆಲವು ಮುಖ್ಯ ನಿರ್ಣಯಗಳ ಮೇಲಿನ ಮತದಾನದ ವೈಖರಿ ಶಾಂತಿ ಯಾರಿಗೆ ಬೇಕಾಗಿದೆ, ಯಾರಿಗೆ ಬೇಕಾಗಿಲ್ಲ ಎಂಬುದನ್ನು ಚೆನ್ನಾಗಿ ತೋರಿಸುತ್ತದೆ.

ನಿರ್ಣಯದ ವಿಷಯ	ಮಂಡಿಸಿದ ದೇಶ	ಪರ	ವಿರೋಧ	ಗೈರುಹಾಜರಿ
ಬಾಹ್ಯಾಕಾಶದಲ್ಲಿ ಶಸ್ತ್ರಾಸ್ತ್ರ ಪೈಪೋಟಿಗೆ ತಡೆ	ಸೋವಿಯತ್ ಒಕ್ಕೂಟ	150	—	ಅಮೇರಿಕಾ ಸಂ. ಸಂಸ್ಥಾನ
ಪ್ರಭುತ್ವ ಭಯೋತ್ಪಾದಕತೆ	,,	117	—	ಅ.ಸಂ.ಸಂ. ಮತ್ತು ನಾಟೋ ಮಿತ್ರರು, ಇಸ್ರೇಲ್, ಚಿಲಿ
ಪರಮಾಣು ಶಸ್ತ್ರ ಪರೀಕ್ಷಣೆಯ ತಕ್ಷಣ ನಿಲುಗಡೆ ಹಾಗೂ ಪ್ರತಿಬಂಧ	ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದೀ ದೇಶಗಳು	123	ಅ ಸಂ.ಸಂ. ಬ್ರಿಟನ್	24
ರಾಸಾಯನಿಕ ಹಾಗೂಜೈವಿಕ ಶಸ್ತ್ರಾಸ್ತ್ರಗಳ ಮೇಲೆ ಪ್ರತಿಬಂಧ	,,	84	ಅ. ಸಂ. ಸಂ;	62
ನ್ಯೂಟ್ರಾನ್ ಶಸ್ತ್ರಾಸ್ತ್ರ ಪ್ರತಿಬಂಧ	,,	71	ಅ.ಸಂ.ಸಂ, ಬ್ರಿಟನ್, ಫ್ರಾನ್ಸ್	53
ಪರಮಾಣು ಶಸ್ತ್ರಾಸ್ತ್ರಗಳ ಬಳಕೆ ಅಥವಾ ಬಳಕೆಯ ಬೆದರಿಕೆಯಿಂದ ಪರಮಾಣು ಶಸ್ತ್ರರಹಿತ ದೇಶಗಳಿಗೆ ಭದ್ರತೆಯನ್ನು ಬಲಪಡಿಸುವುದು	,,	104	ಅ.ಸಂ.ಸಂ. ಹಾಗೂ ಇತರ ಪಾಶ್ಚಾತ್ಯ ದೇಶಗಳು	20
ಮಾನವ ಕುಲದ ಶಾಂತಿ ಹಾಗೂ ಭದ್ರತೆಯ ವಿರುದ್ಧ ಅಪರಾಧಗಳ ಕರಡು ಸಂಹಿತೆ	ಸಮಾಜವಾದಿ ಹಾಗೂ ಅಭಿವೃದ್ಧಿಶೀಲ ದೇಶಗಳು	122	—	ಅ.ಸಂ.ಸಂ.ಹಾಗೂ ಅದರ ನಾಟೋ ಮಿತ್ರರು
ಅಂತರ್‍ರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ಭರವಸೆ ನಿರ್ಮಾಣ	ಪೋಲಂಡ್	111	ಅ.ಸಂ.ಸಂ. ಮತ್ತು ಅದರ ನಾಟೋ ಮಿತ್ರರು	12
ಜನತೆಗಳ ಶಾಂತಿಯ ಹಕ್ಕಿನ ಘೋಷಣೆ	ಮಂಗೋಲಿಯಾ	92	—	ಅ.ಸಂ.ಸಂ. ಮತ್ತು ಅದರ ನಾಟೋ ಮಿತ್ರರು

ಶತಮಾನದ ಮೈಲುಗಲ್ಲುಗಳು:

ನವಂಬರ್ 7, 1917: ಕಾರ್ಮಿಕರ ಪ್ರಥಮ ಪ್ರಭುತ್ವ

ಎಂಟು ತಿಂಗಳ ಹಿಂದೆ ಅಂದರೆ ಮಾರ್ಚ್ 3, 1917 ರಂದು ಪುಟಿಲೊವ್ ಎಂಬ ಕಾರ್ಖಾನೆಯಲ್ಲಿ ಕಾರ್ಮಿಕರ ಮುಷ್ಕರದಿಂದ ಆರಂಭವಾದ ಆಂದೋಲನ ಝಾರ್‌ಶಾಹಿಯ ವಿರುದ್ಧ ಸಶಸ್ತ್ರ ಬಂಡಾಯವಾಗಿ ಪರಿಣಮಿಸಿ ಮಾರ್ಚ್ 12 ರಂದು ರಶ್ಯಾದಲ್ಲಿ ಝಾರ್‌ಶಾಹಿ ಅಂತ್ಯಗೊಂಡಿತ್ತು. ಕಾರ್ಮಿಕರು ತಮ್ಮದೇ ವಿಧಾನಗಳಿಂದಾಗಿ ಈ ಕ್ರಾಂತಿ ಸಾಧಿಸಿದ್ದರೂ ಅಧಿಕಾರ ಕಾರ್ಮಿಕರ ಕೈಗೆ ಬರಲಿಲ್ಲ. ಬಂಡವಾಳ ಶಾಹಿಗಳ ಹಾಗೂ ಭೂಮಾಲಿಕರ ತಾತ್ಕಾಲಿಕ ಸರ್ಕಾರ ಏರ್ಪಟ್ಟಿತು. ಕಾರ್ಮಿಕರು, ರೈತರು ಹಾಗೂ ಸೈನಿಕರಲ್ಲಿ ಹಲವಾರು ಮಂದಿ ಇನ್ನೂ ಈ ಸರ್ಕಾರದ ಬಗ್ಗೆ ಭರವಸೆಯಿಟ್ಟಿದ್ದರು. ಆದರೆ ಈ ಸರ್ಕಾರ "ಝಾರ್ ಶಾಹಿಗೆ ಧಿಕ್ಕಾರ," "ಯುದ್ಧಕ್ಕೆ ಧಿಕ್ಕಾರ" "ನಮಗೆ ರೊಟ್ಟಿ ಬೇಕು" "ನಮಗೆ ಜಮೀನು ಬೇಕು" ಎಂಬ ಘೋಷಣೆಯೊಂದಿಗೆ ಕಾರ್ಮಿಕರ, ರೈತರ, ಸೈನಿಕರ ಪ್ರಾತಿನಿಧಿಕ ಸೋವಿಯೆತ್‌ಗಳನ್ನು ಸ್ಥಾಪಿಸಿಕೊಂಡು ಮಾರ್ಚ್ ಕ್ರಾಂತಿ ಸಾಧಿಸಿದ ಕಾರ್ಮಿಕರ, ರೈತರ ಆಶೋತ್ತರಗಳನ್ನು ಈಡೇರಿಸುವುದಿಲ್ಲ ವೆಂದು ಬೇಗನೇ ಎಲ್ಲರಿಗೂ ಅರಿವಾಗಲಾರಂಭಿಸಿತು. ಕ್ರಾಂತಿಯಿನ್ನೂ ಪೂರ್ಣಗೊಂಡಿಲ್ಲವೆಂದು ಅರಿವಾಗಲಾರಂಭಿಸಿತು. ಕಾರ್ಮಿಕರ ಪಕ್ಷದ ನೇತೃತ್ವದಲ್ಲಿ ಹೋರಾಟ ಮುಂದುವರಿಯಿತು.

ಏಪ್ರಿಲ್ 1೮. "ಮಹಾಯುದ್ಧ ಮುಂದುವರಿಸಬೇಕೆಂಬುದು ಜನತೆಯ ಬಯಕೆ" ಎಂಬ ತಾತ್ಕಾಲಿಕ ಬೂರ್ಜ್ವಾ ಸರಕಾರದ ವಿದೇಶಾಂಗ ಮಂತ್ರಿಯ ಹೇಳಿಕೆಯವಿರುದ್ಧ ಸಿಟ್ಟಿಗೆದ್ದ 1 ಲಕ್ಷ ಕಾರ್ಮಿಕರ, ಸೈನಿಕರ ಪ್ರಬಲ ರಾಜಕೀಯಮತ ಪ್ರದರ್ಶನ. "ಯುದ್ಧಕ್ಕೆ ಧಿಕ್ಕಾರ", "ಸೋವಿಯೆತ್‌ಗಳಿಗೇ ಎಲ್ಲಾ ಅಧಿಕಾರ" (ಸೋವಿಯೆತ್‌ಗಳೆಂದರೆ ಕಾರ್ಮಿಕರು, ರೈತರು ಅಥವಾ ಸೈನಿಕರು ಚುನಾಯಿಸಿದ ಪ್ರತಿನಿಧಿಗಳಿರುವ ಮಂಡಲಿಗಳು) ಅವರ ಘೋಷಣೆಗಳಾಗಿದ್ದವು.

ಜೂನ್ 1೮. ಸೋವಿಯತ್‌ಗಳ ಅಖಿಲ ರಶ್ಯಾ ಮಟ್ಟದ ಪ್ರಥಮಸಮ್ಮೇಳನ. ಸೋವಿಯೆತ್‌ಗಳ ಒಂದು ಸರಕಾರವಷ್ಟೇ ದುಡಿಯುವ ಜನತೆಗೆ ರೊಟ್ಟಿ, ರೈತರಿಗೆ ಜಮೀನು ಹಾಗೂ ದೇಶಕ್ಕೆ ಶಾಂತಿ, ಸುವ್ಯವಸ್ಥೆ ನೀಡಬಲ್ಲದೆಂದು ಲೆನಿನ್‌ರ ಭಾಷಣ. ಆದರೆ ಇನ್ನೂ ಕಿರು ಬುರ್ಜ್ವಾ ಪಕ್ಷಗಳ ಪ್ರಾಬಲ್ಯ ಹೊಂದಿದ್ದ ಈ ಸಮ್ಮೇಳನ ಇದಕ್ಕೆ ಸಿದ್ಧವಾಗಲಿಲ್ಲ.

ಸಾಮ್ರಾಜ್ಯಶಾಹೀ ಯುದ್ಧ ಮುಂದುವರಿಸುತ್ತಿದ್ದ ತಾತ್ಕಾಲಿಕ ಬೂರ್ಜ್ವಾ ಸರಕಾರದ ವಿರುದ್ಧ ಜುಲೈ 16 ರಂದು ಮತ್ತೆ ಕಾರ್ಮಿಕರ, ಸೈನಿಕರ ಮತ ಪ್ರದರ್ಶನ. ಸಾಮ್ರಾಜ್ಯಶಾಹೀ ಬೂರ್ಜ್ವಾಗಳಿಂದ ಅಧಿಕಾರ ತಮ್ಮ ಕೈಗೆ ತಗೊಳ್ಳಬೇಕೆಂದು ಸೋವಿಯತ್‌ಗಳಿಗೆ ಒತ್ತಾಯ. ಶಾಂತಿಯುತವಾಗಿ ಮತ ಪ್ರದರ್ಶನ ನಡೆಸುತ್ತಿದ್ದ ಕಾರ್ಮಿಕರ, ಸೈನಿಕರ ಮೇಲೆ ಪ್ರತಿಗಾಮಿಗಳ ದಮನಕಾರ್ಯ. ಪೆಟ್ರೋಗ್ರಾಡ್‌ನ ಬೀದಿಗಳಲ್ಲಿ ಕಾರ್ಮಿಕರ ರಕ್ತದೋಕುಳಿ. ಬೂರ್ಜ್ವಾ ಸರಕಾರದ ಸರ್ವಾಧಿಕಾರ ಆರಂಭ.

ಜುಲೈ - ಆಗಸ್ಟ್‌ನಲ್ಲಿ ಬೊಲ್ಶೆವಿಕ್ ಪಕ್ಷದ 6ನೇ ಅಧಿವೇಶನ. ಕಾರ್ಮಿಕರನ್ನು, ರೈತ, ಸೈನಿಕರನ್ನು ಹಳ್ಳಿಗಳ ಶೋಷಿತ ರೈತ ಸಮೂಹಗಳನ್ನು ಪಕ್ಷದ ಬಾವುಟದಡಿ ತಂದು ಹೊಸ ಸಮರಗಳಿಗೆ ಸಿದ್ಧರಾಗಲು ಕಾರ್ಮಿಕರಿಗೆ, ರೈತರಿಗೆ, ಸೈನಿಕರಿಗೆ ಅಧಿವೇಶನ ಕರೆ ನೀಡಿತು. ಈ ನಡುವೆ ಸೇನಾಧಿಪತಿ ಕಾರ್ನಿಲೊವ್‌ನ ಪ್ರತಿ ಕ್ರಾಂತಿಯ ಯತ್ನವನ್ನು ಬೊಲ್ಶೆವಿಕರು ಸಂಪೂರ್ಣ ವಿಫಲಗೊಳಿಸಿದರು. ಇದರಿಂದ ಕ್ರಾಂತಿ ಪರ ಶಕ್ತಿಗಳಿಗೆ ಇನ್ನಷ್ಟು ಪ್ರೋತ್ಸಾಹ. ಪ್ರತಿ ಹಳ್ಳಿ, ಪಟ್ಟಣಗಳಲ್ಲಿ ಜನ ಸಮೂಹಗಳ ಬೆಂಬಲ. ಕಾರ್ಮಿಕರ ನೇತೃತ್ವದಲ್ಲಿ ಸಶಸ್ತ್ರ ಬಂಡಾಯ ಆರಂಭ.

ನವಂಬರ್ ೬. ಕಾರ್ಮಿಕರ, ಸೈನಿಕರ ರಕ್ಷಣೆಯಲ್ಲಿ ಪ್ರಕಟಗೊಂಡ ಬೋಲ್ಶೆವಿಕ್ ಪಕ್ಷದ ಮುಖವಾಣಿ "ರಾದೋಚಿ ಪುಟ್" (ಕಾರ್ಮಿಕರ ಪಥ) ದಿಂದ ತಾತ್ಕಾಲಿಕ ಸರ್ಕಾರವನ್ನು ಕಿತ್ತೊಗೆಯಲು ಕರೆ. ಚಾರಿತ್ರಿಕ ದಿನ ಬಂದೇ ಬಿಟ್ಟಿತ್ತು. ನವಂಬರ್ 7ರ ಮುಂಜಾನೆ. ಕಾರ್ಮಿಕರ ರೆಡ್‌ಗಾರ್ಡ್ ಪಡೆಗಳು ಹಾಗೂ ಕ್ರಾಂತಿಕಾರೀ ಸೈನಿಕ ಪಡೆಗಳು ರಾಜಧಾನಿ ಪೆಟ್ರೋಗ್ರಾಡ್‌ನ ರೈಲು ನಿಲ್ದಾಣಗಳನ್ನು, ಅಂಚೆ ಕಚೇರಿಯನ್ನು, ತಂತಿ ಕಚೇರಿಯನ್ನೂ, ಮಂತ್ರಾಲಯಗಳನ್ನೂ, ಬ್ಯಾಂಕುಗಳನ್ನೂ ಆವರಿಸಿಕೊಂಡವು.

ಯುದ್ಧ ಹಡಗು "ಅರೋರಾ"ದ ಫಿರಂಗಿಗಳು ತಾತ್ಕಾಲಿಕ ಬೂರ್ಜ್ವಾ ಸರಕಾರ ಶರಣು ಪಡೆದಿದ್ದ "ಚಳಿಗಾಲದ ಅರಮನೆ" ಯತ್ತ ಸಜ್ಜುಗೊಂಡು ನಿಂತವು.

ನವಂಬರ್ 7, 1917 ರ ರಾತ್ರಿ. "ಅರೋರಾದ" ಫಿರಂಗಿಗಳು ಹೊಸ ಯುಗದ ಉದಯದ ಘರ್ಜನೆ ಮಾಡಿದವು. ಕಾರ್ಮಿಕರು, ಸೈನಿಕರು "ಚಳಿಗಾಲದ ಅರಮನೆ" ನುಗ್ಗಿದರು. ತಾತ್ಕಾಲಿಕ ಸರಕಾರವನ್ನು ಬಂಧಿಸಿದರು. ಪೆಟ್ರೋಗ್ರಾಡ್‌ನ ಕ್ರಾಂತಿ ಗೆದ್ದಿತ್ತು.

ಅದೇ ರಾತ್ರಿ ಸಭೆ ಸೇರಿದ್ದ ಸೋವಿಯತ್‌ಗಳ ಅಖಿಲ ರಶ್ಯಾ ಮಟ್ಟದ ಎರಡನೇ ಅಧಿವೇಶನ ಸರಕಾರೀ ಅಧಿಕಾರಗಳೆಲ್ಲಾ ಸೋವಿಯತ್‌ಗಳ ಕೈಗೆ ಬಂದಿವೆಯೆಂದು ಘೋಷಿಸಿತು.

ರಶ್ಯಾದ ಕಾರ್ಮಿಕ ವರ್ಗ ಬೋಲ್ಶೆವಿಕ್ ಪಕ್ಷದ ನೇತೃತ್ವದಲ್ಲಿ, ರೈತಾಪಿ ವರ್ಗದ ಸಖ್ಯತೆಯೊಂದಿಗೆ, ಸೈನಿಕರ, ನಾವಿಕರ ಬೆಂಬಲದೊಂದಿಗೆ ಹೊಸದೊಂದು ಪ್ರಭುತ್ವವನ್ನು—ಸಮಾಜವಾದೀ ಸೋವಿಯೆತ್ ಪ್ರಭುತ್ವವನ್ನು—ಸ್ಥಾಪಿಸಿತು.

ಅಂತರ್‌ರಾಷ್ಟ್ರೀಯ ಕಾರ್ಮಿಕ ಆಂದೋಲನದಲ್ಲಿ ಪಶ್ಚಿಮ ಯೂರೋಪಿನ ಸುಧಾರಣಾವಾದೀ ಕಾರ್ಮಿಕ ಮುಖಂಡರು ಕ್ರಾಂತಿಕಾರೀ ನಿಲುವನ್ನು

(ನೇ ಪುಟ ನೋಡಿ)

ಮೇ ಕಥಾನಕಗಳು

ತಪ್ಪಿರೋದು ಅಲ್ಲೇ

ಕ್ರಾಂತಿ ಪೂರ್ವ ರಶ್ಯಾದ ಒಂದು ಕಾರ್ಖಾನೆ - ಏಪ್ರಿಲ್ ತಿಂಗಳಲ್ಲಿ ಬೆಲ್ಜಿಯಂನಿಂದ ಕೆಲವು ಕಾರ್ಮಿಕರು ಬಂದಿದ್ದರು. ಯಾವುದೋ ಯಂತ್ರವನ್ನು ಬೆಲ್ಜಿಯಂನಿಂದ ಆಮದು ಮಾಡಿಕೊಳ್ಳಲಾಗಿತ್ತು. ಅದನ್ನು ಪ್ರತಿಷ್ಠಾಪಿಸಲು ಅವರು ಬಂದಿದ್ದರು.

ಮೇ ಸಮೀಪಿಸುತ್ತಿತ್ತು. ರಶ್ಯನ್ ಕಾರ್ಮಿಕರು ಆ ದಿನ ಕೆಲಸಕ್ಕೆ ಬರುವುದಿಲ್ಲವೆಂದು ಘೋಷಿಸಿದ್ದರು. ಆದರೆ ಈಗ ಎದ್ದ ಪ್ರಶ್ನೆ - ಬೆಲ್ಜಿಯಂ ಕಾರ್ಮಿಕರು ಏನು ಮಾಡಬಹುದು ?

"ಅವರು ಕೆಲಸಕ್ಕೆ ಹೋಗುತ್ತಾರೆ" ಕೆಲವರ ಅಭಿಪ್ರಾಯ. "ಇಲ್ಲ" ಎಂದರು ಇನ್ನು ಕೆಲವರು

ಕಾರ್ಖಾನೆಯ ಕಾರ್ಮಿಕರ ಮಕ್ಕಳಲ್ಲೂ ಇದೇ ಜಿಜ್ಞಾಸೆ. ಕೋಲ್ಯಾ ಹೇಳಿದ "ಅವರದ್ದು ನಮ್ಮ ರಕ್ತವಲ್ಲ. ಅವರು ರಶ್ಯಾದ ಕಾರ್ಮಿಕರನ್ನು ಬೆಂಬಲಿಸಲಾರರು"

"ನೋಡ್ತಾ ಇರು. ಅವರು ಖಂಡಿತಾ ಬೆಂಬಲಿಸ್ತಾರೆ" ಎಂದ ಲ್ಯೋಲಕಾ. ವಾದ-ವಿವಾದ ಬಹಳ ನಡೆಯಿತು. ಕೊನೆಗೆ ಒಂದು ಒಪ್ಪಂದಕ್ಕೆ ಬಂದರು. ಯಾರ ಮಾತು ಸುಳ್ಳಾಗುತ್ತೋ ಆತ ಹತ್ತು ಏಟು ತಿನ್ನಬೇಕು.

ಮೇ 1. ಮಕ್ಕಳು ಬೆಳಕು ಹರಿಯುವ ಮೊದಲೇ ಕಾರ್ಖಾನೆಯತ್ತ ಓಡಿದರು. ಕೋಲ್ಯಾ, ಲ್ಯೋಲಕಾ ಮಾತ್ರವಲ್ಲ. ಇತರ ಹತ್ತಾರು ಮಕ್ಕಳೂ ಕೂಡ. ದೂರ ಅಡಗಿ ನಿಂತು ಕಾಯಲಾರಂಭಿಸಿದರು.

ಗಂಟೆ ಏಳಾಯಿತು. ಐದು ಬೆಲ್ಜಿಯಂ ಕಾರ್ಮಿಕರು ಫ್ಯಾಕ್ಟರಿ ಗೇಟಿನತ್ತ ಬಂದರು. ಸ್ವಲ್ಪ ಹೊತ್ತಿನ ನಂತರ ಇನ್ನೈದು. ಕೊನೆಗೆ ಎಲ್ಲರೂ ಗೇಟಿನ ಹತ್ತಿರ ಸೇರಿದರು.

ಮಕ್ಕಳು ಲೆಕ್ಕ ಹಾಕಿದರು. ಹೌದು ಎಲ್ಲಾ ಇಪ್ಪತ್ತೊಂದು ಬೆಲ್ಜಿಯಂ ಕಾರ್ಮಿಕರೂ ಅಲ್ಲಿದ್ದರು.

ಕೋಲ್ಯಾ ಗೆದ್ದ ಖುಶಿಯಿಂದ ಕೂಗಿದ - "ನಾನು ಹೇಳಿದ್ದೆನಲ್ಲಾ !" ಶರ್ಟಿನ ತೋಳೆತ್ತಿ ಸಿದ್ಧನಾದ. ಲ್ಯೋಲಕಾನ ಕೆನ್ನೆಗೆ.... ಒಂದು, ಎರಡು, ಮೂರು, ನಾಲ್ಕು, ಐದು, ಆರು ಲ್ಯೋಲಕಾನ ಕಣ್ಣಲ್ಲಿ ನೀರು.

"ಏಳು, ಎಂಟು, ಒಂಭತ್ತು, ಹತ್ತು."

ಅಷ್ಟರಲ್ಲಿ ಕೋಲ್ಯನ ತಂಗಿ ಕಾಚ್ಯಾಳ ಕೂಗು ಕೇಳಿಸಿತು.

"ಬೆಲ್ಜಿಯನ್ನರು ಹಿಂದೆ ಹೋದರು ! ಕಾರ್ಖಾನೆಯಿಂದ ವಾಪಸು ಹೋದರು !"

"ಏನು ಹೇಳ್ತಾ ಇದ್ದೀಯಾ !— ವಾಪಸು ಹೋದರು !"

"ಹೌದಣ್ಣ, ನಿಜವಾಗಿಯೂ"

ಮಕ್ಕಳು ಮತ್ತೆ ಓಡಿದರು. ಎಣಿಸಿದರು. ಹೌದು ಇಪ್ಪತ್ತೊಂದು ಜನವೂ ವಾಪಸು ಹೋಗುತ್ತಿದ್ದಾರೆ !

ಲ್ಯೋಲಕಾ ಕೋಲ್ಯಾನತ್ತ ಜಿಗಿದ. "ನಾನು ಹೇಳಿಲ್ಲೇನು. ಸರಿ, ತಯಾರಾಗು. ಈಗ ನನ್ನ ಸರದಿ."

"ಯಾಕೆ ? ಅವರು ಹಿಂದಿರುಗಿ ಬರಬಹುದಲ್ಲಾ !"

"ಇಲ್ಲ, ಇಲ್ಲ." ಮಕ್ಕಳು ಲ್ಯೋಲಕಾನ ಪಕ್ಷ ವಹಿಸಿದರು.

"ಅವರು ಖಂಡಿತಾ ಹಿಂದಿರುಗಿ ಬರುವುದಿಲ್ಲ. ನಮ್ಮವರು ಅಲ್ಲಿ ಇಲ್ಲದ್ದನ್ನು ನೋಡಿದರು. ಎದ್ದು ಹೊರಟರು."

"ಹೂಂ. ತಯಾರಾಗು" ಲ್ಯೋಲಕಾ ಇನ್ನೊಮ್ಮೆ ಒದರಿದ. ಕೋಲ್ಯನಿಗೆ ಬೇರೆ ಉಪಾಯವಿರಲಿಲ್ಲ.

ಈ ಎರಡು ಮಕ್ಕಳೂ ಮುಖ ವಿಕಾರ ಮಾಡಿಕೊಂಡು ಬಂದುದನ್ನು ಕಂಡ ಅವರ ಪಾಲಕರ ಕಳವಳ ಪಟ್ಟರು.

"ಯಾರು ಹೀಗೆ ಮಾಡಿದರು ನಿಮಗೆ ?" ಕೋಲ್ಯಾನ ತಂದೆ ಕೇಳಿದರು.

"ಬೆಲ್ಜಿಯನ್ನರಿಂದ ಹಾಗಾಯ್ತು" ಕಾಚ್ಯಾ ಹೇಳಿದಳು.

"ಏನು. ಬೆಲ್ಜಿಯನ್ನರಿಂದಲೇ !"

ಕಾಚ್ಯಾ ಎಲ್ಲಾ ವಿವರಿಸಿದಳು.

ಕಾರ್ಮಿಕರೆಲ್ಲರೂ ಗಹಗಹಿಸಿ ನಕ್ಕರು.

"ಅವರು ನಮ್ಮ ರಕ್ತ ಅಲ್ಲ ಅಂದೆಯಾ ?

ಅಲ್ಲೇ ನೀನು ತಪ್ಪಿರೋದು. ನಮ್ಮೆಲ್ಲರಲ್ಲಿ ಇರುವುದು ಕಾರ್ಮಿಕರ ರಕ್ತ. ಅದೇ ಮುಖ್ಯ ಎಂದರು ಕೋಲ್ಯಾನ ತಂದೆ."

ಪ್ರಥಮ ಪ್ರಭುತ್ವ

(ನೇ ಪುಟದಿಂದ)

ಬಿಟ್ಟು, ತಮ್ಮ ದೇಶಗಳ ಆಳುವ ವರ್ಗಗಳೊಂದಿಗೆ ಶಾಮೀಲಿನ ನೀತಿ ಅನುಸರಿಸಿದ ಪ್ರಥಮ ಮಹಾಯುದ್ಧದ ಅಂತ್ಯದ ಹೊತ್ತಿಗೂ ದಾಸ್ಯದಲ್ಲೇ ಮುಂದುವರಿದರೆ, ಕ್ರಾಂತಿಕಾರೀ ಪರಂಪರೆಯನ್ನು ಮೇ ದಿನದ ಅಂತರ್ರಾಷ್ಟ್ರೀಯ ಸ್ವರೂಪವನ್ನು ಮುಂದುವರೆಸಿಕೊಂಡು ಬಂದ ರಶ್ಯಾದ ಕಾರ್ಮಿಕ ವರ್ಗ ಒಂದು ಯಶಸ್ವೀ ಸಮಾಜವಾದೀ ಕ್ರಾಂತಿ ಸಂಘಟಿಸಲು ಶಕ್ತವಾಯಿತು. ಕಾರ್ಮಿಕ ವರ್ಗದ ಕ್ರಾಂತಿಗಳ ಒಂದು ಹೊಸ ಯುಗವನ್ನು ಆರಂಭಿಸಿತು.

ರಾಯಭಾರಿ ದಂಗೆ

"ಇದ್ದಕ್ಕಿದ್ದಂತೆ ದಂಗೆಯೆದ್ದು ಸರಕಾರ ಕಬಳಿಸುವುದು ಸಾಧ್ಯವಾಗದಂತಹ ಒಂದು ದೇಶವಿದೆಯೇ ?"

"ಇದೆ. ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಅದು ಸಾಧ್ಯವಿಲ್ಲ."

"ಏಕೆ ಅಲ್ಲಿ ಸಾಧ್ಯವಿಲ್ಲ."

"ಏಕೆಂದರೆ ಅಲ್ಲಿ ಅಮೆರಿಕಾದ ರಾಯಭಾರಿ ಕಚೇರಿಯಿಲ್ಲ"

ಅಭಿವೃದ್ಧಿಶೀಲ ದೇಶಗಳ ರಾಜಕೀಯ ವಲಯಗಳಲ್ಲಿ ಜನಪ್ರಿಯವಾಗಿದ್ದ ಜೋಕು. ಈಗ ಅದು ಕೇವಲ ವ್ಯಂಗ್ಯವಾಗಿಯೇ ಉಳಿದಿಲ್ಲ.

ಕೊರಿಯಾ ಜನತಾ ಪ್ರಜಾಪ್ರಭುತ್ವ

ಕೊರಿಯನ್ ಪರ್ಯಾಯ ದ್ವೀಪವು (ಮೂರು ದಿಕ್ಕುಗಳಲ್ಲಿ ಸಮುದ್ರ ಇರುವ ದೇಶ) 221,601 ಚ. ಮೀಟರ್ ವಿಸ್ತಾರವಾಗಿದ್ದು ಏಷ್ಯಾ ಖಂಡದ ಈಶಾನ್ಯ ಭಾಗದಲ್ಲಿ ಉತ್ತರದಿಂದ ದಕ್ಷಿಣಕ್ಕೆ 43° ಮತ್ತು 33° ಅಕ್ಷಾಂಶಗಳೊಳಗೆ. ಪಶ್ಚಿಮದಿಂದ ಪೂರ್ವಕ್ಕೆ 124° ಮತ್ತು 131° ಪೂರ್ವ ರೇಖಾಂಶಗಳೊಳಗೆ ಚಾಚಿಕೊಂಡಿದೆ. ಸಂಯುಕ್ತ ಅಮೇರಿಕಾ ಸರ್ಕಾರದ ನೀತಿಯಿಂದಾಗಿ ಕೊರಿಯಾ ದೇಶವನ್ನು ಎರಡನೇ ಮಹಾಯುದ್ಧದ ಕೊನೆಯ ನಂತರ 3೮° ಅಕ್ಷಾಂಶವು ಎರಡು ದೇಶಗಳಾಗಿ – ಉತ್ತರ ಮತ್ತು ದಕ್ಷಿಣ ಕೊರಿಯಾಗಳಾಗಿ – ರಾಜಕೀಯವಾಗಿ ವಿಭಾಗ ಮಾಡಲಾಗಿದೆ.

ಉತ್ತರದ ಜನತಾ ಪ್ರಜಾಪ್ರಭುತ್ವ ಕೊರಿಯಾ (ಪಿ.ಡಿ.ಆರ್.ಕೆ.) ಯ ವಿಸ್ತೀರ್ಣ 121,193 ಚ. ಮಿ. 197೮ ರಲ್ಲಿ ಜನಸಂಖ್ಯೆ 17,072,000. ರಾಜಧಾನಿ ಪ್ಯೊಂಗ್ ಯಾನಗ್. ದಕ್ಷಿಣ ಕೊರಿಯಾದ ರಾಜಧಾನಿ ಸುವೆಲ್.

75 ಶೇಕಡಾ ಭೂಭಾಗ ಪರ್ವತಮಯ. 25 ಶೇಕಡಾ ಮಾತ್ರ ತಗ್ಗು ಬಯಲು ಭೂಮಿ. 8700 ಕಿ. ಮೀ. ಉದ್ದದ ಸಮುದ್ರ ಕಿನಾರೆ ಇದೆ. ಕೊರಿಯಾದ ಹವೆ ಸಮತೋಲದ್ದಾಗಿದೆ. ನಾಲ್ಕು ಋತು ಮಾನಗಳು. ಜೂನ್, ಜುಲೈ ಮತ್ತು ಅಗಸ್ಟುಗಳಲ್ಲಿ ದಟ್ಟ ಮಳೆ.

ಇತಿಹಾಸ

4 ಮತ್ತು 5ನೇ ಕ್ರಿ. ಪೂರ್ವದಲ್ಲಿ ವರ್ಗ ಸಮಾಜವು ಏರ್ಪಟ್ಟು 1 ಮತ್ತು 2ನೇ ಕ್ರಿ. ಶಕದಲ್ಲಿ ಊಳಿಗಮಾನ್ಯ ರಾಜ್ಯಗಳು – ಬಾಕ್ಜೆ ಮತ್ತು ಸಿಲ್ಲಾ ದಕ್ಷಿಣದಲ್ಲಿ, ಕೊಗ್ಯೂರಿಯಾ ಉತ್ತರದಲ್ಲಿ ಸ್ಥಾಪಿಸಲ್ಪಟ್ಟವು. 10ನೇ ಶತಮಾನದಲ್ಲಿ ವಿಶಾಲ ಪ್ರಮಾಣದ ರೈತರ ದಂಗೆ ನಡೆದು ದೇಶವು 'ಕೊರಿಯಾ' ಎಂಬ ರಾಜ ಮನೆತನದ ಆಡಿಯಲ್ಲಿ 918 ರಿಂದ 13೯0 ರ ವರೆಗೆ ಆಳಲ್ಪಟ್ಟಿತು. ಇವರ ಕೈಕೆಳಗೆ ತೀವ್ರ ಆರ್ಥಿಕ ಮತ್ತು ಸಾಂಸ್ಕೃತಿಕ ಮುನ್ನಡೆ ಸಾಧಿಸಲ್ಪಟ್ಟಿತು. ಕೈಕಸಬುಗಳು, ಚಿನ್ನ, ಬೆಳ್ಳಿ ಮತ್ತು ಕಂಚಿನ ಸಾಮಾನುಗಳು, ವಿಜ್ಞಾನ, ತಂತ್ರಜ್ಞಾನ, ಖಗೋಳ ಜ್ಞಾನ, ಹಡಗು ನಿರ್ಮಾಣ, ಹವಾಮಾನ ಶಾಸ್ತ್ರಕ್ಕೆ ಹೆಸರು ಪಡೆಯಿತು. ಈ ರಾಜಮನೆತನ 13೯0 ರಲ್ಲಿ ಕುಸಿದುಬಿದ್ದು ರೀ ಮನೆತನ ಅಧಿಕಾರಕ್ಕೆ ಬಂತು.

17ನೇ ಶತಮಾನದಲ್ಲಿ ಕೊರಿಯನ್ ಊಳಿಗಮಾನ್ಯ ಸಮಾಜದಲ್ಲಿ ವ್ಯಾಪಾರಿ ಮತ್ತು ಹಣಕಾಸಿನ ಸಂಬಂಧಗಳು ಬೆಳೆದು ಬಂತು. 19ನೇ ಶತಮಾನದಲ್ಲಿ ರೈತರ ದಂಗೆಗಳು ಹೆಚ್ಚಾದವು. ರೈತರ ದಂಗೆಗಳು ಊಳಿಗಮಾನ್ಯ ಪದ್ಧತಿಯನ್ನು ಬುಡದಿಂದ ಕಂಪಿಸಿದವು. ಮುಂದೆ ಸಂಯುಕ್ತ ಅಮೇರಿಕಾ ಮತ್ತು ಯೂರೋಪಿಯನ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟದ ಪ್ರಮುಖ ಶಕ್ತಿಯಾಯಿತು. 1876 ರಲ್ಲಿ ಜಪಾನಿನ ಒತ್ತಡಕ್ಕೆ ಬಲಿಯಾಗಿ ಒಂದು ಅಸಮಾನ ಒಪ್ಪಂದಕ್ಕೆ ಸಹಿ ಹಾಕಬೇಕಾಗಿ ನಿರ್ಬಂಧಿತವಾಯಿತು ಅನಂತರ ಈ ತರದ ಒಪ್ಪಂದವನ್ನು ಸಂಯುಕ್ತ ಅಮೇರಿಕಾ, ಬ್ರಿಟನ್, ಮತ್ತಿತರ ಯುರೋಪಿಯನ್ ಸಾಮ್ರಾಜ್ಯಶಾಹಿಗಳೊಡನೆ ಮಾಡಿಕೊಳ್ಳಬೇಕಾಯಿತು. ಇತರ ಸಾಮ್ರಾಜ್ಯಶಾಹಿಗಳ ಸಹಾಯದಿಂದ ಜಪಾನ್ ಕೊರಿಯಾದಲ್ಲಿ ಸತತವಾಗಿ ಆಕ್ರಮಣವೆಸಗಿ 1910 ರಲ್ಲಿ ತನ್ನ ವಸಾಹತಾಗಿ ಸೇರ್ಪಡೆಮಾಡಿಕೊಂಡಿತು.

ಪಿ. ರಾಮಚಂದ್ರರಾವ್

1917 ರ ರಷ್ಯನ್ ಅಕ್ಟೋಬರ್ ಕ್ರಾಂತಿ ಕೊರಿಯನ್ ಜನತೆಗೆ ಸ್ಫೂರ್ತಿ ತುಂಬಿತು. ಅವರು ಮೇ 1, 1919 ರಂದು ಜಪಾನ್ ಸಾಮ್ರಾಜ್ಯಶಾಹಿಗಳ ವಿರುದ್ಧ ದಂಗೆ ಎದ್ದರು. ಆದರೆ ಜಪಾನಿನ ಶ್ರೇಷ್ಠ ಸೈನ್ಯಗಳ ಕೈಯಿಂದ, ಒಂದು ಕ್ರಾಂತಿಕಾರಿ ಪಕ್ಷದ ನೇತೃತ್ವವಿಲ್ಲದೆ ಸೋಲಬೇಕಾಯಿತು.

ಕಾರ್ಮಿಕರ ನಡುವೆ ಮಾರ್ಕ್ಸ್‌ವಾದ–ಲೆನಿನ್‌ವಾದವು ಹರಡಿ ಏಪ್ರಿಲ್ 1೯2೫ ರಲ್ಲಿ ಕೊರಿಯನ್ ಕಮ್ಯುನಿಸ್ಟ್ ಪಕ್ಷವು ರಚಿಸಲ್ಪಟ್ಟಿತು. ಈ ಪಕ್ಷದ ನೇತೃತ್ವದಲ್ಲಿ 1931 ಮತ್ತು 1932 ರಲ್ಲಿ ಮಹಾದಂಗೆಗಳನ್ನು ರೈತರು ಮತ್ತು ಕಾರ್ಮಿಕರು ನಡೆಸಿದರು.

ಕೊರಿಯಾ ದೇಶವು ಜಪಾನ್ ದಬ್ಬಾಳಿಕೆ ಮತ್ತು ವಸಾಹತು ಶೋಷಣೆಯಡಿ 40 ವರ್ಷ ಕಾಲ ಬಳಲಿ ಬೆಂಡಾಯಿತು. ಜಪಾನ್ ರಾಷ್ಟ್ರದ ನೈಸರ್ಗಿಕ ಮತ್ತು ಮಾನವ ಸಂಪತ್ತನ್ನು ತನ್ನ ಯುದ್ಧ ಮೆಷನರಿ ಬೆಳವಣಿಗೆಗೆ ಉಪಯೋಗಿಸಿತು.

ಜಪಾನ್ ದೇಶದಲ್ಲಿ ಕೊರಿಯನ್ ಭಾಷೆಯನ್ನು ನಿಷೇಧಿಸಿತು. ಕೊರಿಯನ್ ರಾಷ್ಟ್ರೀಯ ಉಡುಪನ್ನು ಧರಿಸುವುದನ್ನು ವಿರೋಧಿಸಿತು. ಜನ ವಿರೋಧಿಸುತ್ತಾ ಹೋರಾಡುತ್ತಾ ಬಂದರು.

ಎರಡನೆ ಯುದ್ಧಕಾಲದಲ್ಲಿ ಕಮ್ಯುನಿಸ್ಟ್ ಪಕ್ಷವು ಗೆರಿಲ್ಲಾ ಕಮಾಂಡರ್ ಕಿಮಿಲ್ ಸಂಗ್‌ರ ನೇತೃತ್ವದಲ್ಲಿ ಯಶಸ್ವಿ ಸಶಸ್ತ್ರ ಹೋರಾಟ ನಡೆಸಿ ಮಂಚೂರಿಯಾದ ಕೊರಿಯಾ ಗಡಿ ಉದ್ದಕ್ಕಿದ್ದ ಜಪಾನ್ ಮಿಲಿಟರಿ ಮತ್ತು ಆಡಳಿತ ಸ್ಥಾನಗಳನ್ನು ಪುಡಿಮಾಡಿತು. ಅದೇ ಕೊರಿಯಾದ ಜನತಾ ಕ್ರಾಂತಿಕಾರಿ ಸೈನ್ಯ. ಆ ಸೈನ್ಯವು ಸೋವಿಯೆತ್ ಸೈನ್ಯ ಪಡೆಗಳ ಜತೆ ಸೇರಿ ಜಪಾನ್

ವಸಾಹತುಶಾಹಿ ಪಡೆಗಳನ್ನು ಆಗಸ್ಟ್ 15, 1945 ರಲ್ಲಿ ಸಂಪೂರ್ಣ ಸೋಲಿಸಿತು. ವಿಜಯದ ನಂತರ ಜನತಾ ಸಮಿತಿಗಳು ಕೊರಿಯಾದಾದ್ಯಂತ ಕಮ್ಯುನಿಸ್ಟ್ ಪಕ್ಷ ಮತ್ತಿತರ ರಾಷ್ಟ್ರಪ್ರೇಮಿ ಶಕ್ತಿಗಳ ಜತೆಸೇರಿ ಸಂಘಟಿಸಿದವು.

ಅಮೇರಿಕಾದ ದ್ರೋಹ

ಸೆಪ್ಟಂಬರ್ 8, 1945 ರಲ್ಲಿ ಸಂಯುಕ್ತ ಅಮೇರಿಕಾದ ಪಡೆಗಳು ಆಗಮಿಸಿ ಕೊರಿಯಾದ ದಕ್ಷಿಣ ಭೂಭಾಗವನ್ನು ಆಕ್ರಮಿಸಿ ನೆಲೆಸಿತು. "ಪೊಟ್ಸ್‌ಡೆಮ್" ಒಪ್ಪಂದದ ಪ್ರಕಾರ ರಷ್ಯನ್ ಪಡೆಗಳು 38° ಉತ್ತರ ಅಕ್ಷಾಂಶದ ಉತ್ತರಕ್ಕೆ ನೆಲೆಸಿದವು

ಪೊಟ್ಸ್‌ಡೆಮ್ ಒಪ್ಪಂದ ಪ್ರಕಾರ ಈ ಸೈನ್ಯಗಳ ನೆಲೆಸುವಿಕೆ ಕೇವಲ ತಾತ್ಕಾಲಿಕ. ಸ್ವತಂತ್ರ ಪ್ರಜಾಪ್ರಭುತ್ವ ಕೊರಿಯಾದ ರಚನೆಗೆ ಆ ಒಪ್ಪಂದವು ಬದ್ಧವಾಗಿತ್ತು. 1945 ಡಿಸೆಂಬರ್‌ನಲ್ಲಿ ಕೊರಿಯಾ ದೇಶ ರಾಜಕೀಯ ಭವಿಷ್ಯ ತೀರ್ಮಾನ ಮಾಡಲು ರಷ್ಯಾ, ಅಮೇರಿಕಾ ಮತ್ತು ಬ್ರಿಟನ್ ಮಾಸ್ಕೋದಲ್ಲಿ ಸಭೆ ಸೇರಿದವು. ಸೋವಿಯತ್ ಯೂನಿಯನ್ ಸೈನ್ಯಗಳು ಹಿಂತೆಗೆಯಬೇಕೆಂದು ಒತ್ತಾಯಿಸಿದರು. ಕೊನೆಗೆ ಐದು ವರ್ಷಕಾಲ ಜಂಟೀ ಟ್ರಸ್ಟ್ ಕಮಿಷನ್ ರಚಿಸಲು ನಿರ್ಬಂಧಿತವಾಯಿತು. ಅಷ್ಟರ ಒಳಗೆ ಐಕ್ಯ ಕೊರಿಯಾ ಸರಕಾರವು ಚುನಾವಣೆಗಳ ಮೂಲಕ ರಚಿಸಲ್ಪಡುವಂತೆ ಎಲ್ಲಾ ಕ್ರಮಗಳನ್ನು ವಹಿಸಲು ತೀರ್ಮಾನವಾಯಿತು. ಈ ಒಪ್ಪಂದಗಳನ್ನು ಸಂಯುಕ್ತ ಅಮೇರಿಕವು ಮೊದಲಿಂದಲೇ ಸರಕಾರದಲ್ಲಿ ಆಗತಾನೇ ಅಮೇರಿಕಾದಿಂದ ಹಿಂತಿರುಗಿದ ಅಂಚಿತ ಪ್ರತಿಗಾಮಿ ಸಿಂಗ್‌ಮನ್ ರೀ ಗುಂಪನ್ನು ಸೇರಿಸಿಕೊಳ್ಳಲೇಬೇಕೆಂದು ಒತ್ತಾಯಿಸಿದುದರ ಮೂಲಕ ಮುರಿಯಲ್ಪಡುತ್ತಾ ಬಂತು.

ಉತ್ತರ ಮತ್ತು ದಕ್ಷಿಣ ಕೋರಿಯಾದ ಕ್ರಾಂತಿಕಾರಿ ಶಕ್ತಿಗಳ ಐಕ್ಯತೆಯನ್ನು ಕಂಡ ಸಂಯುಕ್ತ ಅಮೇರಿಕಾವು ಮಾಸ್ಕೊ ಒಪ್ಪಂದಗಳನ್ನು ಮುರಿಯಲು ತೀರ್ಮಾನಿಸಿತು. ಯುಎನ್‌ಓ ದಲ್ಲಿ ತನಗಿದ್ದ ಯಾಂತ್ರಿಕ ಬಹುಮತವನ್ನು ದುರುಪಯೋಗ ಮಾಡಿ ಕೊರಿಯಾದ ಎರಡೂ ಭಾಗಗಳಲ್ಲಿ ಚುನಾವಣೆಗಳ ಮೇಲ್ವಿಚಾರಕ ಸಮಿತಿಯನ್ನು ಯು ಎನ್‌ ಓ ಮಾಡುವುದು ಎಂಬ ಗೊತ್ತುವಳಿಯನ್ನು ಅಂಗೀಕರಿಸಿಕೊಂಡಿತು. ಚುನಾವಣೆಯಲ್ಲಿ ಸಂಯುಕ್ತ ಅಮೇರಿಕಾವು ಸಿಂಗ್‌ಮನ್ ರೀಯನ್ನು ಅಧಿಕಾರಕ್ಕೆ ಏರಿಸಿ ದೇಶದ ವಿಭಜನೆಯನ್ನು ಶಾಶ್ವತ ಮಾಡಿತು. ದಕ್ಷಿಣದ ಆಡಳಿತೆಯನ್ನು ಪ್ರಜಾಪ್ರಭುತ್ವ ಕೊರಿಯಾ ಎಂದು ಕರೆಯಿತು. ಕೊರಿಯಾದ ಜನತೆ ಪ್ರತಿಭಟಿಸಿದರು. ಸೋವಿಯತ್ ಯೂನಿಯನ್ ವಿರೋಧಿಸಿದರೂ, ಏಕಪಕ್ಷೀಯವಾಗಿ ಸಂಯುಕ್ತ ಅಮೇರಿಕಾವು ಸಹಸ್ರಾರು ದಸ್ತಗಿರಿ ನಡೆಸಿ, ಪ್ರತಿಭಟನೆಯನ್ನು ಬಲಾತ್ಕಾರದಿಂದ ರಕ್ತದಲ್ಲಿ ಮುಳುಗಿಸಿ, ಮೇ 10, 1948 ರಲ್ಲಿ ಚುನಾವಣೆಯನ್ನು ನಡೆಸಿಯೇ ನಡೆಸಿತು.

ದಕ್ಷಿಣದಲ್ಲಿ ದಬ್ಬಾಳಿಕೆ ಇದ್ದಾಗ್ಯೂ 77.25 ಶೇಕಡಾ ಜನತೆ ಮತದಾನದಲ್ಲಿ ಭಾಗವಹಿಸಿದರು 360 ಪ್ರತಿನಿಧಿಗಳು ಆರಿಸಲ್ಪಟ್ಟರು ಉತ್ತರದಲ್ಲಿ 99.97 ಶೇಕಡಾ ಮಂದಿ ಮತನೀಡಿ 212 ಪ್ರತಿನಿಧಿಗಳನ್ನು ಆರಿಸಿದರು.

1948, ಸೆಪ್ಟೆಂಬರ್ 8 ರಂದು ದಕ್ಷಿಣದ ಪ್ರತಿನಿಧಿಗಳು "ಪ್ಯೊಂಗ್‌ಯ್ಯಾಂಗ್" ನಲ್ಲಿ ಉತ್ತರದ ಪ್ರತಿನಿಧಿಗಳೊಡನೆ ಸೇರಿ ಜನತೆಯ ಶ್ರೇಷ್ಠ ವಿಧಾನಸಭೆಯನ್ನು ಜರುಗಿಸಿದರು. ಅದರಲ್ಲಿ ಜನತಾ ಪ್ರಜಾಪ್ರಭುತ್ವ ಕೊರಿಯಾದ ಪ್ರಧಾನಿಯಾಗಿ ಕಿಮ್‌ಇಲ್‌ಸಿಂಗರು ಆರಿಸಲ್ಪಟ್ಟರು ಜನತಾ ಪ್ರಜಾಪ್ರಭುತ್ವ ಕೊರಿಯಾವು ಮರುದಿನ ಸ್ಥಾಪನೆಯಾಯಿತು.

ಅಂದಿನಿಂದ ಇಂದಿನವರೆಗೆ ಕೊರಿಯಾದ ಜನತೆ ಸಾಮ್ರಾಜ್ಯಶಾಹಿಗಳ ಪಿತೂರಿಯಿಂದಾಗಿ ಎರಡು ಭಾಗಗಳಲ್ಲಿ ವಿಭಜಿಸಲ್ಪಟ್ಟು ಎರಡು ಸಾಮಾಜಿಕ ರಾಜಕೀಯ ಪದ್ಧತಿಯಡಿಗಳಲ್ಲಿ ಜೀವಿಸುತ್ತಾ ಹೋರಾಡುತ್ತಾ ಬರುತ್ತಿದ್ದಾರೆ. ಸಂಯುಕ್ತ ಅಮೇರಿಕಾದ ಆಶ್ರಯದಲ್ಲಿ ದಕ್ಷಿಣ ಕೊರಿಯಾವು ಒಂದು ವಸಾಹತುವಾಗಿ ಮಾರ್ಪಟ್ಟು ಆಕ್ರಮಣದ ನೆಲೆಯಾಗಿ ಪರಿಣಮಿಸಿದೆ.

1950ರಲ್ಲಿ ಅಲ್ಲಿ ಉತ್ತರ ಕೊರಿಯಾದ ವಿರುದ್ಧ "ಪಿತೂರಿ" ಸಂಘಟಿಸಲ್ಪಟ್ಟು ಆಕ್ರಮಣ ನಡೆಯಿತು. ಅಂದಿನಿಂದ ದಕ್ಷಿಣ ಕೊರಿಯಾವು ಒಂದು ಸಾಮ್ರಾಜ್ಯಶಾಹಿಗಳ ಸೈನಿಕ ನೆಲೆಯಾಗಿ ಜನತೆಯು ಸಾಮಾನ್ಯ ಪ್ರಜಾಸತ್ತಾತ್ಮಕ ಹಕ್ಕುಗಳಿಂದಲೂ ವಂಚಿತರಾಗಿದ್ದಾರೆ. ಡಿಸೆಂಬರ್ 1948ರಲ್ಲಿ ರಷ್ಯನ್ ಸೈನ್ಯಗಳು ಉತ್ತರ ಕೊರಿಯಾದಿಂದ ಒಪ್ಪಂದದ ಪ್ರಕಾರ ನಿರ್ಗಮಿಸಿದವು. ಆದರೆ ಅಮೇರಿಕನ್ ಸೈನ್ಯಗಳು ಹಿಂತೆಗೆಯಲ್ಪಡಲಿಲ್ಲ.

ಉತ್ತರದಲ್ಲಿ ಕೊರಿಯನ್ ವರ್ಕರ್ಸ್ ಪಕ್ಷದ ನೇತೃತ್ವದಲ್ಲಿ ಒಂದು ಪ್ರಜಾಸತ್ತಾತ್ಮಕ ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಪಾಳೆಯಗಾರಿ ವಿರೋಧಿ ಕ್ರಾಂತಿ ಮುನ್ನಡೆದು ಸಮಗ್ರ ಭೂಸುಧಾರಣೆ ಜಾರಿಗೆ ತಂದಿತು. ಸ್ತ್ರೀ–ಪುರುಷರಿಗೆ ಸಮಾನ ಹಕ್ಕನ್ನು ಸಾರಿ ಜಾರಿಗೊಳಿಸಿತು. ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿತು. ರಾಜಕೀಯ ಐಕ್ಯತೆಯನ್ನು ಎಲ್ಲಾ ಪ್ರಗತಿಗಾಮಿ ಶಕ್ತಿಗಳ ಐಕ್ಯತೆಯ ಮೂಲಕ ಸಾಧಿಸಿಕೊಟ್ಟಿತು.

ಆದ ಕಾರಣ ಈ ಪ್ರಗತಿಗಾಮಿ ಶಕ್ತಿಗಳ ಸಾರ್ವತ್ರಿಕ ಮುನ್ನಡೆಯನ್ನು ತಡೆಗಟ್ಟುವ ಉದ್ದೇಶವನ್ನಿಟ್ಟು ಸಂಯುಕ್ತ ಅಮೇರಿಕವು ಕೊರಿಯಾದಲ್ಲಿ "ಆಕ್ರಮಣ ಯುದ್ಧ" ವನ್ನು ಜೂನ್ 25, 1950ರಲ್ಲಿ ನಡೆಸಿತು.

ಚೀನಾ ಒಂದು ಮಿಲಿಯ ಸ್ವಯಂಸೇವಕ ಸೈನಿಕರನ್ನು ಕಳುಹಿಸಿ ಕೊರಿಯಾ ಜನತೆಗೆ ಅಮೇರಿಕನ್ ಆಕ್ರಮಣವನ್ನು ಎದುರಿಸಲು ಸಹಾಯ ಮಾಡಿತು. ಮೂರು ವರ್ಷಗಳ ಯುದ್ಧದಲ್ಲಿ ಅಮೇರಿಕಾವು ತನ್ನ ಇಡೀ ಮಿಲಿಟರಿ ಶಕ್ತಿಯನ್ನು ಉಪಯೋಗಿಸಿದರೂ, ಯು.ಎನ್.ಓ. ರಾಷ್ಟ್ರಗಳ ಸೈನ್ಯಗಳನ್ನು ಯುದ್ಧದಲ್ಲಿ ಇಳಿಸಿದರೂ, ಕೊನೆಗೆ ಒಂದು ಶಾಂತಿ ಒಪ್ಪಂದಕ್ಕೆ 4ನೇ ಆರ್ಟಿಕಲ್ ಆಧಾರದಲ್ಲಿ ಸಹಿ ಹಾಕಲು ನಿರ್ಬಂಧಿತವಾಯಿತು. ಯುದ್ಧದ ನಿಲುಗಡೆಯಾದ ಮೂರು ತಿಂಗಳುಗಳ ನಂತರ ಸೈನ್ಯಗಳನ್ನು ಹಿಂತೆಗೆಯುವ ಮತ್ತು ಕೊರಿಯಾದ ಐಕ್ಯತೆಯನ್ನು ಸಾಧಿಸುವ ಕುರಿತು ಮಾತುಕತೆ ನಡೆಸುವುದೆಂದು ಒಪ್ಪಿಕೊಂಡಿತು. ಆದರೆ ಫಾನ್ ಮುನ್ ಜೋನ್‌ನಲ್ಲಿ ನಡೆದ ಮಾತುಕತೆಯಲ್ಲಿ, 1954 ರಲ್ಲಿ ಜಿನೀವಾದಲ್ಲಿ ನಡೆದ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಸಂಯುಕ್ತ ಅಮೇರಿಕಾ ಮತ್ತು ಸುವೆಲ್ ಆಡಳಿತ "ಕೊರಿಯಾದ ಜನತೆ ಸ್ವಯಂ ನಿರ್ಧಾರದ ಮೂಲಕ ಐಕ್ಯತೆ" ಸಾಧಿಸುವ ಉದ್ದೇಶದ ಎಲ್ಲಾ ಸೂಚನೆಗಳನ್ನು ತಳ್ಳಿಹಾಕಿದವು.

ಈ ಉದ್ದೇಶದ ವಿರುದ್ಧ ಸಂಯುಕ್ತ ಅಮೇರಿಕಾದಲ್ಲಿ ಫೆಬ್ರವರಿ 8, 1981 ರಂದು ದಕ್ಷಿಣ ಕೊರಿಯಾನೊಡನೆ ಒಂದು ಆರ್ಥಿಕ ಮತ್ತು

ತಾಂತ್ರಿಕ ಒಪ್ಪಂದವನ್ನು ಮಾಡಿಕೊಂಡಿತು. ಆಗಸ್ಟ್ 1953ರಲ್ಲಿ ಮಾಡಿಕೊಂಡ ರಕ್ಷಣಾ ಒಪ್ಪಂದವೂ ಸೇರಿದಂತೆ ಈ ಒಪ್ಪಂದದಿಂದ ದಕ್ಷಿಣ ಕೊರಿಯಾದಲ್ಲಿ ಶಾಶ್ವತವಾಗಿ ಅಮೆರಿಕನ್ ಸೈನ್ಯಗಳು ನೆಲೆನಿಲ್ಲುವಂತಾಯಿತು. ದಕ್ಷಿಣ ಕೊರಿಯಾವು ಸತತವಾಗಿ ಸಂಯುಕ್ತ ಅಮೆರಿಕಾದ ರಾಜಕೀಯ, ಆರ್ಥಿಕ ಮತ್ತು ಸೈನಿಕ ನಿಯಂತ್ರಣಕ್ಕೊಳಗಾಗಿರುವಂತಾಯಿತು. ಆಗಿನಿಂದ ಸಂಯುಕ್ತ ಅಮೆರಿಕಾವು 40,000 ಪಡೆಗಳನ್ನು ಅಲ್ಲಿ ನಿಲ್ಲಿಸಿದೆ. ಅತ್ಯಾಧುನಿಕ ಸಶಸ್ತ್ರಗಳಿಂದ ಸಜ್ಜಿತವಾಗಿದೆ; ಅಣುಬಾಂಬ್‌ಗಳಿರುವ ದೂರಕ್ಕೆಸೆಯಲು ಸಾಧ್ಯವಿರುವ ಕ್ಷಿಪಣಿಗಳಿಂದ ಕೂಡಿದೆ. ಜನತಾ ಪ್ರಜಾಪ್ರಭುತ್ವ ಕೊರಿಯಾದ ವಿರುದ್ಧ ಸಾವಿರಾರು ರೀತಿಯಲ್ಲಿ ಪ್ರಚೋದನಾ ಧಾಳಿಗಳನ್ನು ಸತತವಾಗಿ ನಡೆಸುತ್ತಾ ಬಂದಿದೆ.

ಹೀಗಿದ್ದರೂ, ಆಗಸ್ಟ್ 6, 1971ರಲ್ಲಿ ಕಿಮಿಲ್‌ಸಂಗರು ಉತ್ತರ ಮತ್ತು ದಕ್ಷಿಣಗಳ ನಡುವೆ ರೆಡ್‌ಕ್ರಾಸ್ ಮೂಲಕ ಸಂಪರ್ಕವೇರ್ಪಡಿಸಿದರು ಸೆಪ್ಟೆಂಬರ್ 20, 1971ರಲ್ಲಿ ಪಾನ್ ಮುಂಜೋನಿನಲ್ಲಿ ಪ್ರಥಮ ಸಂವಾದ ಆರಂಭವಾಯಿತು. ಆಗಿನಿಂದ ಈಗಿನವರೆಗೆ ಮೇಲ್ಮಟ್ಟದಲ್ಲಿ ಗುಪ್ತ ಮಾತುಕತೆ ನಡೆಯುತ್ತಾ ಬಂದು ಜುಲೈ 4, 1972 ರಂದು ಒಂದು ಜಂಟೀ ಹೇಳಿಕೆಯನ್ನು ಹೊರಡಿಸಲಾಯಿತು.

ಆದರೆ ಸುನೆಲ್ ಆಡಳಿತೆಯು ಈ ಸಂವಾದವನ್ನು ದಕ್ಷಿಣದಲ್ಲಿ ಜನತೆಯ ಅಭಿಪ್ರಾಯವನ್ನು ಮಂಕುಗೊಳಿಸಲು ಉಪಯೋಗಿಸುತ್ತಾ ಬರುತ್ತಿದೆ.

ಉತ್ತರ ಕೊರಿಯಾದೊಡನೆ ಮಾತುಕತೆ ನಡೆಸಲು ದಕ್ಷಿಣ ಕೊರಿಯಾ ಸಿ.ಐ.ಎ. ದ ಮುಖ್ಯಸ್ಥನನ್ನು ಕಳುಹಿಸುತ್ತಿರುವುದೇ ಸುನೆಲ್ ಆಡಳಿತೆಯ ಒಳ ಉದ್ದೇಶವನ್ನು ಬಹಿರಂಗಗೊಳಿಸುತ್ತದೆ. ಜನತಾ ಪ್ರಜಾಪ್ರಭುತ್ವ ಕೊರಿಯಾ ಮತ್ತು 5 ಅಂಶಗಳ ಸೂಚನೆಯನ್ನು ಪುನರೈಕ್ಯ ಸಾಧಿಸುವ ಸಲುವಾಗಿ ಮುಂದಿಟ್ಟು "ಕೊರಿಯಾ ಕೋನ್ ಫೆಡರಲ್ ರಿಪಬ್ಲಿಕ್"ಆಗಿ ಯು. ಎನ್. ಒಕ್ಕೆ ಸೇರ್ಪಡೆಯಾಗುವುದಕ್ಕೆ ದಾರಿ ತೋರಿಸಿದ್ದಾರೆ.

> ನಾನೇಕೆ ಮಾತಾಡುವದಿಲ್ಲ
> ಬಯಕೆಗಳ ಬಗ್ಗೆ
> ಎಲೆಗಳ ಬಗ್ಗೆ
> ನನ್ನ ನಾಡಿನ ಮಹಾ ಅಗ್ನಿಪರ್ವತಗಳ ಬಗ್ಗೆ
> —ಎಂದು ನೀವು ಕೇಳುತ್ತೀರಿ.
> ನೋಡಿ : ಬೀದಿಯ ಮೇಲೆ ರಕ್ತವಿದೆ !
> ನೋಡಿ : ರಕ್ತವಿದೆ ಬೀದಿಯ ಮೇಲೆ !
>
> **ಪಾಬ್ಲೋ ನೆರೂದ**

ಆದರೆ ಸುನೆಲ್ ಸರಕಾರವು ಇನ್ನೂ ಈ ಸೂಚನೆಗೆ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ.

ಜನತಾ ಪ್ರಜಾಪ್ರಭುತ್ವ ಕೊರಿಯಾ :

ಜನತಾ ಕೊರಿಯಾ ನಾಗಾಲೋಟದಿಂದ ತನ್ನ ಜನತೆಯ ಅಭಿವೃದ್ಧಿಯನ್ನು ಸಾಧಿಸುತ್ತಿದೆ. ಪ್ರಭುತ್ವವು ರಾಷ್ಟ್ರೀಯ ಆದಾಯ ಬಹುದೊಡ್ಡ ಭಾಗವನ್ನು ಜನತೆಯ ವಿದ್ಯಾಭ್ಯಾಸಕ್ಕಾಗಿ ವೆಚ್ಚ ಮಾಡುತ್ತಿದೆ. ಎಲ್ಲರಿಗೂ 10ನೇ ಕ್ಲಾಸು ವಿದ್ಯಾಭ್ಯಾಸವನ್ನು ಕೊಟ್ಟು ಉದ್ಯೋಗ ಕೊಡಲು ಸಾಧ್ಯವಾಗಿದೆ. ಈಗ ಇನ್ನೂ ಒಂದು ವರ್ಷ ಅಧಿಕ ವಿದ್ಯಾಭ್ಯಾಸ ಕೊಡಲು ಯೋಜನೆ ಹಾಕುತ್ತಿದೆ

ಅಷ್ಟು ಸಣ್ಣ ರಾಜ್ಯದಲ್ಲಿ 90,000 ಪ್ರೊಫೆಸರುಗಳೂ, ಅಧ್ಯಾಪಕರೂ, ಇದ್ದಾರೆ. ವಿದ್ಯಾ ಕೇಂದ್ರಗಳು 10,6000.

ಈಗ ನರ್ಸರಿ ಶಾಲೆಗಳೂ ಸಂಘಟಿಸಲ್ಪಡುತ್ತಿವೆ. ಎಲ್ಲಾ ವಿದ್ಯಾರ್ಥಿಗಳು ಶಾರೀರಕ ಶ್ರಮವನ್ನು ಸೋಲಿಸಿ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.

ಆರೋಗ್ಯ ವ್ಯವಸ್ಥೆಗೆ ರಾಷ್ಟ್ರೀಯ ಆದಾಯದ ಶೇಖಡಾ 14 ರಷ್ಟು ಖರ್ಚಾಗುತ್ತಿದೆ. 100000 ಬೆಡ್‌ಗಳಿಂದ ಸುಸಜ್ಜಿತವಾದ ಒಟ್ಟು 64 ದೊಡ್ಡ ಆಸ್ಪತ್ರೆಗಳೂ, 250 ಸಣ್ಣ ಕೇಂದ್ರಗಳೂ ಇವೆ.

1980ರಲ್ಲಿ ಅತ್ಯಾಧುನಿಕ ಮೆಟರ್‌ನಿಟಿ ಹಾಸ್ಪಿಟಲ್ ಒಂದು ಪ್ಯೊಂಗ್‌ಯೊಂಗಿನಲ್ಲಿ ರಚಿಸಿದ್ದಾರೆ.

ಆರ್ಥಿಕ : ರಾಷ್ಟ್ರದ 35.1 ಶೇಕಡಾ ಮಂದಿ ಸಕ್ರಿಯ ಕೆಲಸ ಮಾಡುವವರು. 5,993,000ರ ಪೈಕಿ, 3,140,000 ಮಂದಿ ಕೃಷಿ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಎಲ್ಲಾ ಕೃಷಿಯ ಕ್ರಿಯೆಗಳು ಯಾಂತ್ರೀಕರಿಸಲ್ಪಟ್ಟಿದೆ.

1950-53ರ ಯುದ್ಧದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಸಂಪೂರ್ಣ ನಾಶಗೈದ ಆರ್ಥಿಕ ಇಂದು ನಾಗಾಲೋಟದಿಂದ ಮುನ್ನಡೆಯುತ್ತಿದೆ.

"ಇನ್ನೊ ಲಕ್ಷಗಟ್ಟಲೆ ಕೆಲಸಗಾರರು ಇದ್ದರೂ (ದಕ್ಷಿಣದಿಂದ ಬಂದರೂ) ನಾವು ಕೆಲಸ ಕೊಡಬಲ್ಲೆವು. ಹೆಚ್ಚಿನ ಅಭಿವೃದ್ಧಿಯನ್ನ ನಾವು ನಮ್ಮ ಕಾಲಿನ ಮೇಲೆ ನಿಂತೇ ಸಾಧಿಸುತ್ತಿದ್ದೇವೆ" ಎಂದು ಕಿಮಿಲ್‌ಸಂಗ್ ಹೇಳುತ್ತಿರುವುದರಲ್ಲಿ ಉತ್ಪ್ರೇಕ್ಷೆ ಇಲ್ಲ.

ಇತರ ಸಮಾಜವಾದಿ ರಾಷ್ಟ್ರಗಳ ನಿಸ್ವಾರ್ಥ ಸಹಾಯದಿಂದ ತನ್ನ ಜನತೆಯ ಶ್ರಮಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಿ ಸುಖಸಂತೃಪ್ತಿಯ ಅದೇ ಸಮಯದಲ್ಲಿ ದೃಢವಾಗಿ ಸಾಮ್ರಾಜ್ಯಶಾಹಿಗಳನ್ನು ಎದುರಿಸಲು ಕ್ರಾಂತಿಕಾರಿಯಾಗಿರುವ, ಆಡಳಿತೆಯನ್ನು ತಾನಾಗೇ ಬೆಳೆಸುತ್ತಿದೆ ಜನತಾ ಪ್ರಜಾಪ್ರಭುತ್ವ ಕೊರಿಯಾ.

ಅಮೆರಿಕಾ ಸಾಮ್ರಾಜ್ಯಶಾಹಿಗಳ "ಶೋ-ಪೀಸ್" ಆಗಿ ಅತ್ಯಂತ ಕ್ರೂರ ದಬ್ಬಾಳಿಕೆಯ ಆಡಳಿತ ವ್ಯವಸ್ಥೆ ದಕ್ಷಿಣದಲ್ಲಿ ಪ್ರಜಾಪ್ರಭುತ್ವ ಕೊರಿಯಾದಲ್ಲಿ ಮುಂದುವರಿಯುತ್ತಿದೆ.

ಕೊರಿಯನ್ ಐಕ್ಯತೆ ಮಾತ್ರ ಇನ್ನೂ ಸಾಧಿಸದೇ ಹಾಗೆ ಮುಂದುವರಿಯುತ್ತಿದೆ.

ವಿಶ್ವಕ್ಕೆಲ್ಲಾ ಸ್ಫೂರ್ತಿ ಚಿಲುಮೆಯಾದ ವಿಯಟ್ನಾಂ

ಮಾರ್ಚ್ 9, 1945. ಜಪಾನೀ ಮಿಲಿಟರಿ ಶಾಹಿಗಳು ವಿಯೆಟ್ನಾಮಿನಲ್ಲಿ ಫ್ರೆಂಚರನ್ನು ಕಿತ್ತೆಸೆದರು. ಫ್ರೆಂಚ್ ವಸಾಹತುಶಾಹಿಯಿಂದ ಹಾಗೂ ಸಾಮ್ರಾಜಿಕ ವಿಮೋಚನೆಗಾಗಿ ಇಂಡೋಚೀನಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಆದಾಗಲೇ ವಿಯೆಟ್ ಮಿನ್ಹ್ ಸಂಯುಕ್ತ ರಂಗ ಸ್ಥಾಪನೆಗೊಂಡು ವಿಯೆಟ್‌ಬಾಕ್‌ನಲ್ಲಿ ಕ್ರಾಂತಿಕಾರಿ ನೆಲೆ ಸ್ಥಾಪನೆಗೊಂಡಿತ್ತು. ಫ್ರೆಂಚರ ಸೋಲು ಆಂದೋಲನಕ್ಕೆ ಹೊಸ ಚಾಲನೆ ನೀಡಿತು. ಸಾರ್ವತ್ರಿಕ ಬಂಡಾಯದ ಕರೆ ನೀಡಲಾಯಿತು. ಹತ್ತು ದಿನಗಳೊಳಗೆ ದೇಶಾದ್ಯಂತ ಕ್ರಾಂತಿಕಾರಿ ಅಧಿಕಾರ ಸ್ಥಾಪಿಸಲಾಯಿತು.

ಸೆಪ್ಟೆಂಬರ್ 2, 1945. ಹಾನೋಯಿ ನಗರದಲ್ಲಿ ತಾತ್ಕಾಲಿಕ ಸರ್ಕಾರ ಏರ್ಪಟ್ಟಿತು. ಅಧ್ಯಕ್ಷ ಹೋ ಚಿ ಮಿನ್ಹ್ ಸ್ವಾತಂತ್ರ್ಯದ ಘೋಷಣೆಯನ್ನು ಓದಿದರು ವಿಯೆಟ್ನಾಂ ಪ್ರಜಾಸತ್ತಾತ್ಮಕ ಗಣರಾಜ್ಯ ಸ್ಥಾಪನೆಗೊಂಡಿತು.

ದೇಶದ ದಕ್ಷಿಣ ಭಾಗದಲ್ಲಿ, ಮತ್ತೆ ಹತೋಟಿ ಪಡೆಯಲು ಬ್ರಿಟಿಷರ ನೆರವಿನಿಂದ ಫ್ರೆಂಚ್ ವಸಾಹತುಶಾಹಿಗಳ ಯತ್ನ. ಗೆರಿಲ್ಲಾ ಹೋರಾಟಗಾರರ ಪ್ರತಿರೋಧದ ಎದುರು ತನ್ನ ಉದ್ದೇಶ ಸಾಧಿಸುವಲ್ಲಿ ವಿಫಲಗೊಳ್ಳುತ್ತಿದ್ದ ವಸಾಹತುಶಾಹಿಗಳಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ನೆರವು.

ಡೀನ್ ಬೀನ್ ಫೂನಲ್ಲಿ ಭೀಷಣ ಕದನ 56 ದಿನಗಳ ಸಮರದ ನಂತರ ಮೇ 7, 1954, ಫ್ರೆಂಚರಿಗೆ ಭಾರೀ ಪರಾಭವ. ಹಸ್ತಕ್ಷೇಪ ನಡೆಸ ಬಯಸಿದ ಅಮೆರಿಕನ್ ಸಾಮ್ರಾಜ್ಯಶಾಹಿಗಳು ವಿಶ್ವಾದ್ಯಂತ ತೀವ್ರ ವಿರೋಧ ವ್ಯಕ್ತಪಟ್ಟಿದ್ದರಿಂದ ಹಿಂದೆಗೆದರು.

1954 ಜುಲೈನಲ್ಲಿ ವಿಯೆಟ್ನಾಮಿಗಳು ಹಾಗೂ ಫ್ರೆಂಚರ ನಡುವೆ ಆದ ಜಿನೇವಾ ಒಪ್ಪಂದದ ಪ್ರಕಾರ ವಿಯೆಟ್ನಾಮಿನ ಸ್ವಾತಂತ್ರ್ಯವನ್ನು ಫ್ರೆಂಚರು ಮಾನ್ಯತೆ ನೀಡಬೇಕಾಗಿತ್ತು. ಹಾಗೂ ಜುಲೈ 1956 ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ದೇಶದ ಪುನರೇಕೀಕರಣವಾಗಬೇಕಿತ್ತು. ಆದರೆ ಹೀಗಾಗದಂತೆ ಮಾಡಲು ಅಮೆರಿಕನ್ ಸಾಮ್ರಾಜ್ಯಶಾಹಿಗಳು ತಮ್ಮ ಸಕಲ ಶಕ್ತಿ ಬಳಸಿದರು.

ಸೈಗಾನ್‌ನಲ್ಲಿ "ವಿಯೆಟ್ನಾಂ ಗಣರಾಜ್ಯ" ಎಂಬ ಕೈಗೊಂಬೆ ಸರ್ಕಾರವನ್ನು ಅವರು ಪ್ರತಿಸ್ಥಾಪಿಸಿದರು. ಇದು ಜಿನೇವಾ ಒಪ್ಪಂದದ ಉಲ್ಲಂಘನೆಯಾಗಿತ್ತು. ದಕ್ಷಿಣ ವಿಯೆಟ್ನಾಂನ ಜನತೆ ಈ ಉಲ್ಲಂಘನೆಯನ್ನು ಸಹಿಸಿಕೊಳ್ಳಲಿಲ್ಲ. ಹೋರಾಟ ಮತ್ತೆ ಆರಂಭವಾಯಿತು. ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ಹೋರಾಟಕ್ಕೆ ಧುಮುಕಲಾರಂಭಿಸಿದರು. ಅಮೆರಿಕನ್ ಸಾಮ್ರಾಜ್ಯಶಾಹಿಗಳು ವಿಯೆಟ್ನಾಮೀ ನಗರಗಳ ಮೇಲೆ ಬಾಂಬುಗಳು ರಾಸಾಯನಿಕಗಳ ಮಳೆಸುರಿದರೂ ಜಗ್ಗದೆ ಇಪ್ಪತ್ತು ವರ್ಷಗಳ ಅತ್ಯಂತ ಕಷ್ಟಕರ ಹೋರಾಟಗಳಲ್ಲಿ ಅಭೂತಪೂರ್ವ ಶೌರ್ಯ, ಧೈರ್ಯ, ಅಪಾರತ್ಯಾಗ ಹಾಗೂ ಬಲಿದಾನಗಳ ನಂತರ ಜಗತ್ತಿನ ಅತ್ಯಂತ ಬಲಶಾಲಿ ಶಕ್ತಿಯೆನಿಸಿದ ಅಮೆರಿಕನ್ ಸಾಮ್ರಾಜ್ಯಶಾಹಿಗಳನ್ನು ಪೂರ್ಣವಾಗಿ ನಿರ್ಣಾಯಕವಾಗಿ ಸೋಲಿಸಿದರು. ದುಡಿಯುವ ಜನಗಳ ಅಪಾರ ಸಾಮರ್ಥ್ಯವನ್ನು ತೋರಿಸಿಕೊಟ್ಟರು.

ಏಪ್ರಿಲ್ 30, 1975 ಸೈಗಾನ್ ನಗರ ಹಾಗೂ ಸಂಪೂರ್ಣ ದಕ್ಷಿಣ ವಿಯೆಟ್ನಾಂ ವಿಮೋಚನೆಗೊಂಡಿತು. ವಿಯೆಟ್ನಾಂ ರಾಷ್ಟ್ರೀಯ ಪುನರೇಕೀಕರಣ ನಡೆದು ಸಮಾಜವಾದಿ ವಿಯೆಟ್ನಾಂ ಸ್ಥಾಪನೆಗೊಂಡಿತು.

○

> ವಿಯೆಟ್ನಾಂವಿರುದ್ಧ 1964 ರಿಂದ 1975 ರವರೆಗೆ, 11 ವರ್ಷಗಳ ಕಾಲನಡೆದ ದೀರ್ಘ ಯುದ್ಧದಲ್ಲಿ 15,000,000 ಟನ್ ಬಾಂಬ್‌ಗಳನ್ನು ಬಳಸಲಾಯಿತು
>
> ಇದು ಎರಡನೇ ಮಹಾಯುದ್ಧದಲ್ಲಿ ಬಳಸಿದುದಕ್ಕಿಂತ ಮೂರು ಪಟ್ಟು ಹೆಚ್ಚು.
>
> ಹಿರೋಷಿಮಾದ ಮೇಲೆ ಹಾಕಿದಂತಹ, 700 ಅಣುಬಾಂಬ್‌ಗಳಿಗೆ ಸಮ.

ಎರಡನೇ ಮಹಾಯುದ್ಧದ ನಂತರದ ಯುದ್ಧಗಳಲ್ಲಿ ವಿಯಟ್ನಾಂ ಯುದ್ಧ ಅತ್ಯಂತ ಭೀಕರವಾದದ್ದು. ಸಾಮ್ರಾಜ್ಯಶಾಹೀ ಅಮೇರಿಕಾ ಇಲ್ಲಿ ನಡೆಸಿದ ಬರ್ಬರ ಹತ್ಯಾಕಾಂಡ ಚರಿತ್ರೆಯಲ್ಲೇ ಕಂಡರಿಯದಂತಹದ್ದು. 1971 ಒಂದೇ ವರ್ಷದಲ್ಲಿ ವಿಯೆಟ್ನಾಂ, ಲಾವೋಸ್, ಕಾಂಬೋಡಿಯಾದ ಮೇಲೆ ಹಾಕಲಾದ ಬಾಂಬ್ ಎರಡನೇ ಮಹಾಯುದ್ಧದಲ್ಲಿ ಒಟ್ಟು ಎಷ್ಟು ಬಾಂಬ್ ಹಾಕಲಾಗಿತ್ತೋ ಅದರ ಒಂದೂವರೆ ಪಾಲಷ್ಟಾಗಿತ್ತು. ಈ ಚಿಕ್ಕ ದೇಶದ 60 ಪಟ್ಟಣಗಳು ನೆಲಸಮವಾದವು, ಎಲ್ಲಾ ಕಾರ್ಖಾನೆ, ವಿದ್ಯುತ್ ಉತ್ಪಾದನಾ ಕೇಂದ್ರ, ಸೇತುವೆ, ಅಣೆಕಟ್ಟುಗಳು ಧ್ವಂಸ ಆದವು ಸುಮಾರು 3000 ಶಾಲೆ, 350 ದೊಡ್ಡ ಆಸ್ಪತ್ರೆಗಳು ನಾಶ ಆದವು. ಸಾಮ್ರಾಜ್ಯಶಾಹಿ ಅಮೇರಿಕಾ ಅತ್ಯಂತ ನಾಜೂಕಾದ ಉಪಕರಣವನ್ನು ಈ ಯುದ್ಧದಲ್ಲಿ ಬಳಸಿತು. ವಿಮಾನದಿಂದ ರಾತ್ರಿ ವೇಳೆ ಹಿಂಕೆಂಪು (infra red) ಫೋಟೋಗಳನ್ನು ತೆಗೆದು ವೈರಿಯ ಚಲನವಲನಗಳನ್ನು ನಿರ್ಧರಿಸಲಾಯಿತು.

ಕನ್ನಡ ನಾಡು ನುಡಿಯ ಇತಿಹಾಸ ಭವ್ಯ
ಅದರ ಪುನರುತ್ಥಾನಕ್ಕೆ ನಮ್ಮ ಯೋಜನೆಗಳು

ಕರ್ನಾಟಕ ತನ್ನದೇ ಆದ ಭವ್ಯ ಪರಂಪರೆಯನ್ನು ಹೊಂದಿದೆ. ಈ ಪರಂಪರೆಯುನ್ನು ಉಳಿಸಿ, ಬೆಳೆಸಿ, ಕನ್ನಡ ಭಾಷೆಯನ್ನು ಅಭಿವೃದ್ಧಿಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎರಡು ಪ್ರಮುಖ ಯೋಜನೆಗಳನ್ನು ಹಮ್ಮಿಕೊಂಡಿದೆ.

1) ಕನ್ನಡ ಅಭಿವೃದ್ಧಿ :

ಈ ಯೋಜನೆಯ ತರಬೇತಿ ಶಿಬಿರಗಳು, ಭಾಷಾಂತರ ಮತ್ತು ಪ್ರಕಟಣೆಗಳು ಹಾಗೂ ಇತರ ಪ್ರೋತ್ಸಾಹಕ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಮೂಲಕ ರಾಜ್ಯದ ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗ ಎಲ್ಲ ಅಧಿಕಾರಿಗಳು ಮತ್ತು ನೌಕರರಿಗೆ ಆಡಳಿತ ಕನ್ನಡದಲ್ಲಿ ತರಬೇತಿ, ಎಲ್ಲ ಇಲಾಖೆಗಳ ಪಾರಿಭಾಷಿಕ ಶಬ್ದಕೋಶಗಳ ರಚನೆ, ಪರಿಷ್ಕರಣ ಹಾಗೂ ಅನುವಾದ, ಕನ್ನಡ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರಿಗೆ ಪ್ರೋತ್ಸಾಹ, ಧನ ಸಹಾಯ ಮತ್ತು ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಕೆಲ ಹಂತದಲ್ಲಿ ವಿದ್ಯಾರ್ಥಿವೇತನ ನೀಡಿಕೆ ಮುಂತಾದ ಕಾರ್ಯಕ್ರಮಗಳು.

2) ಸಾಹಿತ್ಯ ಮತ್ತು ಸಂಸ್ಕೃತಿ ಚಟುವಟಿಕೆಗಳು :

ರಾಜ್ಯದಲ್ಲಿ ಸಾಹಿತ್ಯ, ನಾಟಕ, ಲಲಿತಕಲೆ, ಸಂಗೀತ, ನೃತ್ಯ, ಜಾನಪದ, ಯಕ್ಷಗಾನ ಮತ್ತು ಉರ್ದು ಅಕಾದೆಮಿಗಳು ಸ್ಥಾಪಿತಗೊಂಡಿವೆ. ಇವುಗಳ ಮೂಲಕ ಸಾಹಿತಿಗಳು ಕಲಾವಿದರಿಗೆ ಸೂಕ್ತ ಪ್ರೋತ್ಸಾಹ. ರಾಜ್ಯದ ಹೊರಗಡೆಯೂ ತಮ್ಮ ಪ್ರತಿಭೆ ತೋರಲು ಎಲ್ಲ ಅವಕಾಶ ಮತ್ತು ಪ್ರೋತ್ಸಾಹ. ಪುಸ್ತಕಗಳ ಪ್ರಕಟಣೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದಂತೆ ವಿಚಾರ ಸಂಕಿರಣಗಳು, ಲೇಖಕರಿಗೆ ಮತ್ತು ಕಲಾವಿದರಿಗೆ ಪ್ರಶಸ್ತಿ ನೀಡಿಕೆ, ಮಾಸಾಶನ ಮತ್ತು ಗೌರವಧನ ನೀಡಿಕೆ, ಲೇಖಕರ ಮತ್ತು ಕಲಾವಿದರ ವಿಶೇಷ ಜ್ಞಾನಾರ್ಜನೆಗಾಗಿ ಪ್ರವಾಸಾನುದಾನ, ವೈದ್ಯಕೀಯ ನೆರವು, ಹೊರನಾಡಿನ ಕನ್ನಡ ಸಂಘ ಸಂಸ್ಥೆಗಳ ಚಟುವಟಿಕೆಗಳಿಗೆ ಸಹಾಯಧನ, ರಂಗ ತರಬೇತಿ ಕಾರ್ಯಕ್ರಮ ಶಿಬಿರಗಳು ಗ್ರಂಥ ಭಂಡಾರಗಳಿಗೆ ಸಹಾಯಧನ ನೀಡಿಕೆ ಮುಂತಾದ ಕಾರ್ಯಕ್ರಮಗಳು, ಇಷ್ಟೇ ಸಾಲದೆಂಬಂತೆ ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಸ್ಥಾನವಾಗಿ ಬೆಂಗಳೂರಿನಲ್ಲಿ ರವೀಂದ್ರ ಕಲಾಕ್ಷೇತ್ರ, ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ರಂಗಮಂದಿರಗಳು.

ಈ ಎಲ್ಲಾ ಕಾರ್ಯಗಳಿಂದಾಗಿ ಕನ್ನಡ ಭಾಷೆ ಮತ್ತು ನಾಡಿನ ಭವ್ಯ ಪರಂಪರೆಯ ಪುನರ್ ನಿರ್ಮಾಣವಾಗುತ್ತಲಿದೆ.

ಎಂ.ಸಿ.ಅ : 311285

'ಕರ್ನಾಟಕ ವಾರ್ತೆ'


ಅನಾಮಿಕರು

ಅವರು ಕಾಯುತ್ತಾರೆ
ಗುಹೆಗಳಲ್ಲಿ, ಕಾಡುಗಳಲ್ಲಿ; ಬೆಟ್ಟಗಳಲ್ಲಿ
ಹಾರಿ ಬಂದ ಶೆಲ್ಲುಗಳ ಹೆಕ್ಕುತ್ತಾ
ಸಿಡಿಯಲಾರದ ಬಾಂಬುಗಳು ಉಸಿರು ಪಡೆಯುವ ಮುನ್ನ
ನಿಷ್ಕ್ರಿಯಗೊಳಿಸುತ್ತಾ –
ಗುರಿ ಮಾಡಿದ ಬಂದೂಕುಗಳಿಗೆ
ತಿರುಗುವ ಕ್ಷಿಪಣಿಗೆ
ಕೆಲವೊಮ್ಮೆ ಆಹಾರವಾಗುತ್ತ
ನೀರವ ರಾತ್ರಿಗಳಲ್ಲಿ,
ಹಾಡ ಗುನುಗುಗಳು ಸಂಗಾತಿಯಾಗಿದ್ದಾಗ
ಶೆಲ್ಲು ಕತ್ತಲ ಮರೆಸಿ
ಬಾಂಬು ಒಡಲನು ಕುದಿಸಿ
ಶಬ್ದಗಳ ಸೀಳುತ್ತವೆ
ನಮ್ಮ ಹೃದಯದಿಂದ ಹಾಡಗುನುಗುಗಳ ಕಿತ್ತು
ಮೂಕ ರಾತ್ರಿಗಳಲ್ಲಿ
ಸತ್ತು ಬಿದ್ದಿದೆ ರಸ್ತೆ
ಕರೆದೊಯ್ಯಲಾಗಿದೆ ಕನಸುಗಳ ನಮ್ಮೂರಿಗೆ
ಕತ್ತಲಿನ ನಿಟ್ಟುಸಿರು
ಗಾಢ ಕಾಡುವ ನೋವು
ತಲುಪಲಾರವೆ ಬೆಳಕು ರಾಜ್ಯವನ್ನು
ಇಲ್ಲಿ ಕತ್ತಲಿನಲ್ಲಿ
ಹೆಪ್ಪುಗಟ್ಟಿದ ಮೌನ
ಗುಳೆ ಎದ್ದ ಮಾತುಗಳು ತಿರುಗಿ ಬರಲಿಲ್ಲ
ಕಣ್ಣು ಕೊಡು, ಕನಸ ಕೊಡು
ಕವನ ಕೊಡು, ರಾಗ ಕೊಡು
ದೂರದಲಿ ಉಳಿದ ನಿಮ್ಮ ತುಣುಕುಗಳಿಗೆ
ಹಾಡಲಾಗದ ಎದೆಗೆ ಒಂದಿಷ್ಟು ಭಾವಗಳ
ಹಾರಲಾಗದ ಮನಕೆ ಒಂದಷ್ಟು ರೆಕ್ಕೆ
ಬಾಂಬು ಬೀಳಲಿ ಇನ್ನು, ಶೆಲ್ಲುಗಳು ಹಾಕಲಿ
ನಮ್ಮ ಎದೆ ಕನಸನ್ನು
ಕಡಿದಷ್ಟೂ ಗೆಳೆಯ
ಅವು ಚಿಗುರುತ್ತಲೇ ಇರುತ್ತವೆ
ವಿಯಟ್ನಾಂನ ಕ್ಷನು ಮರಗಳಂತೆ
ಒಂದೊಂದೇ ಶೆಲ್ಲುಗಳು ಎದೆಗೆ ಬಡಿದಂತೆಲ್ಲಾ
ಉಳಿಯುವುವು ಹಾಡ ಗುನುಗುಗಳು, ಭಾರ ಎದೆ ಬಡಿತಗಳು ಮಾತ್ರ.

—ಜಿ. ಎನ್. ಮೋಹನ್

ಕ್ರಾಂತಿಕಾರಿ ಯೋಧರನ್ನು ಹುಡುಕಲು ಅತ್ಯಂತ ಸೂಕ್ಷ್ಮವಾದ ಇಲೆಕ್ಟ್ರಾನಿಕ್ ಉಪಕರಣಗಳನ್ನು ಬಳಸಲಾಯಿತು. ಸಮುದ್ರದ ನೀರಿನಡಿಯಲ್ಲಿ ಸಿಡಿ ಬಾಂಬ್‌ಗಳನ್ನಿರಿಸಿ ವಿಯೆಟ್ನಾಂಗೆ ದಿಗ್ಬಂಧನ ಹಾಕಲಾಯಿತು. ವಿಯೆಟ್ನಾಂ ಮೇಲೆ ವಿಷ ವಸ್ತುಗಳನ್ನು ಎರಚಲಾಯಿತು. ಉತ್ತರ ವಿಯೆಟ್ನಾಂನ ಶೇಕಡ 30 ಕಾಡುಗಳು ನಿರ್ನಾಮವಾದವು. ಶೇಕಡ 30 ಕಾಡುಗಳು ನಿರುಪಯುಕ್ತ ಆದವು. ವಿಷವಸ್ತುಗಳ ಪರಿಣಾಮವಾಗಿ ಸಸ್ಯ ಸಂಪತ್ತಿನ ನಾಶ ಇನ್ನೂ ಮುಂದುವರಿಯುತ್ತಿದೆ. ವಿಯೆಟ್ನಾಂನ ಕಾಡುಗಳಲ್ಲಿ ಇಂದು ತೇಗದ ಮರ 10–12 ಅಡಿಗಳಿಗಿಂತ ಹೆಚ್ಚಾಗಿ ಬೆಳೆಯುತ್ತಿಲ್ಲ. ಇದರಿಂದ ಬೇಸಾಯ ಮಾಡುವ ಭೂಮಿ ಎಷ್ಟು ಹಾಳಾಯಿತೆಂದರೆ, ಪುನಃ ಮೊದಲಿನ ಸ್ಥಿತಿಗೆ ತರಲು ಇಡೀ ವಿಯೆಟ್ನಾಂ ಭೂಮಿಯ 2-3 ಅಡಿಗಳಷ್ಟು ಪದರುಗಳನ್ನು ತೆಗೆಯ ಬೇಕಾಗುತ್ತದೆ. ಪುನ: ಮೊದಲಿನ ಸ್ಥಿತಿಗೆ ತಾರದಷ್ಟು ಸಸ್ಯ ಸಂಪತ್ತು ನಾಶ ಹೊಂದಿದೆ. ಈ ಬರ್ಬರತೆಯನ್ನು ಜಗತ್ತಿನಾದ್ಯಂತ ಜನತೆ ವಿರೋಧಿಸಿತು. ಸಾಮ್ರಾಜ್ಯಶಾಹೀ ಅಮೇರಿಕಾದಲ್ಲೇ ಇದರ ವಿರುದ್ಧ ವಿದ್ಯಾರ್ಥಿಗಳೂ, ಬುದ್ಧಿಜೀವಿಗಳು ಬೀದಿಗಿಳಿದರು ಲಕ್ಷಾಂತರ ಅಮೇರಿಕನ್ ಬಾಲಕ ಬಾಲಕಿಯರು ಹತ್ಯೆಗೀಡಾದರು. ಬಂಡವಾಳಶಾಹೀ ಪರ ತತ್ವಜ್ಞಾನಿ ಬರ್ಟ್ರಂಡ್ ರಸೆಲ್ ಕೂಡ ಈ ಹತ್ಯಾಕಾಂಡವನ್ನು ಖಂಡತುಂಡವಾಗಿ ಖಂಡಿಸಿದರು. ಬಹುರಾಷ್ಟ್ರೀಯ ಕಂಪೆನಿಗಳಿಗೆ ಅಪಾರ ಲಾಭತಂದ ಈ ಬರ್ಬರ ಯುದ್ಧವನ್ನು ನಿಲ್ಲಿಸಲು ಒಪ್ಪದ ಸಾಮ್ರಾಜ್ಯಶಾಹಿಯನ್ನು ವಿಯೆಟ್ನಾಂ ಒದ್ದೋಡಿಸಿತು. 1975 ರ ಮೇ ದಿನಾಚರಣೆಯ ಸಮಯದಲ್ಲಿ ಅಮೇರಿಕಾ ವಿಯೆಟ್ನಾಂ ನಿಂದ ಪಲಾಯನ ಮಾಡಿತು. ವಿಯೆಟ್ನಾಂ ಗೆದ್ದಿತು. ಕ್ರಾಂತಿಗೆ ಜಯವಾಯಿತು.

ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಮೊದಲ ಧಾಳಿ ಯೋಜನೆ ಅಥವಾ "ತಾರಾ ಯುದ್ಧ"



ತಾರಾ ಸಮರ ಏಕೆ ?

ತಾರಾ ಸಮರ ವ್ಯೂಹ – ಹೊಸ ಭೌತಿಕ ನೀತಿಗಳ ಮೇಲೆ ಆಧಾರಿತ (ತೀಕ್ಷ್ಣ ಕಿರಣ ಪುಂಜ, ಅತ್ಯಂತ ವೇಗದ ಮೂಲಭೂತ ಕಣಗಳು, ವಿದ್ಯುತ್ ಕಾಂತೀಯ ಬಂದೂಕುಗಳು ಇತ್ಯಾದಿ) ಅಸ್ತ್ರಗಳನ್ನು ಮತ್ತು ಪ್ರತಿ – ಕ್ಷಿಪಣಿಗಳನ್ನು ಭೂಮಿಯ ಮೇಲೆ, ವಿಮಾನಗಳ ಮೂಲಕ ಆಕಾರದಲ್ಲಿ, ಉಪಗ್ರಹಗಳಲ್ಲಿ, ಬಾಹ್ಯಾಕಾಶದಲ್ಲಿ, ಬೇರೆ ಬೇರೆ ಹಂತಗಳಲ್ಲಿ ಸ್ಥಾಪಿಸಿ ಇವುಗಳ ಸಮನ್ವಯ ನಿಯಂತ್ರಣದಿಂದ ವೈರಿ ಕ್ಷಿಪಣಿಗಳು ಇನ್ನೂ ಅ. ಸಂ. ಸಂ. ತಲುಪುವ ಮೊದಲೇ ದಾರಿಯಲ್ಲಿ ಹೊಡೆದು ಹಾಕುವ - ಖಂಡಾಂತರ ಕ್ಷಿಪಣಿಗಳಿಗೆ ಪ್ರತಿಕಾರವೆನಿಸುವ ವ್ಯೂಹ.

ಚಿತ್ರದಲ್ಲಿ ತೋರಿಸಿರುವ ಉದಾಹರಣೆ ತೆಗೆದುಕೊಂಡರೆ ಸೋವಿಯತ್ ಒಕ್ಕೂಟದ ಮೇಲೆ ಮೊದಲು ಆಕ್ರಮಣ ಮಾಡಿ ಅದರ ಮಿಲಿಟರಿ ನೆಲೆಗಳನ್ನು, ಶಸ್ತ್ರಾಸ್ತ್ರಗಳನ್ನು, ಸಂಪತ್ತನ್ನು, ಜನ ಜೀವನವನ್ನು ನಾಶಗೊಳಿಸಿ ಪ್ರತಿಯಾಗಿ ಖಂಡಾಂತರ ಕ್ಷಿಪಣಿಗಳು ಹೊರಟಾಗ ದಾರಿಯಲ್ಲಿ, ಮೂರು ಹಂತಗಳಲ್ಲಿ ಎಲ್ಲವನ್ನು ನಾಶಮಾಡುವ ಯೋಜನೆಯನ್ನು ಕಾಣಬಹುದು. ಮೊದಲಿನ ಎರಡು ಹಂತಗಳಲ್ಲಿ ನೂರಾರು ಉಪಗ್ರಹಗಳಲ್ಲಿ ಈ ಅಸ್ತ್ರಗಳು ಸಜ್ಜಿತವಾಗಿದ್ದರೆ, ಮೂರನೆಯ ಹಂತದಲ್ಲಿ ಭೂಮಿಯ ಮೇಲೆ ಇರುವ ಕ್ಷಿಪಣಿಗಳು ಉಪಯೋಗಿಸಲ್ಪಡುತ್ತವೆ. ಖಂಡಾಂತರ ಕ್ಷಿಪಣಿಗಳ ಕೇವಲ 22 ನಿಮಿಷಗಳ ಯಾನದಲ್ಲಿ ಎಲ್ಲಾ ಕ್ಷಿಪಣಿಗಳನ್ನು ಹೊಡೆದು ಹಾಕುವುದು ತಾರಾ ಸಮರ ಯೋಜನೆಯ ಘೋಷಿತ ಉದ್ದೇಶ.

ತಾರಾ ಸಮರದ ಎಲ್ಲಾ ಉಪಕರಣಗಳನ್ನು ಹೊತ್ತ 500 ಟನ್ನುಗಳಷ್ಟು ಭಾರದ ನೂರಾರು ಉಪಗ್ರಹಗಳು 150–1500 ಕಿ. ಮೀ ಎತ್ತರದ ಕಕ್ಷೆಯಲ್ಲಿ ಸುತ್ತುತ್ತಿರುತ್ತವೆ. ಇವು ತಮ್ಮದೇ ಆದ ಅಣುಶಕ್ತಿ ಸ್ಥಾವರ, ನಿಯಂತ್ರಣ ಕಂಪ್ಯೂಟರ್‌ಗಳನ್ನು ಹೊಂದಿರುತ್ತವೆ.

ತಾರಾ ಸಮರ

ನೀಲ ಗಗನದ ತುಂಬೆಲ್ಲಾ ಬಾಂಬುಗಳು

...ಒಂದು ಸಣ್ಣ ತಪ್ಪು ಪರಮಾಣು ಸಮರವನ್ನು ಆರಂಭಿಸಬಲ್ಲದು. ಹೀಗೆ ಯುದ್ಧ ಒಮ್ಮೆ ಆರಂಭವಾದ ಮೇಲೆ ನಿರುಪಯುಕ್ತವಾಗುವುದು ಪರಮಾಣು ಅಸ್ತ್ರಗಳಲ್ಲ.... ರೇಗನ್.....

"ನಮಗೆ ಪರಮಾಣು ಅಸ್ತ್ರಗಳನ್ನು ಕೊಟ್ಟ ನೀವು, ನಿಮ್ಮ ಎಲ್ಲಾ ಜಾಣ್ಮೆಗಳನ್ನು ಮನುಕುಲ ಮತ್ತು ವಿಶ್ವಶಾಂತಿಗೆ ಉಪಯೋಗಿಸಿ, ಈ ಪರಮಾಣು ಅಸ್ತ್ರಗಳನ್ನು ಹಳಸಲುಗೊಳಿಸಿ ನಿರ್ವೀರ್ಯಗೊಳಿಸಿ"

ಇದನ್ನು ಯಾರು ಹೇಳಿರಬಹುದು. ಊಹಿಸಿ ನೋಡೋಣ ?

ಇದು ಅಮೆರಿಕಾದ ವಿಜ್ಞಾನಿಗಳಿಗೆ, ರೇಗನ್ ಕೊಟ್ಟ ಕರೆಯೆಂದರೆ ನಂಬುತ್ತೀರಾ. ನೀವು ನಂಬದಿರಬಹುದು. ಆದರೆ ಸತ್ಯ. ಮಾರ್ಚ್ 12, 1983 ರಂದು ಈ ಶತಮಾನದ ಅತಿ ದುಬಾರಿ ದುಸ್ಸಾಹಸವಾದ 'ತಾರಾಯುದ್ಧ'— ಅದಕ್ಕೆ ರೇಗನ್‌ರ ಹೆಸರು -ರಕ್ಷಣಾವ್ಯೂಹ ಸಜ್ಜಿಕೆ' ಕಾರ್ಯಕ್ರಮವನ್ನು ಅಮೇರಿಕನ್ನರ ಮುಂದಿಡುವಾಗ ಹೇಳಿದ ಮಾತುಗಳಿವು. ವಿಶ್ವಶಾಂತಿಯ ಬಗ್ಗೆ ಈ ಬಗೆಯ ಸವಿ ಮಾತುಗಳಿಂದ ಮುಂದಿಡಲಾದ ಈ ಕಾರ್ಯಕ್ರಮ ರೇಗನ್‌ರ ಪ್ರಚಾರ ಹೇಳುವಂತೆ–

— ಪರಮಾಣು ಅಸ್ತ್ರಗಳನ್ನು "ಹಳಸಲುಮತ್ತು ನಿರ್ವೀರ್ಯಗೊಳಿಸುವ" ರಕ್ಷಣಾ ಕವಚ ನಿರ್ಮಿಸುವಂತಹುದೆ ?

— ಅಮೇರಿಕನ್ ಜನತೆಯನ್ನು ಪರಮಾಣು ಅಸ್ತ್ರದ ಭಯದಿಂದ ಶಾಶ್ವತವಾಗಿ ಮುಕ್ತ ಮಾಡುವ "ಪರಮಾಣು ಕೊಡೆ"ಯೇ?

— ಅಥವಾ ಈ ಕಾರ್ಯಕ್ರಮಕ್ಕೆ ಅಂಟಿಕೊಂಡಿರುವವೈಜ್ಞಾನಿಕ ವಿಸ್ಮಯ ಚಲನಚಿತ್ರದ ಹೆಸರು "ತಾರಾ ಸಮರ" (Star war) ಸೂಚಿಸುವಂತೆ ಹೊಸ ಸಮರ ತಂತ್ರವೇ ?


ಬರಿಯ ಕವಚವಲ್ಲ, ಖಡ್ಗ

ತಾರಾ ಸಮರ ಕಾರ್ಯಕ್ರಮದ ಮತ್ತು ಅಮೆರಿಕದ ಇತರ ಮಿಲಿಟರಿ ಕಾರ್ಯಕ್ರಮಗಳ ಅಧ್ಯಯನ ಮಾಡಿದರೆ ರೇಗನ್ ಸರ್ಕಾರದ ರಣನೀತಿಯ ಕುತಂತ್ರದ ಅಪಾಯದ ಆಳವಾದ ಅರಿವು ಆಗುತ್ತದೆ. ಈ ರಣನೀತಿ ಒಂದು ಕಡೆ ಭಾರೀ ಪ್ರಮಾಣದಲ್ಲಿ ಮೊದಲ ಧಾಳಿಯ ಸಾಮರ್ಥ್ಯವನ್ನು ತೀವ್ರವಾಗಿ ಹೆಚ್ಚಿಸುತ್ತಿದೆ. ಎಂ-ಎಕ್ಸ್, ಮಿಜೆಟಿಮನ್ ಖಂಡಾಂತರ ಕ್ಷಿಪಣಿಗಳು ಸಬ್‌ಮೆರಿನ್‌ನಿಂದ ಹೊಡೆಯುವ ಟ್ರೈಡೆಂಟ್–೭ ಮುಂತಾದ ಹೊಸ ಕ್ಷಿಪಣಿಗಳ ಬೆಳವಣಿಗೆ ಉತ್ಪಾದನೆ ಮತ್ತು ಈಗಾಗಲೇ ಇರುವ ಪೆರ್ಶಿಂಗ್ ಮತ್ತು ಕ್ರೂಯ್ಸ್ ಕ್ಷಿಪಣಿಗಳ ಉತ್ಪಾದನೆಯನ್ನು ಬಹಳ ತುರ್ತಾಗಿ ಕೆಗೆದುಕೊಂಡಿದೆ. ಸುಮಾರು 17,000 ಪರಮಾಣು ಅಸ್ತ್ರಸಜ್ಜಿತ ಕ್ಷಿಪಣಿಗಳು ಭರದಿಂದ ತಯಾರಾಗುತ್ತಿವೆ. ತಾರಾ ಸಮರ ರಕ್ಷಣಾತ್ಮಕವಾಗಿದ್ದು ಪರಮಾಣು ಅಸ್ತ್ರಗಳನ್ನು ನಿರುಪಯೋಗಿ ಮಾಡುವುದು ಇದರ ಉದ್ದೇಶವಾದರೆ ಈ ತುರ್ತು ತಯಾರಿಕೆ ಏಕೆ? ಇನ್ನೊಂದು ಕಡೆ ಇದೇ ಕ್ಷಿಪಣಿಗಳಿಗೆ ಪ್ರತಿಕಾರ ವ್ಯೂಹವಾದ 'ತಾರಾ ಸಮರ' ಕಾರ್ಯಕ್ರಮ. ಬರಿಯ ರಕ್ಷಣಾ ಕ್ರಮವಾಗಿ ಈ ಕಾರ್ಯಕ್ರಮ ಬಹಳ ದುಬಾರಿಯಾದದ್ದು, ಮತ್ತು ವ್ಯರ್ಥ ಎಂದು ಹಲವರ ಅಭಿಪ್ರಾಯ.

"ತಾರಾ ಸಮರಕ್ಕೆ ವಿರೋಧ" (ಬಾಕ್ಸ್ ನೋಡಿ) ಇದನ್ನು ತಿಳಿಯಲಾರದಷ್ಟು ಈ ಯೋಜನೆಯ ಹಿಂದಿರುವವರು ಮೂಢರಲ್ಲ. ತಾರಾ ಸಮರ ವ್ಯೂಹಕ್ಕೆ ಕ್ಷಿಪಣಿಗಳಿಗೆ ಪ್ರತಿಕಾರ ಮಾಡುವ ರಕ್ಷಣಾ ಸಾಧ್ಯತೆ ಅಲ್ಲದೆ, ಉಪಗ್ರಹಗಳಿಗೆ ಹೊಡೆಯುವ, ಭೂಮಿಯ ಮೇಲಿನ ಗುರಿಯನ್ನು ಭಸ್ಮಮಾಡುವ ಮಾರಕ ಸಾಧ್ಯತೆಗಳಿವೆ.

ಸೋವಿಯತ್ ಒಕ್ಕೂಟದ ಹೆಚ್ಚಿನ ಅಸ್ತ್ರಗಳನ್ನು ಭಾರಿ ಪ್ರಮಾಣದ ಮೊದಲ ಹೊಡೆತದಿಂದ ನಿರ್ನಾಮಗೊಳಿಸುವುದು, ಸೋವಿಯೆತ್ ದೇಶ ತನ್ನಲ್ಲಿ ಅಳಿದುಳಿದ ಅಸ್ತ್ರಗಳಿಂದ ಧಾಳಿ ಮಾಡಿದರೆ ತಾರಾ ಸಮರ ವ್ಯೂಹದಿಂದ ತಡೆಯುವುದು. ಅಮೇರಿಕಾದ ನಿಜವಾದ ಉದ್ದೇಶ

....ಈ ಯೋಜನೆಗೆ ಅಧ್ಯಕ್ಷ ರೇಗನ್ ಅವರು ಅಮೇರಿಕನ್ ಪ್ರಜಾಪ್ರಭುತ್ವದ ಎಲ್ಲಾ ರೀತಿ ರಿವಾಜುಗಳನ್ನು ತಳ್ಳಿ ಅಂಗೀಕಾರ ನೀಡಿದ್ದಾರೆ.



ತಾರಾ ಸಮರ. ಅಳಿದುಳಿದ ಕ್ಷಿಪಣಿಗಳ ಪ್ರತಿ ಆಕ್ರಮಣದ ವಿರುದ್ಧ ರಕ್ಷಣೆ ಕೊಡಬಲ್ಲದು ಎಂದು ಇಲ್ಲಿ ಗಮನಿಸಬೇಕಾಗಿದೆ ಅಂದರೆ ತಾರಾ ಸಮರ ವ್ಯೂಹ ಪರಮಾಣು ಖಡ್ಗವನ್ನು ಝಳಪಿಸಿ, ಜಗತ್ತಿನ ಎಲ್ಲಾ ನಾಗರೀಕತೆಯನ್ನು, ಎಲ್ಲ ಜೀವಕೋಟಿಯನ್ನು ನಾಶಮಾಡಲು ಅನುವು ಮಾಡಿಕೊಡುವ ರಕ್ಷಣಾ-ಕವಚ. ಇದನ್ನು ಪರಮಾಣು ಯುದ್ಧದ ಭೀಕರ ಭಯದ ಛಾಯೆಯಡಿಯಲ್ಲಿ ಬದುಕುತ್ತಿರುವ ಅಮೆರಿಕನ್ ಮತ್ತು ವಿಶ್ವದ ಜನತೆಯಿಂದ ಮುಚ್ಚಿಡಲು ಮತ್ತು ಬೆಳೆಯುತ್ತಿರುವ ವಿರೋಧವನ್ನು ನಿವಾರಿಸಲು ರೇಗನ್ ಸರಕಾರ ಭಾರೀ ಅಬ್ಬರದ ಸುಳ್ಳು ಪ್ರಚಾರ ನಡೆಸಿದೆ. (ವಿವರಗಳಿಗೆ "ತಾರಾ ಸಮರಕ್ಕೆ ವಿರೋಧ" ನೋಡಿ) ಈ ಸುಳ್ಳು ಪ್ರಚಾರವನ್ನು ಬಯಲಿಗೆಳೆದು ತಾರಾ ಸಮರದ ನಿಜ ಸ್ವರೂಪವನ್ನು ತಿಳಿದುಕೊಳ್ಳುವುದು ಇದೀಗ ಅಗತ್ಯವಾಗಿದೆ.

ತಾರಾ ಸಮರ ಕಾರ್ಯಕ್ರಮದ ಪರಿಣಾಮ ಏನು ?

ತಾರಾ ಸಮರ ದೊಡ್ಡ ಪ್ರಮಾಣದಲ್ಲಿ ಅಂತರಿಕ್ಷದ ಮಿಲಿಟರೀಕರಣ ಮಾಡುತ್ತದೆ.

ತಾರಾ ಸಮರ ಯೋಜನೆ ಮೊದಲ ಭಾಗಿಗೆ ಬಾಹ್ಯ ಅಂತರಿಕ್ಷದಲ್ಲಿ ಮಾರಕಾಸ್ತ್ರಗಳನ್ನು ಸ್ಥಾಪಿಸುವ ಯೋಜನೆ ಹಾಕಿದೆ. ಇದು ಈವರೆಗಿನ ಶಸ್ತ್ರಾಸ್ತ್ರ ತಂತ್ರಜ್ಞಾನ ಮತ್ತು ಅದರಿಂದಾಗಿ ಯುದ್ಧದ ಕಾರ್ಯತಂತ್ರದಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡುತ್ತದೆ. ಅಂತರಿಕ್ಷವನ್ನು ಮಿಲಿಟರೀಕರಣಗೊಳಿಸುವುದರ ಮುಖ್ಯ ಪರಿಣಾಮವೆಂದರೆ ಇಡೀಜಗತ್ತಿನ ಎಲ್ಲಾ ಪ್ರದೇಶಗಳು, ಜನರು, ಕೈಗಾರಿಕಾ ಸ್ಥಾವರಗಳು ಇತ್ಯಾದಿಗಳು ಈ ಮಾರಕಾಸ್ತ್ರಗಳ ನಿಲುಕಿಗೆ ಹಿಂದೆಂದೂ ಇಲ್ಲದಂತೆ ನೇರವಾಗಿ, ಸುಲಭವಾಗಿ ಸಿಗುತ್ತವೆ. ಸಧ್ಯದಲ್ಲಿ ಸೈನ್ಯಗಳ, ಮಿಲಿಟರಿ ಸ್ಥಾವರಗಳ ನಿರೀಕ್ಷಣೆ ಮತ್ತು ಬೇಹುಗಾರಿಕೆಯ ಮಟ್ಟಿಗೆ ಮಾತ್ರ ಅಂತರಿಕ್ಷದ ಮಿಲಿಟರಿ ಉಪಯೋಗ ನಡೆದಿದೆ ಎಂದು ಇಲ್ಲಿ ಗಮನಿಸಬೇಕು. ಯಾವುದೇ ಮಾರಕಾಸ್ತ್ರಗಳು ಈಗ ಅಂತರಿಕ್ಷದಲ್ಲಿ ಇಲ್ಲ.

ತಾರಾ ಸಮರಕ್ಕೆ ವಿರೋಧ

* "ಇಂದು ಲಭ್ಯವಿರುವ ತಂತ್ರಜ್ಞಾನದಿಂದ ಈ ಸಂಕೀರ್ಣವಾದ ಎಲ್ಲ ರೀತಿಯ ದೋಷದಿಂದ ಮುಕ್ತವಾಗಿರಬೇಕಾದ ತಾರಾ ಸಮರದ ಯೋಜನೆಯನ್ನು ವಿನ್ಯಾಸ ಮಾಡುವುದು ಸಾಧ್ಯವಿಲ್ಲ....ಒಂದು ಸಣ್ಣ ತಪ್ಪು ಪರಮಾಣು ಸಮರವನ್ನು ಆರಂಭಿಸಬಹುದು. ಹೀಗೆ ಯುದ್ಧ ಒಮ್ಮೆ ಆರಂಭವಾದ ಮೇಲೆ ನಿರುಪಯುಕ್ತವಾಗುವುದು. ಪರಮಾಣು ಅಸ್ತ್ರಗಳಲ್ಲ- ರೇಗನ್........ ಈ ಯೋಜನೆಗೆ ಅಧ್ಯಕ್ಷ ರೇಗನ್ ಅವರು ಅಮೇರಿಕನ್ ಪ್ರಜಾಪ್ರಭುತ್ವದ ಎಲ್ಲಾ ರೀತಿ ರಿವಾಜುಗಳನ್ನು ತಳ್ಳಿ ಅಂಗೀಕಾರ ನೀಡಿದ್ದಾರೆ.

--ಡಾ|| ಜಾನ್ ಕೋಗುಟ್, ಖ್ಯಾತ ಅಮೇರಿಕನ್ ಭೌತ ವಿಜ್ಞಾನಿ ಮತ್ತು "ತಾರಾ ಸಮರದ ವಿರುದ್ಧ ವಿಜ್ಞಾನಿಗಳು" ಸಂಘಟನೆಯ ಸಕ್ರಿಯ ಸದಸ್ಯ.

* "ತಾರಾ ಸಮರ ಭಾರೀ ವೆಚ್ಚ ಮಾಡಿ, ನಿಮ್ಮ ಭದ್ರತೆಯನ್ನು ಹೆಚ್ಚಿಸುವ ಬದಲು ಕಡಿಮೆ ಮಾಡುವುದು."

— ಡಾ|| ಜಾನ್ ಬಾರ್ಡಿನ್- ಎರಡು ಬಾರಿ ನೊಬೆಲ್ ಪ್ರಶಸ್ತಿ ಪಡೆದ ವಿಜ್ಞಾನಿ. ಅಮೇರಿಕದ ಅಧ್ಯಕ್ಷರ ವಿಜ್ಞಾನಿಗಳ ಸಲಹಾಕಾರ ಮಂಡಳಿಯಿಂದ "ತಾರಾ ಸಮರ" ವಿರೋಧಿಸಿ ರಾಜೀನಾಮೆ ಕೊಟ್ಟ ವಿಜ್ಞಾನಿ.

* ಈ "ರಕ್ಷಣಾ ವ್ಯೂಹ" ಕಾರ್ಯ ಸಾಧ್ಯವಾದರೆ, ಇದು ಭದ್ರತೆಯನ್ನು ಬಲಪಡಿಸುವ ಬದಲು ಕೆಡಿಸುವುದು. ಮಧ್ಯಂತರ ಸಮಯವಲ್ಲಿ ಒಂದು ಪಕ್ಷದ ಬಳಿ ಇರದ "ರಕ್ಷಣಾ ವ್ಯೂಹ" ಇನ್ನೊಂದು ಪಕ್ಷದ ಬಳಿ ಇದ್ದರೆ, ಮೊದಲ-ಆಕ್ರಮಣದ ಯುದ್ಧ ನೀತಿಯನ್ನು ಯೋಚಿಸಲು ಅನುಕೂಲ ಮಾಡಿಕೊಡುತ್ತದೆ.

—ಲಂಡನ್ನಿನ "ಅಂತರಾಷ್ಟ್ರೀಯ ಯುದ್ಧ ನೀತಿ ಅಧ್ಯಯನ ಸಂಸ್ಥೆ"ಯ 1984-85 ರ ಯುದ್ಧ ನೀತಿ ಸಮೀಕ್ಷಣೆಯಿಂದ.

* ಇದು ಒಂದು ಭಾರಿಯ ವೆಚ್ಚ ಮಾತ್ರವಲ್ಲ, ಬಜೆಟ್‌ಗೆ ಒಂದು ಶಾಶ್ವತ ಹೊರೆ. ಈ ವೆಚ್ಚ ಇಡೀ ನೌಕಾಪಡೆಯ ವೆಚ್ಚವನ್ನು ಬಜೆಟ್‌ಗೆ ಸೇರಿಸಿದಂತೆ."

—ಜಾನ್ ಪೈಕ್ "ಅಮೇರಿಕನ್ ವಿಜ್ಞಾನಿಗಳ ಫೆಡರೇಷನ್" ತಾರಾ ಸಮರದ ವೆಚ್ಚದ ಕುರಿತು.

* "ಈ ಸಮುಚ್ಚಯದ ಸಂಕೀರ್ಣ ಅಗತ್ಯಗಳ ಉಲ್ಲೇಖ ಸಹ ಅಸ್ಪಷ್ಟವಾಗಿದೆ .... ಇದರ ಸಂಕೀರ್ಣ ಅಗತ್ಯಗಳು ಮತ್ತು ಅದನ್ನು ಪರೀಕ್ಷಿಸುವ ಅಸಾಧ್ಯತೆಯಿಂದಾಗಿ ನಾವು ಸಫಲರಾಗಿದ್ದೇವೆಂದು ಯಾವುದೇ ಭರವಸೆ ಇಟ್ಟುಕೊಳ್ಳಲು ಸಾಧ್ಯವಿಲ್ಲ."

—"ತಾರಾ ಸಮರ"ದ ಕಂಪ್ಯೂಟರ್ ತಂಡದಿಂದ ರಾಜೀನಾಮೆಗೆ ಕಾರಣ ಕೊಡುತ್ತಾ, ಖ್ಯಾತ ಕಂಪ್ಯೂಟರ್ ವಿಜ್ಞಾನಿ ಡಾ. ಡೇವಿಡ್ ಪರ್ನಾಸ್.

* "ತಾರಾಸಮರ ಸಂಭಾವ್ಯವೆಂದು, ಇದನ್ನು ಯಾರಾದರೂ ಗಂಭೀರವಾಗಿ ಪರಿಗಣಿಸುತ್ತಾರೆಂದು ನನಗನಿಸುವುದಿಲ್ಲ. ಇದು ರಶ್ಯನ್‌ರನ್ನು ದಿವಾಳಿ ಎಬ್ಬಿಸಲು ಒಂದು ತಂತ್ರವಷ್ಟೆ. ಆದರೆ ನಾವೂ ದಿವಾಳಿ ಏಳುತ್ತೇವೆ.

--ಐಸಾಕ್ ಅಸಿಮೋವ್, ಅಮೇರಿಕನ್ ವಿಜ್ಞಾನ ವಿಸ್ಮಯ ಕಥೆಗಾರ

ತಾರಾ ಸಮರ ಶಸ್ತ್ರಾಸ್ತ್ರ ಸಮತೋಲನ ನಾಶ ಮಾಡುತ್ತದೆ.

ಸಾಮ್ರಾಜ್ಯಶಾಹೀ ಅಮೇರಿಕದ ಅಣು ಬಾಂಬ್ ಸ್ಫೋಟದಿಂದ ಆರಂಭವಾದ ಶಸ್ತ್ರಾಸ್ತ್ರ ಪೈಪೋಟಿಯ ಪ್ರತೀ ಹಂತದಲ್ಲಿ ಅಮೇರಿಕವೇ ಹೊಸ ಹೊಸ ಶಸ್ತ್ರಾಸ್ತ್ರಗಳನ್ನು ತಯಾರಿಸಿ ಮುಂದೆ ಇತ್ತು. 70ರ ದಶಕದ ಹೊತ್ತಿಗೆ ಹೆಚ್ಚು ಕಡಿಮೆ ಸಮತೋಲನ ಸ್ಥಾಪಿತವಾಗಿ ಸ್ವಲ್ಪ ಮಟ್ಟಿನ ಭದ್ರತೆ ಮತ್ತು ಶಾಂತಿ ನೆಲೆಸಿತ್ತು. ರೇಗನ್ ಅಧಿಕಾರಕ್ಕೆ ಬಂದಾಗಿನಿಂದ ಅಮೇರಿಕ ವಿಶ್ವದಾದ್ಯಂತ ನಡೆಸುತ್ತಿರುವ ಆಕ್ರಮಣಗಳು ಯುದ್ಧಕ್ಕಾಗಿ ಕಾಲ್ಕೆರೆಯುವುದರ ಹಿನ್ನೆಲೆಯಲ್ಲಿ ತಾರಾ ಸಮರ ಯೋಜನೆಯ ಉದ್ದೇಶ ಈ ಸಮತೋಲನವನ್ನು ನಾಶಮಾಡಿ ಅಮೇರಿಕ ಮೇಲುಗೈ ಸಾಧಿಸುವಂತೆ ಮಾಡುವುದು. ಇದು ದೊಡ್ಡ ಪ್ರಮಾಣದ ಯುದ್ಧದ ಅಪಾಯವನ್ನು ಅಪಾರವಾಗಿ ಹೆಚ್ಚಿಸುತ್ತದೆ.

ಪರಮಾಣು ಯುದ್ಧದ ಅಪಾಯದ ಹೆಚ್ಚಳ

ಶಸ್ತ್ರಾಸ್ತ್ರ ಸಮತೋಲನ, ಆಕ್ರಮಣಕಾರೀ ರಾಷ್ಟ್ರಕ್ಕೆ, ಪ್ರತೀಕಾರಕ ಪರಮಾಣು ಹೊಡೆತದ ಭಯ ಮತ್ತು ಪರಮಾಣು ಅಸ್ತ್ರಗಳ ಮೇಲೆ ತಪ್ಪಿನ ಸಾಧ್ಯತೆ ಕಡಿಮೆ ಇರುವ ಸಂಕೀರ್ಣ ರಾಜಕೀಯ ನಿಯಂತ್ರಣದಿಂದಾಗಿ – ಈ ವರೆಗೆ ಪರಮಾಣು ಯುದ್ಧದ ಅಪಾಯ ಕಡಿಮೆ ಇತ್ತು. ಮೊದಲು ಪರಮಾಣು ಆಕ್ರಮಣ ಮಾಡಿ, ಪ್ರತೀಕಾರಕ ಹೊಡೆತದ ವಿರುದ್ಧ ರಕ್ಷಣಾ ವ್ಯೂಹ ಉಪಯೋಗಿಸುವ ಸಾಧ್ಯತೆ ಇರುವುದರಿಂದ, ಮೊದಲ ಆಕ್ರಮಣ ಮಾಡುವ ಚಪಲದಿಂದಾಗಿ ಅಣು ಯುದ್ಧದ ಸಾಧ್ಯತೆ ಬಹಳಷ್ಟು ಹೆಚ್ಚಿದೆ. ಇದಲ್ಲದೇ ಇಡೀ ವ್ಯೂಹ ಸಂಪೂರ್ಣವಾಗಿ ಮಾನವ ಸಂಕುಲದ ತೀರ್ಮಾನದ ಅಗತ್ಯವಿಲ್ಲದೆ ಯಂತ್ರ ನಿಯಂತ್ರಿತವಾಗಿರುವುದರಿಂದ ಯಾವುದೇ ಸಣ್ಣ ತಾಂತ್ರಿಕ ದೋಷ ಸಂಭವಿಸಿದರೂ ಅಣುಯುದ್ಧದ ಭೀಕರ ಸಾಧ್ಯತೆ ಇನ್ನಷ್ಟು ಹೆಚ್ಚುತ್ತದೆ.

ಅಂತರಿಕ್ಷ ಯುದ್ಧದ ಸಾಧ್ಯತೆ–ಶಾಂತಿಯುತ ಬಳಕೆಗೆ ಅಪಾಯ: ಇದನ್ನು ಮಿಲಿಟರಿ ಬೇಹುಗಾರಿಕೆ ಉಪಗ್ರಹಗಳನ್ನು ಹೊಡೆಯಲು ಉಪಯೋಗಿಸಬಹುದು. ಆಧುನಿಕ ಯುದ್ಧತಂತ್ರದಲ್ಲಿ ಬೇಹುಗಾರಿಗೆ ಉಪಕರಣಗಳು ಕಣ್ಣು ಕಿವಿಗಳಿದ್ದಂತೆ. ಇವುಗಳನ್ನು ನಾಶಪಡಿಸಿದರೆ "ಕಣ್ಣು ಕಿವಿ ಕಳೆದುಕೊಂಡ ಆದರೆ ಉಗುರು, ಹಲ್ಲು ಇನ್ನೂ ಹರಿತವಾಗಿರುವ ಕೆರಳಿದ ಸಿಂಹದಂತೆ" ಆಗಿ, ಸ್ಫೋಟಕ ಪರಿಸ್ಥಿತಿ ಆಗಬಹುದು.

ಅಂತರಿಕ್ಷ ಮಾರಕಾಸ್ತ್ರಗಳ ಕೈ ಚಾಚು ವಿಸ್ತಾರವಾದುದರಿಂದಾಗಿ, ಸಂಪರ್ಕ ಉಪಗ್ರಹ, ಅಧ್ಯಯನ ಉಪಗ್ರಹಗಳನ್ನು ನಾಶಮಾಡುವುದಲ್ಲದೆ, ಮುಖ್ಯ ಕೈಗಾರಿಕಾ, ವಿದ್ಯುತ್ ಶಕ್ತಿ ಸ್ಥಾವರ, ಸಂಪರ್ಕ ಕೇಂದ್ರಗಳ ನಾಶ ಸುಲಭ ಸಾಧ್ಯವಾದುದರಿಂದಾಗಿ ಯಾವುದೇ ಅಭಿವೃದ್ಧ ದೇಶವನ್ನು ೩೦ ನಿಮಿಷಗಳಲ್ಲಿ "18ನೇ ಶತಮಾನದಷ್ಟು ಹಿಂದಕ್ಕೆ ಒಯ್ಯಬಹುದು" ಎಂದು ಒಬ್ಬ ತಜ್ಞರ ಅಭಿಪ್ರಾಯ.

ತಾರಾ ಸಮರ : ಶಸ್ತ್ರಾಸ್ತ್ರ ತಡೆ ಮಾತುಕತೆಗೆ ಅಡ್ಡಿ

ತಾರಾ ಸಮರ ಕಾರ್ಯಕ್ರಮ ಬಾಹ್ಯಾಕಾಶದ ಬಳಕೆ ಮತ್ತು ಅನ್ವೇಷಣೆ ಸಂಬಂಧಿಸಿದ 1967 ರ ಒಪ್ಪಂದ ಮತ್ತು ಮುಖ್ಯವಾಗಿ 1972 ರ ಖಂಡಾಂತರ ಕ್ಷೇಪಣಿ ಒಪ್ಪಂದವನ್ನು ಮುರಿಯುತ್ತದೆ. ಇದಲ್ಲದೆ ಹೊಸ ಹಂತದ ಶಸ್ತ್ರಾಸ್ತ್ರಗಳ ಪೈಪೋಟಿ, ಶಸ್ತ್ರಾಸ್ತ್ರ ತಡೆ, ಮಿತಿಗೊಳಿಸುವ ಮಾತುಕತೆಯನ್ನು ಅರ್ಥಹೀನಗೊಳಿಸುತ್ತದೆ.

ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸಿದ್ದು ಯಾರು ?

ಪ್ರತಿ ಹಂತದಲ್ಲಿ ವಿವಿಧ ಅಣ್ವಸ್ತ್ರಗಳ ಮೊದಲ ತಯಾರಿಕೆ ಮಾಡಿದ್ದು ಯಾರು ?

ಶಸ್ತ್ರಾಸ್ತ್ರ	ಅಮೇರಿಕ ತಯಾರಿಸಿದ್ದು	ಸೋವಿಯತ್ ಒಕ್ಕೂಟ ತಯಾರಿಸಿದ್ದು.
ಅಣು ಬಾಂಬು	1941-45 (ಮೊದಲ ಪ್ರಯೋಗ 1945)	1948
ಖಂಡಾಂತರ ಬಾಂಬರುಗಳು	1950ರ ದಶಕದ ಮಧ್ಯದಲ್ಲಿ	1950ರ ದಶಕದ ಕೊನೆ.
ಥರ್ಮೋನ್ಯೂಕ್ಲಿಯರ್ ಉಪಕರಣ	1952	1953
ಅಣು ಶಕ್ತಿ ಚಾಲಿತ ಸಬ್‌ಮೇರಿನ್	1950ರ ದಶಕದ ಮಧ್ಯದಲ್ಲಿ	1950ರ ದಶಕದ ಕೊನೆ
ಅಣು ಶಕ್ತಿ ಚಾಲಿತ ಯುದ್ಧನೌಕೆ	1960ರ ದಶಕದ ಮೊದಲಲ್ಲಿ	ಇನ್ನೂ ತಯಾರಿಸಿಲ್ಲ.
MIRV	1960ರ ದಶಕದ ಮೊದಲಲ್ಲಿ	1970ರ ದಶಕದ ಮಧ್ಯದಲ್ಲಿ.
ನ್ಯೂಟ್ರಾನ್ ಬಾಂಬ್	1970ರ ದಶಕದ ಕೊನೆಯಲ್ಲಿ	ಇನ್ನೂ ತಯಾರಿಸಿಲ್ಲ.
ತಾರಾ ಸಮರ	ಸಂಶೋಧನೆ ಆರಂಭವಾಗಿದೆ.	ಇಲ್ಲ.

ತಾರಾಸಮರದ ವಿರುದ್ಧ ಹೋರಾಟ —ವರ್ಗ ಹೋರಾಟದ ಭಾಗ

ಸಾರ್ವತ್ರಿಕ ಬಿಕ್ಕಟ್ಟು ಎದುರಿಸುತ್ತಿರುವ ಸಾಮ್ರಾಜ್ಯಶಾಹಿ, ತನ್ನ ನವ ವಸಾಹತು ಶಾಹಿ ಧೋರಣೆಯನ್ನು ಪ್ರತಿರೋಧವಿಲ್ಲದೇ ಮುಂದು ವರಿಸಲು ಮತ್ತು ವಿಶ್ವ ಸಮಾಜವಾದೀ ವ್ಯವಸ್ಥೆಯನ್ನು ನಾಶಪಡಿಸಲು ಅಗತ್ಯವಾದ, ಈಗ ನಷ್ಟವಾಗಿರುವ ವಿಶ್ವದ ಮೇಲೆ ಪರಮಾಧಿಪತ್ಯ ಸಾಧಿಸುವ ಹೊಂಚಿನ ಮುಖ್ಯ ಭಾಗ – ತಾರಾಸಮರ. ಸೋವಿಯತ್ ಒಕ್ಕೂಟ ಮತ್ತು ಸಮಾಜವಾದೀ ಬಣದ ಮಿಲಿಟರಿ ಶಕ್ತಿ ಈ ವರೆಗೆ ವಿಶ್ವಶಾಂತಿ ಮತ್ತು ಮೂರನೆಯ ಜಗತ್ತಿನ ಜನತೆಯ ಸ್ವಾತಂತ್ರ್ಯ ಕಾಪಾಡುವಲ್ಲಿ ಮುಖ್ಯ ಪಾತ್ರವಹಿಸಿದೆ. ರಕ್ಷಣಾತ್ಮಕ ಕಾರ್ಯಕ್ಕೆ ಬೇಕಾದಷ್ಟು

ಬರಿಯ ಸಂಶೋಧನೆಯ ಹಂತಕ್ಕೆ ಮೊದಲನೆಯ 10 ವರ್ಷದಲ್ಲಿ 6000 ಕೋಟಿ ಡಾಲರುಗಳಾಗುತ್ತವೆ. (60000 ಕೋಟಿ ರೂ. ಗಳು) ಇದು ಕಳೆದ 30 ವರ್ಷಗಳ ಕ್ಷಿಪಣಿ ಸಂಶೋಧನೆಯ ವೆಚ್ಚದ 1½ ಪಟ್ಟು. ರೀಗನ್ "ಕನಸಿನ" ಪೂರ್ಣ ತಾರಾಸಮರ ವ್ಯೂಹಕ್ಕೆ ಸುಮಾರು 2 ಲಕ್ಷ ಕೋಟಿ ಡಾಲರ್‌ಗಳು ವೆಚ್ಚವಾಗುತ್ತದೆ. ಒಂದು ಬಾರಿ ಇದು ಸ್ಥಾಪನೆಯ ಹಂತಕ್ಕೆ ಬಂದರೆ, ಸೋವಿಯೆಟ್ ಒಕ್ಕೂಟವೂ ಪೈಪೋಟಿಗಿಳಿಯಬೇಕಾದರೆ ಆಗುವ ಒಟ್ಟು ವೆಚ್ಚ ಮತ್ತು ಜಗತ್ತಿನ ಆರ್ಥಿಕತೆಯ ಮೇಲೆ, ಶಾಂತಿಯುತ ಅಭಿವೃದ್ಧಿ ಕಾರ್ಯಗಳ ಮೇಲೆ ಆಗುವ ದುಷ್ಪರಿಣಾಮ ಊಹಿಸಲಸಾಧ್ಯ.

ಮಾತ್ರ ವೆಚ್ಚ ಮಾಡುತ್ತ ಇರುವ ಮತ್ತು ಪ್ರತೀ ಹೊಸ ಹಂತದ ಶಸ್ತ್ರಾಸ್ತ್ರದ ಪೈಪೋಟಿಯನ್ನು ವಿರೋಧಿಸುವ ಸಮಾಜವಾದೀ ಬಣದ ಶಾಂತಿಪ್ರಿಯ ನೀತಿಯನ್ನು ಸಾಮ್ರಾಜ್ಯ ಶಾಹೀ, ದೌರ್ಬಲ್ಯ ಎಂದು ತಿಳಿದಿದೆ. ಇದಕ್ಕೆ ಉತ್ತರವಾಗಿ

(ನೇ ಪುಟನೋಡಿ)

ನಮ್ಮನ್ನು ಬದುಕಲು ಬಿಡಿ

ಸೂರ್ಯೋದಯ – ಸೂರ್ಯಾಸ್ತಗಳ
ಚಂದ್ರ - ತಾರೆ – ಮುಗಿಲುಗಳ
ಋತು ಪರಿಭ್ರಮಣದ ವೈವಿಧ್ಯಗಳ
ನಾನು ನೋಡಬೇಕು

ಸುಳಿಗಾಳಿಗೆ ತೊನೆದಾಡುವ ಹೊಂಬಣ್ಣದ ಪೈರುಗಳ
ಫಲಭರಿತ ವೃಕ್ಷಗಳ ಅರಳಿದ ಪುಷ್ಪಗಳ
ದಟ್ಟಡವಿಯ ನಡುವಿನ ರುದ್ರ ಸೌಂದರ್ಯಗಳ
ನಾನು ನೋಡಬೇಕು

ಮೃಗ ಪಕ್ಷಿಗಳಿಂಚರ
ಹರಿವ ನೀರಿನ ಜುಳು ಜುಳು ನಿನಾದ
ಸವಿಗೊರಲ ಹಾಡು ಸಂಗೀತಗಳ
ನಾನು ಕೇಳಬೇಕು

ಮುಗ್ಧ ಮಗುವಿನ ಮುಗುಳುನಗೆ
ಸುಗಂಧ ಸೂಸುವ ಮಲ್ಲಿಗೆ
ನನ್ನಿನಿಯಳ ಮೃದು ಮಧುರ ಸ್ಪರ್ಶಗಳ
ನಾನು ಅನುಭವಿಸಬೇಕು

ಆದರೆ,
ನನ್ನೆಲ್ಲಾ ಆಸೆಗಳ, ಕನಸುಗಳ
ಮನುಕುಲದ ಭವ್ಯ ಭವಿಷ್ಯತ್ತುಗಳ
ಕ್ರೂರವಾಗಿ ಹೊಸಕಿಬಿಡುವ
ಯುದ್ಧ ಪಿಶಾಚಿಗಳ
ನೆತ್ತರು ಮೆತ್ತಿದ ಕೈ ಬೆರಳ ನೆರಳುಗಳು
ನನ್ನ ಸುತ್ತಾ ನರ್ತಿಸತೊಡಗಿವೆ.

ನಾನು ಆರಾಧಿಸುವ
ಈ ಪ್ರಕೃತಿ
ಪ್ರೀತಿಸುವ ಜನ
ಮಗುವಿನ ನಗೆ
ಅರಳಲಿರುವ ಪುಷ್ಪಗಳು
ತಾಯಗರ್ಭದ ಭ್ರೂಣಗಳು
ಕೂಗಿ ಹೇಳುತ್ತಿವೆ
'ನಮಗೆ ಯುದ್ಧ ಬೇಡ'
'ನಮಗೆ ಯುದ್ಧ ಬೇಡ'
ನಮ್ಮನ್ನು ಬದುಕಲು ಬಿಡಿ

"ಉದಯ"

ನಮಗ್ಯಾಕಪ್ಪಾ ಮೇದಿನಾಚರಣೆ

"ಏನ್ರಿ, ಈ ಮೇ ದಿನಾಚರಣೆಯನ್ನು ತಗೊಂಡು ನಾವೇನು ಮಾಡಲಿ. ಅದೆಲ್ಲ ಕಾರ್ಖಾನೆಗಳಲ್ಲಿ ದುಡಿಯುವ ಕಾರ್ಮಿಕರಿಗೆ ಮಾತ್ರ ಸಂಬಂಧಪಟ್ಟ ವಿಷಯವಲ್ಲವೇ ?" ಎಂಬ ಪ್ರಶ್ನೆಯನ್ನು ಕೇಳಿದವರು ಹೋದ ವರ್ಷ ಮೇ ದಿನಾಚರಣೆಯ ಸಭೆ ಮುಗಿದ ನಂತರ ನನ್ನ ಹಲವು ಪರಿಚಿತರೆ, ಅದರಲ್ಲಿ ವ್ಯಾಪಾರಸ್ಥರು, ಸಣ್ಣ ಕಾರ್ಖಾನೆದಾರರು, ನೌಕರರು ಹಾಗೆಯೇ ಗ್ರಾಮಾಂತರ ಪ್ರದೇಶದ ರೈತರೂ ಇದ್ದರು. ಕೆಲವು ವರ್ಷಗಳಿಂದ ನನ್ನ ಭಾಷಣ ಕೇಳಿದವರೂ ಇದ್ದರು. ನಾವೆದುರಿಸುತ್ತಿರುವ ಬೆಲೆಯೇರಿಕೆ, ಬಡತನ, ನಿರುದ್ಯೋಗಗಳ ನಿವಾರಣೆಗಾಗಿ ಈ ಸರಕಾರವನ್ನು ಬದಲಾಯಿಸಬೇಕೆಂದೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮುಖಂಡತ್ವದಲ್ಲಿ ಪರ್ಯಾಯ ಸರಕಾರ ರಚಿಸಬೇಕೆಂದೂ ಅದರ ಸಲುವಾಗಿ ಸಾರ್ವಜನಿಕರೆಲ್ಲ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲ ನೀಡಿ ಅನ್ಯಾಯದ ವಿರುದ್ಧ ಹೋರಾಡಲು ಮುಂದಾಗಬೇಕೆಂದೂ ಎತ್ತಿದ ಕಂಠದಿಂದ ಹೇಳುತ್ತಿದ್ದುದನ್ನೂ ಕೇಳಿದವರೂ ಇದ್ದರು. ಆ ಗುರಿಯನ್ನು ಸಾಧಿಸಲಿಕ್ಕೆ ಮೇ ದಿನಾಚರಣೆ, ಅದರಲ್ಲಿ ಎಲ್ಲರೂ ಪಾಲ್ಗೊಳ್ಳುವ ಅವಶ್ಯಕತೆಯನ್ನು ತಿಳಿದುಕೊಳ್ಳುವಷ್ಟು ಸಮಾಧಾನ ಅವರಲ್ಲಿರಲಿಲ್ಲ. ಇಂಥ ಪರಿಸ್ಥಿತಿ ಸಾರ್ವಜನಿಕರಲ್ಲಿ ದಬ್ಬಾಳಿಕೆಗೆ, ಶೋಷಣೆಗೆ ತುತ್ತಾಗುವವರಲ್ಲಿ ಮಾತ್ರವಲ್ಲ, ಸಂಘಟಿತ ಕಾರ್ಮಿಕ ವರ್ಗದ ಮಧ್ಯೆಕೂಡ ಕಂಡುಬರುತ್ತಿದೆ. ಕಾರ್ಮಿಕರ ತಾತ್ಪೂರ್ತಿಕ, ಆರ್ಥಿಕ ಬೇಡಿಕೆಗಳನ್ನು ಮಾತ್ರ ಮೇ ದಿನಾಚರಣೆಯಲ್ಲಿ ತಾರದೆ, ನೂರು ವರ್ಷಗಳ ಹಿಂದೆ ಚಿಕಾಗೋ ನಗರದ ಹೇ ಮಾರ್ಕೆಟನಲ್ಲಿ ಕಾರ್ಮಿಕರು 8 ಗಂಟೆ ಕೆಲಸಕ್ಕಾಗಿ ನಡೆಸಿದ ಹೋರಾಟದ ಫಲವಾಗಿ ಈ ಹೊತ್ತು ಜಗತ್ತಿನ ಮೂರನೆ ಒಂದು ಭಾಗದಲ್ಲಿ ದುಡಿಯುವವರ ಸುಲಿಗೆಯೇ ಇಲ್ಲದಂತಹ ಸಮಾಜ ಕಾಣಬಹುದೆಂಬ ಅಂಶವನ್ನು ತಿಳಿದುಕೊಂಡವರೇ ಬಹಳ ಕಡಿಮೆ. ಹೇ ಮಾರ್ಕೆಟ್‌ನ ಹೋರಾಟದಲ್ಲಿ ಹುತಾತ್ಮರಾದವರ ಒಳಗದ ಕಾರ್ಮಿಕವರ್ಗ ಮಾರ್ಕ್ಸ್ ವಾದದಲ್ಲಿ ಹೊಸ ದೃಷ್ಟಿಯನ್ನು ಕಂಡು "ಜಗತ್ತಿನ ಕಾರ್ಮಿಕರೇ ಒಂದಾಗಿರಿ" ಎಂದು ಘೋಷಿಸಿ, ಹಲವಾರು ದೇಶಗಳಲ್ಲಿ ಬಂಡವಾಳಶಾಹಿ ವಿರುದ್ಧ ಹೋರಾಡಿರುವುದನ್ನು ಕ್ರಾಂತಿ ಮಾಡಿರುವುದನ್ನು ಕಾಣಬಹುದಾಗಿದೆ. ವರ್ಷ ಕಳೆದಂತೆ, ಅನುಭವ ಪಡೆದಂತೆ ಮಾರ್ಕ್ಸ್ ವಾದ – ಲೆನಿನ್ ವಾದದ ಅರ್ಥಮಾಡಿಕೊಂಡು ಆದರ್ಶ ಸಿದ್ಧಾಂತದ ಶಿಯಲ್ಲಿ ರಾಜಕೀಯ ಪಕ್ಷ ಕಟ್ಟಿ, ರಷ್ಯಾ ದೇಶದಲ್ಲಿ ಪ್ರಥಮ ಕಾರ್ಮಿಕ ವರ್ಗದ ಸರ್ವಾಧಿಕಾರ ನಿರ್ಮಿಸಿ ಸುಲಿಗೆ, ಶೋಷಣೆ ರಹಿತ ಸಮಾಜ ಕಟ್ಟಿರುವುದನ್ನು, ಅನಂತರ ಹಲವಾರು

ಎನ್. ಕೆ. ಉಪಾಧ್ಯಾಯ

ದೇಶಗಳಲ್ಲಿ ವಿಜಯ ಸಾಧಿಸಿರುವುದನ್ನೂ ಮನವರಿಕೆ ಮಾಡಿಕೊಂಡ ಜನ ಎಷ್ಟು ? ಮಾರ್ಕ್ಸ್ ವಾದ – ಲೆನಿನ್ ವಾದವನ್ನು ಅಸ್ತ್ರವಾಗಿ ಹಿಡಿದು ಅಂಥ ಕ್ರಾಂತಿಗಾಗಿ ಬೇಕಾದ ಸಂಘಟನೆ ಕಟ್ಟಲು ಪ್ರಯತ್ನ ಮಾಡಿದವರು ಎಷ್ಟು, ಜನ? ಕಳೆದ ನೂರು ವರ್ಷಗಳಲ್ಲಿ 8 ಗಂಟೆ ಕೆಲಸಕ್ಕಾಗಿ ರಕ್ತ ಸುರಿಸಿದ, ಬಲಿದಾನ ಮಾಡಿದ, ಗುಂಡಿಗಾಹುತಿಯಾದ ಕಾರ್ಮಿಕರ ಬಳಗ ತಮ್ಮ ನಿರಂತರ ಹೋರಾಟದ ಫಲವಾಗಿ ತನ್ನ ಕೆಲಸದ ಸಮಯವನ್ನು ತಾನೇ ನಿರ್ಧರಿಸುವಂಥ ಸಮಾಜವನ್ನು ರಚಿಸಿದ್ದಾನೆಂದು ತಿಳಿಯ ಹೇಳುವವರಾರು ? ಮೇ ದಿನದ ಪರಂಪರೆ ತಾತ್ಪೂರ್ತಿಕ ಬೇಡಿಕೆಗಳನ್ನಷ್ಟೇ ನೆನಪಿಸಿಕೊಡುವುದಲ್ಲ, ಈಗಿರುವ ಅಧಿಕಾರದ ಚೌಕಟ್ಟನ್ನೇ ನಿರ್ನಾಮ ಮಾಡುವುದಾಗಿದೆಂಬುದನ್ನು ತಿಳಿಸಿ ಹೇಳುವವರಾರು ?

ಇಲ್ಲಿದೆ ನಮ್ಮ ಮುಖ್ಯ ಕೊರತೆ. ಆ ಕಾರಣದಿಂದಲೇ ಸಂಘಟಿತ – ಅಸಂಘಟಿತ ಕಾರ್ಮಿಕವರ್ಗ ಹಾಗೆಯೇ ನಾನಾತರದ ಅನ್ಯಾಯ, ಸುಲಿಗೆಗಳಿಗೊಳಪಡುವ' ಈ ಸರಕಾರ ಸಮಾಜ ಬದಲಾವಣೆಯಾಗಬೇಕೆಂದು ಅಪೇಕ್ಷಿಸುವ ಆದರೆ ಅದರ ಸಾಧನೆಗೆ ಯಾವ ದಾರಿ ಹಿಡಿಯಬೇಕೆಂಬುದನ್ನು ಕಾಣದ ಜನರೆಲ್ಲ "ಮೇ ದಿನಾಚರಣೆ" ಕೆಲವು ಕಾರ್ಮಿಕರ ಮೆರವಣಿಗೆ ಘೋಷಣೆ ಕೂಗುವಿಕೆಯ ದಿನವಾಗಿದೆಂದಷ್ಟೇ ತಿಳಿದಿದ್ದಾರೆ. ಅದು ತಪ್ಪು.

ನಾಲ್ವತ್ತರ ದಶಕದಲ್ಲಿ

ನನಗೆ 1940ರ ದಶಕದ ನೆನಪಾಗುತ್ತದೆ. 1940 – 48ರಲ್ಲಿ ಮುಂಬಯಿ, ಬಿಜಾಪುರ, ಕೆ.ಜಿ.ಎಫ್‌ಗಳಲ್ಲಿ ಆಚರಿಸಲ್ಪಡುತ್ತಿದ್ದ ಮೇ ದಿನಾಚರಣೆಗಳು ಬರೇ ಕೆಲವೇ ಕಾರ್ಮಿಕರ ತಾತ್ಪೂರ್ತಿಕ ಬೇಡಿಕೆಗಳಿಗಷ್ಟೇ ಸೀಮಿತವಾಗಿದ್ದ ದಿನಾಚರಣೆಯಾಗಿರುತ್ತಿರಲಿಲ್ಲ. ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಹೋರಾಡಲು ಇಡೀ ಜನತೆಯನ್ನು ಹುರಿದುಂಬಿಸಲು ಗಣೇಶೋತ್ಸವವನ್ನು ಬಾಲಗಂಗಾಧರ ತಿಲಕ ಯಾವ ರೀತಿ ಉಪಯೋಗಿಸುತ್ತಿದ್ದರೋ ಹಾಗೆಯೇ ಮೇ ದಿನಾಚರಣೆ ಎಲ್ಲರ ಹಬ್ಬವಾಗಿ ಕಾರ್ಮಿಕ – ರೈತರನ್ನೊಳಗೊಂಡು ಎಲ್ಲರೂ ಪಾಲ್ಗೊಳ್ಳುವಂತೆ ಮಾಡಲು ಸಾಧ್ಯವಾಗುತ್ತಿತ್ತು. ಮುಂಬಯಿ, ಕೆ.ಜಿ.ಎಫ್‌ಗಳಲ್ಲಿ ಆ ಕಾಲದಲ್ಲಿ ಪ್ರತಿಯೊಂದು ಮನೆಮುಂದೆ ಮಹಿಳೆಯರ ಕತ್ತಿ – ಸುತ್ತಿಗೆ (ಕುಡುಗೋಲು – ಸುತ್ತಿಗೆ) ಯ ರಂಗೋಲೆ, ಮಹಡಿಯ ಮೇಲೆ ಕೆಂಬಾವುಟ – ನಗರಕ್ಕೆ ನಗರವೇ ಕೆಂಪಾಗಿ ಕಾಣುವಂತೆ ಮಾಡುತ್ತಿತ್ತು. ಇಡೀ ಜನಸಮೂಹ ಆಚರಣೆಯಲ್ಲಿ ಪಾಲ್ಗೊಳ್ಳುತ್ತಿತ್ತು. ಬಿಜಾಪುರದಲ್ಲಿ ಬೀಡಿ, ಮುನಸಿಪಾಲಿಟಿ, ವಿದ್ಯಾರ್ಥಿ ಸಂಘಗಳು ಜಂಟಿಯಾಗಿಯೇ ಚಿಕ್ಕ ವ್ಯಾಪಾರಸ್ಥರನ್ನೂ ರೈತರನ್ನೂ ಸೇರಿಸಿಕೊಂಡು ಮೇ ದಿನಾಚರಣೆ ಆಚರಿಸುತ್ತಿದ್ದರು. ಅಂತರ ರಾಷ್ಟ್ರೀಯ ರಾಜಕಾರಣ, ರಷ್ಯದ ಸಾಧನೆ, ದೇಶದ ಸ್ವಾತಂತ್ರ್ಯ ಸುಲಿಗೆ ರಹಿತ ಸಮಾಜದ ವರ್ಣನೆಗಳನ್ನೆಲ್ಲ

ಮನದಟ್ಟು ಮಾಡಿಕೊಡುವ ಅವಕಾಶಸಿಗುತ್ತಿತ್ತು. ಕೆ.ಜಿ.ಎಫ್‌ನಲ್ಲಿ ಆ ರೀತಿಯ ಮೇ ದಿನಾಚರಣೆ, ಅದರ ಜೊತೆಯಲ್ಲೇ ಕಾರ್ಮಿಕ ವರ್ಗದ ರಾಜಕೀಯ ಪಕ್ಷ ಕಮ್ಯುನಿಸ್ಟ್ ಪಾರ್ಟಿಯ ಚಟುವಟಿಕೆಗಳಿಂದಾಗಿಯೇ ಸತತವಾಗಿ ಮೂರುಸಲ ಚುನಾವಣೆಯಲ್ಲಿ ಗೆದ್ದು ಬರಲು ಸಾಧ್ಯವಾಗಿತ್ತು. ಭದ್ರಕೋಟೆ ಕಟ್ಟಲುಸಾಧ್ಯವಾಗಿತ್ತು. ಏಕೆಗೊತ್ತೆ? ಬ್ರಿಟಿಷರನ್ನು ಓಡಿಸಿ, ದೇಶಕ್ಕೆ ಸ್ವಾತಂತ್ರ್ಯ ಪಡೆದರೆ ಕಾರ್ಮಿಕರೂ, ರೈತರೂ, ಯುವಜನತೆಯೂ ತಮ್ಮ ಬೇಡಿಕೆಗಳನ್ನು ಪಡೆಯಬಹುದು. ಸಮಸ್ಯೆಗಳನ್ನು ತಮ್ಮವರೇ ಆದ ಆಳುವವರಿಂದ ಬಗೆಹರಿಸಿಕೊಳ್ಳಬಹುದೆಂಬ ಭಾವನೆಮೂಡಿಬಂದಿತ್ತು. ಆದ್ದರಿಂದಲೇ ಮೇ ದಿನಾಚರಣೆಗಳಲ್ಲಿ ಎಲ್ಲ ಕಾರ್ಮಿಕರೂ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದರು. ಜನರ ಬೆಂಬಲವನ್ನೂ ಪಡೆದಿದ್ದರು.

ಆದರೆ ಸ್ವಾತಂತ್ರ್ಯ ನಂತರದ ಇತ್ತೀಚಿನ ವರ್ಷಗಳಲ್ಲಿ ಸಿ.ಐ.ಟಿ.ಯು ಅಧ್ಯಕ್ಷರಾದ ಬಿ. ಟಿ. ರಣದಿವೆಯವರು ತಮ್ಮ "ಮೇ ದಿನದ ಪರಂಪರೆ" ಎಂಬ ಲೇಖನದಲ್ಲಿ ನೆನಪಿಸಿ ಕೊಟ್ಟಂತೆ "ನಮ್ಮ ದೇಶದಲ್ಲಿ ಮೇ ದಿನದ ಆಚರಣೆ ಹೆಚ್ಚಾಗಿ ತುರ್ತಿನ ಮತ್ತು ತಾತ್ಪೂರ್ತಿಕ ಬೇಡಿಕೆಗಳಿಗಷ್ಟೇ ಸೀಮಿತವಾಗಿದೆ". ಆದರೆ ಅದರ ಜೊತೆಯಲ್ಲಿಯೇ "ಮೇ ದಿನಾಚರಣೆಯ ಕ್ರಾಂತಿಕಾರಿ ಪರಂಪರೆ ತಾತ್ಪೂರ್ತಿಕ ಬೇಡಿಕೆಗಳನ್ನು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯ ಸೌಹಾರ್ದತೆಯ ಘೋಷಣೆಯನ್ನು, ಬಂಡವಳಶಾಹಿ ಪದ್ಧತಿಯನ್ನು ಕೊನೆಗೊಳಿಸಿ ಕಾರ್ಮಿಕ ವರ್ಗ ಅಧಿಕಾರ ಪಡೆಯುವ ವಿಶ್ವಾಸ ಮತ್ತು ದೃಢನಿರ್ಧಾರವನ್ನು ಜೋಡಿಸಿಕೊಂಡಿದೆ" ಎಂದು ಹೇಳಿದ್ದಾರೆ.

"ಈ ರೀತಿಯ ತಾತ್ಪೂರ್ತಿಕ ಬೇಡಿಕೆಗಳನ್ನು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆ ಮತ್ತು ಬಂಡವಳಶಾಹಿ ವರ್ಗವನ್ನು ರಾಜಕೀಯ ಅಧಿಕಾರದಿಂದ ಕಿತ್ತೊಗೆಯುವಿಕೆಯ ಜೊತೆಯಲ್ಲಿ ಸೇರಿಸಿದರೆ ಕಾರ್ಮಿಕ ವರ್ಗದ ತುರ್ತಿನ ವಾಸ್ತವಿಕ ಬೇಡಿಗಳನ್ನು ಅದರ ಅಂತಿಮ ಗುರಿಯಾದ ಸಮಾಜದ ವಿಮೋಚನೆ ಸಮತಾವಾದದ ಗುರಿಯೊಡನೆ ಅಳವಡಿಸಿಕೊಂಡತಾಗುತ್ತದೆ" ಎಂದು ಬರೆದಿದ್ದಾರೆ.

ರಾಜಕೀಯ ಪ್ರಜ್ಞೆ

ಇದರ ಜೊತೆಯಲ್ಲಿಯೇ ಇತ್ತೀಚೆಗೆ ಕಲ್ಕತ್ತಾದಲ್ಲಿ ನಡೆದ ಸಿಐಟಿಯು ಜನರಲ್ ಕೌನ್ಸಿಲ್ ಸಭೆಯಲ್ಲಿ ತಮ್ಮ ಸಮಾರೋಪ ಭಾಷಣದಲ್ಲಿ ಅವರು "ದೇಶದ ಇಂದಿನ ಅರ್ಥಿಕ ಬಿಕ್ಕಟ್ಟಿನಲ್ಲಿ ಕಾರ್ಮಿಕರ ಸಂಯುಕ್ತ ಚಳುವಳಿ ಬೇರೆ ಬೇರೆ ರೂಪಗಳಲ್ಲಿ ತೀವ್ರವಾಗಿ ಬೆಳೆದುಬರುತ್ತಿದ್ದರೂ ಜಾತಿ, ಮತ. ಧರ್ಮಗಳ ಪ್ರಶ್ನೆ ಬಂದಾಗ ಒಬ್ಬ ಕಾರ್ಮಿಕ ಮತ್ತೊಬ್ಬ ಕಾರ್ಮಿಕನ ವಿರುದ್ಧ ಹೋರಾಡುತ್ತಿರುವುದನ್ನು ಕಾಣುತ್ತಿದ್ದೇವೆಂದೂ, ಚಳುವಳಿ ಬೆಳೆದು ಬರುತ್ತಿದ್ದರೂ ರಾಜಕೀಯ ಪ್ರಚಾರ ಚಟುವಟಿಕೆಗಳೆಲ್ಲ ಹಿಂದೆ ಬೀಳುತ್ತಿರುವುದರಿಂದ ಅಪಾಯ ಉಂಟಾಗುತ್ತಿದೆಂದೂ, ಚಳುವಳಿಯ ಜೊತೆಯಲ್ಲಿಯೇ ರಾಜಕೀಯ ಪ್ರಜ್ಞೆ, ಪ್ರಚಾರವೂ ಅಗತ್ಯವೆಂದೂ" ಒತ್ತಿ ಹೇಳಿದ್ದಾರೆ.

ತಕ್ಷಣದ ಪ್ರಶ್ನೆಗಳಿಗೆ ಮಾತ್ರ ತಮ್ಮ ಗಮನ ಕೇಂದ್ರೀಕರಿಸಿ ಕಾರ್ಮಿಕ ವರ್ಗದ ಆಂದೋಲನ ತನ್ನನ್ನು ಅಸಂಖ್ಯಾತ ಜನ ಸಮೂಹಗಳಿಂದ, ವಿಶೇಷವಾಗಿ ರೈತಾಪಿ ವರ್ಗ ಹಾಗೂ ಕೃಷಿ ಕಾರ್ಮಿಕರಿಂದ ದೂರವಾಗಿರುವ ಒಂದು ಸಂಕುಚಿತ ಶಕ್ತಿಯನ್ನಾಗಿ ಪರಿವರ್ತಿಸಿಕೊಂಡು ಬಿಟ್ಟಿದೆ.

ಮೇ ದಿನದ ಈ ಶತಮಾನೋತ್ಸವದಂದು ಕಾರ್ಮಿಕ ವರ್ಗದ ಆಂದೋಲನ ರೈತಾಪಿ ವರ್ಗವನ್ನು ನಿರ್ಲಕ್ಷಿಸುವ ಸಾಂಪ್ರದಾಯಿಕ ದೃಷ್ಟಿಕೋನವನ್ನು ಮುರಿದು, ಗ್ರಾಮಾಂತರ ಜನ ಸಮೂಹಗಳ ರಕ್ಷಣೆಗೆ ಮುಂದೆ ಬರಬೇಕು.

— ಮೇ ದಿನದ ಪ್ರಣಾಳಿಕೆಯಿಂದ
(C.I.T.U.)

ಕಾರ್ಮಿಕ ವರ್ಗ ತನ್ನ ತುರ್ತಿನ ಬೇಡಿಕೆಗಳಿಗಾಗಿ ಮಾತ್ರ ಹೋರಾಡುತ್ತಿಲ್ಲ. ಅಂತಿಮವಾಗಿ ಅದು ಬಂಡವಾಳಶಾಹಿ ಪದ್ಧತಿಯ, ಅದರ ಅಧಿಕಾರದ ನಾಶಕ್ಕಾಗಿ, ಅದರ ಸ್ಥಾನದಲ್ಲಿ ಸುಲಿಗೆರಹಿತ ಸಮಾಜವಾದಿ ಸಮಾಜದ ರಚನೆಯಲ್ಲಿ ಪರ್ಯವಸಾನ ಗೊಳ್ಳುತ್ತದೆಂಬುದನ್ನು ಜನಂಗೆ ಮನದಟ್ಟು ಮಾಡಿಕೊಡಬೇಕು. ಬಂಡವಳಶಾಹಿ ಪದ್ಧತಿಯನ್ನು ಸಂಪೂರ್ಣ ನಾಶ ಮಾಡಿ ಹೊಸ ಸಮಾಜ ನಿರ್ಮಿಸುವುದಕ್ಕಾಗಿ ನಡೆಯುವ ಹೋರಾಟದ ಅಂಗ ಮೇ ದಿನಾಚರಣೆ

ಸಮಾಜದಲ್ಲಿ ಶೇ. 1 ರಷ್ಟು ಜನ ಮಾತ್ರ ಬೇರೆಯವರ ದುಡಿತದಿಂದ ಉಪಜೀವನ ನಡೆಸುತ್ತಿದ್ದಾರೆ. ಉಳಿದವರೆಲ್ಲ ಶ್ರಮಿಕರೇ. ಹೊಲ, ಕಾರ್ಖಾನೆ; ಅಂಗಡಿ, ಸ್ವಂತ ವ್ಯಾಪಾರ-ಕಸಬುಗಳಲ್ಲಿ ದುಡಿಯುತ್ತಿರುವವರು ಒಂದಿಲ್ಲೊಂದು ರೀತಿಯಲ್ಲಿ ಶೋಷಣೆಗೆ ಬಲಿಯಾಗುವವರೇ, ಅವುಗಳ ಪರಿಹಾರಕ್ಕೆ ಕ್ರಾಂತಿ ಅಗತ್ಯ ಹೊಸ ಸಮಾಜದ ನಿರ್ಮಾಣ ಅಗತ್ಯ. ಹಾಗಾದರೆ ಸುಲಿಗೆಗೆ ತುತ್ತಾದವರೆಲ್ಲ ಕ್ರಾಂತಿ ಮಾಡುವ ಶಕ್ತಿ ಹೊಂದಿದ್ದಾರೆಯೇ. ಇದರ ಕುರಿತು ಕಾರ್ಲ್‌ಮಾರ್ಕ್ಸ್ ಕಮ್ಯುನಿಸ್ಟ್ ಘೋಷಣೆಯಲ್ಲಿ (1848) ಹೀಗೆ ಹೇಳಿದ್ದಾರೆ. "ಬಂಡವಳಶಾಹಿಗೆದುರಾಗಿ ನಿಂತಿರುವ ಎಲ್ಲ ವರ್ಗಗಳ ಪೈಕಿ ಶ್ರಮಜೀವಿ ವರ್ಗ ಒಂದೇ ನಿಜವಾದ ಕ್ರಾಂತಿಕಾರಿ ವರ್ಗವಾಗಿದೆ. ಆಧುನಿಕ ಕೈಗಾರಿಕೆಯಲ್ಲಿ ಇತರ ವರ್ಗಗಳೆಲ್ಲ ನಾಶವಾಗಿ ಕಣ್ಮರೆಯಾಗುತ್ತವೆ. ಕಾರ್ಮಿಕ ವರ್ಗ ಮಾತ್ರ ಮುಂದಾಳತ್ವ ವಹಿಸಬಹುದು. ಯಾಕಂದರೆ ಅದಕ್ಕೆ ಸಮಾಜದಲ್ಲಿ ಕಳೆದುಕೊಳ್ಳಲಿಕ್ಕೇನಿಲ್ಲ. ಮತ್ತು ಇಡೀ ಸಮಾಜದ ವಿಮೋಚನೆಯಾಗದೆ ಅದು ತನ್ನ ವಿಮೋಚನೆ ಮಾಡಿಕೊಳ್ಳಲು ಸಾಧ್ಯವಿಲ್ಲ."

ಸಮತಾವಾದದ ಸಾಧನೆಗಾಗಿ ತಿಳುವಳಿಕೆಯಿಂದ ಹೋರಾಡುವ ಕಾರ್ಮಿಕವರ್ಗದ ಪಕ್ಷ ಕಾರ್ಮಿಕ ವರ್ಗದ ಸರ್ವಾಧಿಕಾರತ್ವವನ್ನು ಖಾತರಿಗೊಳಿಸುವ ಸಾಧನೆಯಾಗಿದೆ. ಕಾರ್ಮಿಕ ವರ್ಗದ ಅಂಥ ರಾಜಕೀಯ ಪಕ್ಷ ಬಂಡವಳಶಾಹಿಗಳಿಂದ ರಾಜಕೀಯ ಅಧಿಕಾರ ವಹಿಸಿಕೊಳ್ಳಬೇಕು. ಅನಂತರ ಮಾತ್ರ ಸುಲಿಗೆಯನ್ನು ಪರಿಪೂರ್ಣ ನಾಶಮಾಡಿ ಹೊಸ ಸಮಾಜ ನಿರ್ಮಿಸಲು ಸಾಧ್ಯ.

ಸಿ.ಪಿ.ಐ(ಎಂ) ಪಕ್ಷದ ಕಾರ್ಯಕ್ರಮದಲ್ಲಿ ಹೇಳಿದಂತೆ ನಮ್ಮ ಕ್ರಾಂತಿಯ ಸ್ವರೂಪವು ಮುಖ್ಯವಾಗಿ ಪಾಳೆಯಗಾರಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ, ಏಕಸ್ವಾಮ್ಯ ವಿರೋಧಿ ಮತ್ತು ಪ್ರಜಾಸತ್ತಾತ್ಮಕವಾಗಿರುವುದರಿಂದ ಕ್ರಾಂತಿಯ ನಾಯಕತ್ವವನ್ನು ಕಾರ್ಮಿಕ ವರ್ಗವೇ ವಹಿಸಬೇಕಾಗಿದೆ. ಹಾಗಾದರೆ ಮಾತ್ರ ವ್ಯವಸಾಯ ಮತ್ತು ಉತ್ಪಾದನಾ ಶಕ್ತಿಗಳ ಮೇಲಿರುವ

ಪಾಳೆಯಗಾರಿಹಾಗೂಅರೆಪಾಳೆಯಗಾರಿಅವಶೇಷಗಳನ್ನು ಕಿತ್ತೊಗೆಯಲು. ಬಂಡವಾಳಶಾಹಿ ಪೂರ್ವ ಸಮಾಜದ ಜಾತಿಯೇ ಮೊದಲಾದ ಅವಶೇಷಗಳನ್ನು ಹಳ್ಳಿಗಳಿಂದಲೂ, ಪೇಟೆಗಳಿಂದಲೂ ತೆಗೆದು ಹಾಕಲು, ರಾಷ್ಟ್ರೀಯ ಆರ್ಥಿಕತೆಯಿಂದ ವಿದೇಶಿ ಏಕಸ್ವಾಮ್ಯ ಬಂಡವಾಳವನ್ನು ಸಂಪೂರ್ಣವಾಗಿ ತೊಡೆದು ಹಾಕಲು, ಹೊರಗೆ ಹಾಕಲು ಮತ್ತು ಅದರ ಎಲ್ಲಾ ವಿನಾಶಕಾರಿ ಪ್ರಭಾವಗಳಿಂದ ನಮ್ಮ ಜನತೆಯ ಆರ್ಥಿಕ, ರಾಜಕೀಯ, ಸಾಮಾಜಿಕ ಜೀವನವನ್ನು ಬಿಡುಗಡೆಮಾಡಲು ಸಾಧ್ಯ. ಹಾಗಾದರೆ ಮಾತ್ರ ಬಂಡವಾಳಶಾಹಿ ಭೂಮಾಲಕ ಪರ ಕಾಂಗ್ರೆಸ್ ಸರಕಾರದ ಜನ ವಿರೋಧಿ ನೀತಿಗಳಿಂದ ಕಾರ್ಮಿಕರನ್ನೂ, ರೈತರನ್ನೂ, ಜನತೆಯನ್ನೂ ಪಾರು ಮಾಡಬಹುದು.

ಬೆಲೆಯೇರಿಕೆ, ನಿರುದ್ಯೋಗ, ಅಭಿವೃದ್ಧಿ ಕೆಲಸಗಳಿಗಾಗಿಯೂ, ಗ್ರಾಮಾಂತರ ಪ್ರದೇಶದ ಕೃಷಿ ಕಾರ್ಮಿಕರ, ರೈತರ (ಸಿರಿವಂತರನ್ನು ಸೇರಿಸಿ) ಬೇಡಿಕೆಗಳಿಗಾಗಿಯೂ ಸಂಘಟಿತ ಕಾರ್ಮಿಕ ವರ್ಗ ಹೋರಾಡುತ್ತ ಬಂದಿದೆ. ತಮ್ಮ ಅಲ್ಪ ಬೇಡಿಕೆಗಳಿಗಷ್ಟೇ ತಮ್ಮ ಹೋರಾಟಗಳನ್ನು ಸೀಮಿತಗೊಳಿಸಿಲ್ಲ.

ನೂರು ವರ್ಷಗಳ ಹಿಂದೆ 8 ಗಂಟೆ ಕೆಲಸದ ಅವಧಿಗಾಗಿ ತೀವ್ರ ಚಳುವಳಿ ಹೂಡಿದ ಕಾರ್ಮಿಕ ವರ್ಗ, ಅನಂತರದ ವರ್ಷಗಳಲ್ಲಿ ರಶ್ಯಾ, ಚೀನಾ ಮೊದಲಾದ ದೇಶಗಳಲ್ಲಿ ಕ್ರಾಂತಿ ಮಾಡಿ ಸಮಾಜವಾದದ ರಚನೆಯಲ್ಲಿ ತೊಡಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜನತೆಗೆ ಸಹಾಯ ನೀಡಿದೆ. ಎರಡನೇ ಮಹಾ ಯುದ್ಧದಲ್ಲಿ ನಾಝಿಜಂನ್ನು ಸೋಲಿಸಿದೆ. ಈಗ ಅಮೇರಿಕನ್ ಸಾಮ್ರಾಜ್ಯಶಾಹಿಯ ಯುದ್ಧ ತಯಾರಿಯನ್ನು ಧೈರ್ಯದಿಂದ ಎದುರಿಸುತ್ತಿದೆ.

ನಮ್ಮ ದೇಶದಲ್ಲಿ ಮೇ ದಿನಾಚರಣೆಯ ಶತಮಾನೋತ್ಸವವನ್ನು ಆಚರಿಸುವಾಗ ನಿರುದ್ಯೋಗಿಗಳ ಸಮಸ್ಯೆಗೆ, ಯುದ್ಧ ಮತ್ತು ಶಾಂತಿಗೆ ಹಾಗೆಯೇ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಅವಶ್ಯಕತೆಗೆ ಪ್ರಾಮುಖ್ಯತೆ ಕೊಟ್ಟು ಜನಜಾಗೃತಿಗೊಳಿಸಬೇಕಾಗಿದೆ.

ಸಮಾಜದಲ್ಲಿ ಸುಲಿಗೆ, ದಬ್ಬಾಳಿಕೆ, ಶೋಷಣೆಗಳಿಗೊಳಗಾದ ಎಲ್ಲ ವರ್ಗದ ಪರವಾಗಿಯೂ ಕಾರ್ಮಿಕರು ಮೇ ದಿನಾಚರಣೆ ಆಚರಿಸುತ್ತಾರೆ. ಆದ್ದರಿಂದ ಮೇ ದಿನಾಚರಣೆ ಬರೇ ಸಂಘಟಿತ ಕಾರ್ಮಿಕರಿಗಷ್ಟೇ ಸೀಮಿತವಾಗಿರದೆ ಇಡೀ ಶೋಷಿತ ವರ್ಗ ಅದರಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಅತ್ಯಗತ್ಯ.

ನಾವು ಸ್ವಾತಂತ್ರ್ಯ ಪಡೆದ ನಂತರ ಕಾರ್ಮಿಕರ ಸಂಘಟನೆಯಲ್ಲಿ ಪರಿಷ್ಕರಣವಾದ ಸೇರಿಕೊಂಡಿದ್ದರಿಂದಲೇ ಮೇ ದಿನಾಚರಣೆ ಬರೇ ಔಪಚಾರಿಕವಾಗಿಯಷ್ಟೇ ನಡೆಯುತ್ತಾ ಬಂತು. ಕೆಲವು ಕೇಂದ್ರಗಳಲ್ಲಿ ಅದು ಕೂಡ ನಾಪತ್ತೆ. ಆರ್ಥಿಕ ಬೇಡಿಕೆಗಳಿಗಷ್ಟೇ ನಮ್ಮ ಚಟುವಟಿಕೆ ಸೀಮಿತಗೊಂಡಿತ್ತು. ಅವುಗಳಿಗೆ ಶಾಶ್ವತ ಪರಿಹಾರ ಸಿಗುವುದು ಈಗಿರುವ ಸರಕಾರ ಹೋಗಿ ಕಾರ್ಮಿಕ ವರ್ಗದ ನೇತೃತ್ವದ ಸರಕಾರ ಬಂದಾಗ ಮಾತ್ರ ಎಂಬ ವಿಷಯವನ್ನೂ ಮೇ ದಿನಾಚರಣೆಯಲ್ಲಿ ಆ ಅಂಶ ಒಳಗೊಂಡಿದೆಂಬುದನ್ನು ಆದ್ದರಿಂದ ಕಾರ್ಮಿಕರೂ, ಅವರ ಇಡೀ ಕುಟುಂಬ ಹಾಗೆಯೇ ಸುಲಿಗೆಗೊಳಪಟ್ಟವರೆಲ್ಲ ಮೇ ದಿನಾಚರಣೆಯಲ್ಲಿ ಪಾಲ್ಗೊಂಡು ಸುಲಿಗೆರಹಿತ ಸಮಾಜ, ಸಮತಾವಾದಿ ಸಮಾಜ ರಚನೆಗೆ ಪಣ ತೊಡುತ್ತೇವೆ. ಹೋರಾಡುತ್ತೇವೆ ಎಂಬ ಪ್ರಜ್ಞೆ ಮೂಡಿಸುವಲ್ಲಿ ವಿಫಲರಾಗಿದ್ದೆವು. ಆ ಕೊರತೆಯನ್ನು ದೂರ ಮಾಡುವ ಪ್ರಯತ್ನ ನಡೆದಿದೆ. ಇಡೀ ಕಾರ್ಮಿಕ ವರ್ಗ, ಮೇ ದಿನಾಚರಣೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ಅವರಲ್ಲಿ ರಾಜಕೀಯ ಜಾಗೃತಿ ಉಂಟು ಮಾಡಬೇಕು. ವರ್ಗ ಹೋರಾಟದ ಅರಿವುಂಟಾಗುವಂತೆ ಮಾಡಿ, ನೂರು ವರ್ಷ ಮೇ ದಿನಾಚರಣೆ ನಡೆದು ಬಂದ ದಾರಿ, ಅದರ ಸಾಧನೆಗಳನ್ನು ಮನದಟ್ಟು ಮಾಡಿಕೊಟ್ಟು ಶೋಷಣೆ ರಹಿತ ಸಮಾಜ ರಚನೆಯತ್ತ, ತಮ್ಮ ವಿಮೋಚನೆಯ ಕೊನೆ ಗುರಿಯತ್ತ ಅವರನ್ನೊಯ್ಯಲು ಸಹಾಯವಾಗುವಂತೆ ಮಾಡಿದರೆ ಈ ವರ್ಷ ಶತಮಾನೋತ್ಸವ ಆಚರಣೆಗೆ ಅರ್ಥ ಬಂದೀತು. ಮೇ ದಿನಾಚರಣೆಯ ಶತಮಾನೋತ್ಸವದ ಈ ಸಂದರ್ಭದಲ್ಲಿ ಕಾರ್ಮಿಕ ಸಂಘಗಳಲ್ಲಿ ಮನೆ ಮಾಡಿರುವ ಪರಿಷ್ಕರಣವಾದದ ಪರದೆಯನ್ನ ಸಂಪೂರ್ಣ ಹರಿದೊಗೆದು ನಮ್ಮ ಮುಂದಿರುವ ನಿರ್ಣಾಯಕ ಹೋರಾಟಕ್ಕೆ ಇಮ್ಮಡಿ ಶಕ್ತಿಯ ತಯಾರಿ ನಡೆಸೋಣ. ಸಿ.ಐ.ಟಿ.ಯು ಹಾಗೂ ಇತರ ಸಂಘಟನೆಗಳ ಹಾಗೂ ಅಸಂಘಟಿತ ಕಾರ್ಮಿಕರಲ್ಲಿ ನಿಕಟವಾದ ಹತ್ತಿರದ ಸಂಬಂಧ ಬೆಳೆಸೋಣ. ಈ ಮೇ ದಿನಾಚರಣೆಯಲ್ಲಿ ನಮ್ಮ ಧ್ಯೇಯ ಸಾಧನೆಗಾಗಿ ಹೋರಾಡುವ ನೂರಾರು ಹೊಸ ಯೋಧರನ್ನು ಗಳಿಸೋಣ. ಬಂಡವಾಳಶಾಹಿಯ ನರಕದಲ್ಲಿ ಕೊಳೆಯುತ್ತಿರುವವರ ವಿಮೋಚನೆಗಾಗಿ, ನಡೆಸುವ ಮಹಾ ಚಳುವಳಿಗೆ ಧೀರ ಸೈನಿಕರ ಪಡೆಯನ್ನು ವಿಸ್ತಾರಗೊಳಿಸೋಣ.

ತಾರಾ ಸಮರ ಅಥವಾ ವಿಶ್ವ ಶಾಂತಿ ?

(ನೇ ಪುಟದಿಂದ)

ಸೋವಿಯತ್‌ನಾಯಕ ಗೋರ್ಬಾಚೇವ್, "ನಾವು ಮನಸ್ಸು ಮಾಡಿದರೆ ನಿಮಗಿಂತ ಕಡಿಮೆ ಸಮಯ ಮತ್ತು ಖರ್ಚಿನಲ್ಲಿ ತಾರಾ ಸಮರದಂತಹ ಕಾರ್ಯಕ್ರಮ ಹಾಕಿಕೊಳ್ಳಬಲ್ಲೆವು" ಎಂದು ಎಚ್ಚರಿಸಿದ್ದಾರೆ. ಅದೇ ಸಮಯದಲ್ಲಿ ಶಸ್ತ್ರಾಸ್ತ್ರ ಕಡಿತ ಮತ್ತು ಪೈಪೋಟಿ ತಡೆಗೆ, ಮಾತುಕತೆಗಳಿಗೆ ಹಲವು ಸೂಚನೆಗಳನ್ನು ಮುಂದಿಟ್ಟಿದ್ದಾರೆ. ವಿಶ್ವ ಶಾಂತಿಗೆ ಇದೊಂದೇ ದಾರಿ.

ಈ ತಾರಾ ಸಮರ ಬೇಕಾಗಿರುವುದು ಅಮೇರಿಕಾದ, ಕೊಬ್ಬಿರುವ ಮಿಲಿಟರಿ ಕೈಗಾರಿಕಾ ಸಂಕೀರ್ಣ (ವಿವರಣೆಗೆ ಇದೇ ಸಂಚಿಕೆಯಲ್ಲಿ ಬೇರೆ ಕಡೆ ನೋಡಿ) ಮತ್ತು ಅದರ ಸರದಾರ ರೇಗನ್‌ಗೆ ಮಾತ್ರ; ಈ ಕಾರ್ಯಕ್ರಮದಿಂದ ಹಲವು ದಶಕಗಳವರೆಗೆ ಇವರಿಗೆ ಭಾರಿ ಲಾಭದ ಖಾತರಿ ಸಿಗುತ್ತದೆ. ಇದನ್ನು ಬಯಲು ಮಾಡಿ ಮನುಕುಲದ ಅಸ್ತಿತ್ವಕ್ಕೆ ಇರುವ ಅಪಾಯದ ಬಗ್ಗೆ ಪ್ರಚಾರ, ಪ್ರಕ್ಷೋಭೆ ನಡೆಸುವುದು, ತಾರಾ ಸಮರದ ಕಾರ್ಯಕ್ರಮವನ್ನು ಸಂಶೋಧನಾ ಹಂತದಲ್ಲೇ ನಿಲ್ಲಿಸಲು ವ್ಯಾಪಕ ಹೋರಾಟ ನಡೆಸುವುದು – ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯ ವರ್ಗ ಹೋರಾಟದ ಮುಖ್ಯಕರ್ತವ್ಯಗಳಲ್ಲೊಂದು. ಇತ್ತೀಚೆಗಷ್ಟೇ ಲಿಬಿಯಾದ ಮೇಲೆ ಧಾಳಿ ನಡೆಸಿ 'ವಿಶ್ವಶಾಂತಿ'ಯ ಬಗ್ಗೆ ತನ್ನ ಪ್ರೇಮ ಪ್ರದರ್ಶಿಸುರುವ, ಭಾರೀ ಟಿ.ವಿ. ದರ್ಶಕಗಣದ ಮುಂದೆ "ರಶ್ಯನ್ ಭಾಷೆಯಲ್ಲಿ 'ಸ್ವಾತಂತ್ರ್ಯ' ಎಂಬುದಕ್ಕೆ ಸಮಾನಾರ್ಥಕ ಪದವೇ ಇಲ್ಲ" ಎಂದು ಲೀಲಾಜಾಲವಾಗಿ ಬುರುಡೆ ಬಿಟ್ಟಿದ್ದ ರೇಗನ್, ಮನುಕುಲದ ಭಾಷೆಯಿಂದ 'ಶಾಂತಿ' ಎಂಬ ಪದವನ್ನೇ ಇಲ್ಲವಾಗಿಸುವ ಮೊದಲು ಎಚ್ಚರಗೊಳ್ಳಬೇಕು.

ಶತಮಾನದ ಮೈಲುಗಲ್ಲುಗಳು

ಮಂಗೋಲಿಯನ್ ಕ್ರಾಂತಿ

ಎರಡು ಶತಮಾನಗಳ ಕಾಲ ಮಂಚೂ ಸಾಮ್ರಾಜ್ಯದಡಿ ವಸಾಹತುಶಾಹಿ ಶೋಷಣೆಗೊಳಗಾಗಿದ್ದು ಅತ್ಯಂತ ಹಿಂದುಳಿದಿದ್ದ ಅಲೆಮಾರಿ ಜನಗಳಾಗಿದ್ದರು ಮಂಗೋಲಿಯನ್ನರು. ದೇಶದ ಪ್ರಮುಖ ಸಂಪತ್ತಾಗಿದ್ದ ಜಾನುವಾರುಗಳ ಬಹುಪಾಲು ಏಳು ಶೇಕಡಾದಷ್ಟಿದ್ದ ಭೂಮಾಲಿಕರು ಹಾಗೂ ಮಠಗಳ ಅಧೀನವಾಗಿದ್ದವು. ವಸಾಹತುಶಾಹೀ ದಬ್ಬಾಳಿಕೆಯಲ್ಲಿ ಊಳಿಗಮಾನ್ಯ ಶೋಷಣೆ ಅಸಹನೀಯ ಮಟ್ಟದಲ್ಲಿತ್ತು.

1917 ರಲ್ಲಿ ರಶ್ಯಾದ ಮಹಾನ್ ನವೆಂಬರ್ ಕ್ರಾಂತಿ ಇಂತಹ ಪರಿಸ್ಥಿತಿಯಲ್ಲಿದ್ದ ಮಂಗೋಲಿಯನ್ನರ ಮೇಲೆ ಸಹಜವಾಗಿಯೇ ಅಗಾಧ ಪರಿಣಾಮ ಬೀರಿತು. 1919 ರ ಸುಮಾರಿಗೆ ಮಂಗೋಲಿಯಾದಲ್ಲಿ ಹಲವಾರು ಗುಪ್ತ ಸಂಘಟನೆಗಳು ಕೆಲಸ ಮಾಡಲಾರಂಭಿಸಿದವು. ಇವೆಲ್ಲಾ ಸೇರಿ 1921 ರಲ್ಲಿ ಒಂದು ಕ್ರಾಂತಿಕಾರಿ ಸಂಘಟನೆ ರಚಿಸಿಕೊಂಡು (ಮುಂದೆ 1925 ರಲ್ಲಿ ಇದು ಮಂಗೋಲಿಯನ್ ಜನತಾ ಪಕ್ಷವಾಯಿತು) ತಮ್ಮ ಮೊದಲ ಅಧಿವೇಶನದಲ್ಲಿ ಸಶಸ್ತ್ರ ಬಂಡಾಯದ ಯೋಜನೆ ತಯಾರಿಸಿದರು. 1921 ರ ಜುಲೈ ತಿಂಗಳ ಆರಂಭದಲ್ಲಿ ಭೀಕರ ಕದನದ ನಂತರ ಕ್ರಾಂತಿಕಾರೀ ಸೇನೆ ರಾಜಧಾನಿ ಉರ್ಗಾ (ಈಗ ಉಲನ್ - ಬತೊರ್) ವನ್ನು ಪ್ರವೇಶಿಸಿತು.

ಜುಲೈ 11, 1921. ಮಂಗೋಲಿಯನ್ ಜನತಾ ಪಕ್ಷದ ಸ್ಥಾಪಕ ಹಾಗೂ ಕ್ರಾಂತಿಯ ಮುಖಂಡ ಡಿ. ಸುಚೆ - ಬತೊರ್ ಸಾವಿರಾರು ಜನ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಜನತಾ ಶಕ್ತಿಯ ವಿಜಯವನ್ನು ಘೋಷಿಸಿದರು.

1917 ರ ಚಾರಿತ್ರಿಕ ಕ್ರಾಂತಿಯ ನಂತರದ ನಾಲ್ಕೇ ವರ್ಷಗಳೊಳಗೆ ನಡೆದ ಈ ಯಶಸ್ವಿ ಕ್ರಾಂತಿಯ ಒಂದು ವಿಶಿಷ್ಟತೆಯೆಂದರೆ ಕಾರ್ಮಿಕ ವರ್ಗವೇ ಇಲ್ಲದ ಹಿಂದುಳಿದ ದೇಶವೊಂದರಲ್ಲಿ ಇದು ಘಟಿಸಿತು. ಈ ಕ್ರಾಂತಿಯ ಚಾಲಕ ಶಕ್ತಿ ಬಡ ಮಂಗೋಲ್ ಪಶು ಪಾಲಕರು. ಇದರ ನೇತೃತ್ವವನ್ನು ವಹಿಸಿದ್ದು ಸೋವಿಯತ್ ಕಾರ್ಮಿಕ ವರ್ಗದ ಪೂರ್ಣ ಬೆಂಬಲ ಪಡೆದಿದ್ದ ಒಂದು ಸಮರಧೀರ ಪಕ್ಷ.

1940 ರ ಹೊತ್ತಿಗೆ ಊಳಿಗ ಮಾನ್ಯ ಪದ್ಧತಿ ಹಾಗೂ ವಿದೇಶೀ ಬಂಡವಾಳವನ್ನು ನಿರ್ಮೂಲ ಮಾಡಿ, ಕಾರ್ಮಿಕ ವರ್ಗವೊಂದರ ಉದಯವಾಗಿ ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣಗೊಂಡ ನಂತರ ಈಗ ಮಂಗೋಲಿಯನ್ ಜನತಾ ಗಣತಂತ್ರ ಸಮಾಜವಾದೀ ರಚನೆಯಲ್ಲಿ ತೊಡಗಿದೆ. 65 ವರ್ಷಗಳ ಹಿಂದೆ ಏಶ್ಯಾದ ಅತ್ಯಂತ ಹಿಂದುಳಿದಿದ್ದ ಈ ದೇಶ ಈಗ ಜನಸಾಮಾನ್ಯರಿಗೆ ನೀಡಿರುವ ಸಾಮಾಜಿಕ ಸೌಲಭ್ಯಗಳು ಕೆಲವು ಮುಂದುವರಿದ ಬಂಡವಾಳ ಶಾಹೀ ದೇಶಗಳಿಗಿಂತಲೂ ಹೆಚ್ಚಿವೆ.

ಅಮೇರಿಕಾ ಅಮೇರಿಕಾ

ಅಮೇರಿಕ, ಅಮೇರಿಕ
ಕಮ್ಯುನಿಸ್ಟ್‌ಗಳ ತುಳಿವ ಹುಲು ನೆಪದಲ್ಲಿ
ಲೈಫ್, ಟೈಮುಗಳ ದ್ವಾರ ಸ್ವಪ್ರತಿಷ್ಠೆಯ ನೀನು
ಮೈಥುನಿಸಿದಾಗೆಲ್ಲ ಕ್ಯಾಕರಿಸಿ ಉಗಿದು ಮೋಡ್ಯಾಕಿಗೆ
ಕ್ಯಾಸ್ಟ್ರೊಸೆಡಿಗಾಗಲಿ ಹೋಚಿಮಿನ್ ನಾಗೆರರ ಜೊತೆ ಹರಟುತಿರುವಾಸೆ
ಸಭ್ಯತೆಯ ಧ್ವಜವದೆಂಪೈರ್ ಕಟ್ಟಡದ ಮೇಲೆ ತೂಗಿಸಿದಾಗ
ಸ್ಪೈಟ್ ಕ್ಲಬ್ಬು ಬೀಚಿನಲಿ ಅಂಡಲೆವ ಕಣ್ಣುಗಳ ನಾಟ್ ನಾಟ್ ಸೆವೆನ್ನುಗಳ
ಹಾಲಿವುಡ್ ಬೀಟ್ ಟ್ವಿಸ್ಟು ಕ್ಯಾನ್‌ಕಾನು ರೋಗಗಳ ಮಾನಸಿಕ ಲಾಗಗಳ
ಗಾಂಜಾ ಮಾರೀವಾನ ಎಲ್ಲೆಸ್ಡಿ ಪಿಲ್ಲುಗಳ ಹಾಗೆ ಎಫ್ಪೆಲ್ಲುಗಳ
ತೀಟೆಗಳ ಕಳ್ಳಕೂಟಗಳ ಗಳಿಗೆಗೆ ಸ್ವಾತಂತ್ರ್ಯದು ಸೋಡಚೀಟಿಗಳ
ಕಂಡು ಕೈ ಚಪ್ಪಾಳೆ ತಟ್ಟೆ ಲೋಕಕ್ಕಿವನು ಸಾರುವಾಸೆ-
ಲೋಕದೆಡೆ ಮೊಗಮಾಡಿ ಬೆಂದಿರುಹ ನಿನ್ನತ್ತ
ನಿಂತ ದೇವಿ ಲಿಬರ್ಟಿಯನ್ನು ತಿರುಗಿಸಿ ಹಿಂದೆ
ನಿನ್ನೆದೆಯ ಸ್ಲಮ್ಮುಗಳ ನೀಗ್ರೋ ಹರ್ಲೆಮ್ಮುಗಳ
ಕಡೆಗವಳ ದಿಟ್ಟಿಯನು ಸರಿಸುವಾಸೆ-
ಹುಟ್ಟುಹಬ್ಬಕೆ ಹಸುಳೆಗೆಂದು ನಿನ್ನವರೀವ
ಟಾಮಿಗನ್ನಿನ ಕೊಡುಗೆಗಳ ಬಿಸುಡುವಾಸೆ.
ಅಮೇರಿಕ, ಅಮೇರಿಕ,
ನಿನ್ನ ಬಲದ ಬಡಾಯಿ ಕೊಚ್ಚುತ್ತಿರುವಾಗೆಲ್ಲ
ವಿಯಟ್ನಾಮಿನಲಿ ರಾಷ್ಟ್ರೀಯ ವೀರದಳ ಮೊರೆದೆದ್ದು
ತಿಗಣೆಯುಜ್ಜುತ್ತಿರುವ ಹರಯದುತ್ಸಾಹಗಳ
ಸರ್ಕಾರಗಳ ಮುಂದು ನಿಲಿಸಿ ಹೌದಪ್ಪಗಳ
ಹೇರಿ, ಸೋಲುತ್ತಿರುವ ಸಿ. ಐ. ಎ; ಸಂಸ್ಥೆಗಳ
ಏರಿದೊಡನೆಯೆ ಬಿದ್ದು ಮಣ್ಣಾದ ಕ್ಷಿಪಣಿಗಳ
ಚಂದಿರನ ಏಣಿಗಳ
ಕಡೆ ನಿನ್ನ ಕಿವಿ ಹಿಂಡಿ ತಿರುಗಿಸುವಾಸೆ.

(ನಿಸಾರ್ ಅಹಮದ್‌ರವರ ಕ್ಷಮೆಕೋರಿ).

'ತಾಯಿ' ಆಚರಿಸಿದ ಮೇ ದಿನ

—ಮ್ಯಾಕ್ಸಿಂ ಗಾರ್ಕಿ

ಮೇ ದಿನ ಸಮೀಪಿಸುತ್ತಿದ್ದುದನ್ನು ನೆನೆಸಿಕೊಳ್ಳುವುದಕ್ಕೂ ಪುರುಸತ್ತಿಲ್ಲದ ಹಾಗೆ, ದಿನಗಳು ಬೇಗ ಬೇಗನೆ ಉರುಳುತ್ತಿದ್ದುವು.

"ಒಮ್ಮೆ ಆ ದಿನ ಬೇಗನೆ ಬಂದು ಮುಗಿದು ಹೋಗಿದ್ದರೆ...."

ಉಷಃ ಕಾಲದಲ್ಲಿ ಕಾರಖಾನೆಯ ಸಿಳ್ಳು ಕೇಳಿಸುತ್ತಿತ್ತು. ಮಗನೂ ಅಂದ್ರೇಯಿಯೂ ಅವಸರದಲ್ಲೇ ತಿಂಡಿ ತಿಂದು ಚಾ ಕುಡಿದು ಹೊರಡುತ್ತಿದ್ದರು. ತಾಯಿಗೆ ಹತ್ತಾರು ಕೆಲಸ ಹೇಳಿ ಹೋಗುತ್ತಿದ್ದರು. ಬಿಲದಲ್ಲಿದ್ದ ಅಳಿಲಿನ ಹಾಗೆ ಚಟುವಟಿಕೆಯಿಂದ, ದಿನವೆಲ್ಲಾ, ಊಟ ತಯಾರಿಸುವುದು, ಪೋಸ್ಟರ್ ಬರೆಯಲು ಕೆಂಪು ಶಾಯಿ—ಅಂಟಿಸಲು ಗೋಂದು ಸಿದ್ಧಪಡಿಸುವುದು ಈ ಕೆಲಸಗಳನ್ನೆಲ್ಲಾ ಮಾಡುತ್ತಿದ್ದಳು. ಅಪರಿಚಿತರು ಎಲ್ಲಿಂದಲೋ ರಹಸ್ಯವಾಗಿ ಅದೃಶ್ಯರಾಗಿ, ತಮ್ಮ ಉದ್ವಿಗ್ನತೆಯ ಶಾಖವನ್ನು ಆಕೆಗೂ ತಗುಲಿಸಿ ಹೋಗುತ್ತಿದ್ದರು.

ಹೆಚ್ಚು ಕಡಿಮೆ ಪ್ರತಿ ರಾತ್ರಿಯೂ, ಮೇ ದಿನಾಚರಣೆಯಲ್ಲಿ ಭಾಗವಹಿಸಲು ಕಾರ್ಮಿಕರಿಗೆ ಕರೆ ಕೊಡುವ ಕರಪತ್ರಗಳನ್ನು ಬೇಲಿಗಳ ಮೇಲೆ ಅಂಟಿಸಲಾಗಿತ್ತು. ಪೋಲೀಸ್ ಠಾಣೆಯ ಬಾಗಿಲಿನ ಮೇಲೂ ಆ ಕರಪತ್ರಗಳಿರುತ್ತಿದ್ದುವು. ಕಾರಖಾನೆಯಲ್ಲಿ ದಿನವೂ ಅವು ಸಿಗುತ್ತಿದ್ದುವು ಪ್ರತಿ ದಿನ ಬೆಳಗ್ಗೆ, ಪೋಲೀಸರು ಕಾರ್ಮಿಕರ ವಸತಿಗೆ ಬಂದು ಆ ಕರಪತ್ರಗಳನ್ನು ಹರಿದು ಅಳಿಸುತ್ತಿದ್ದರು. ಆದರೆ ಊಟದ ಹೊತ್ತಿಗೆ ಹೊಸ ಕರಪತ್ರಗಳು ಗಾಳಿಯಲ್ಲಿ ಹಾರಾಡಿಕೊಂಡು ಬರುತ್ತಿದ್ದುವು.

ವಿನಂತಿಯ ಕರಪತ್ರವನ್ನು ಉತ್ಸಾಹದಿಂದ ಚರ್ಚಿಸುತ್ತಿದ್ದ ಕೂಲಿಕಾರರ ಗುಂಪುಗಳನ್ನು ಎಲ್ಲೆಲ್ಲಿಯೂ ಕಾಣಬಹುದಾಗಿತ್ತು. ಜೀವನ ಚೇತನಪೂರ್ಣವಾಗಿತ್ತು. ಆ ವಸಂತಕಾಲವು ರಸಭರಿತವಾಗಿ ಪ್ರತಿಯೊಬ್ಬರಿಗೂ ಹೊಸ ಹೊಸ ಅನುಭವಗಳಾಗುತ್ತಿದ್ದುವು. ಕೆಲವರಿಗೆ ಆ ಚಟುವಟಿಕೆಗಳಿಂದ ಹೆಚ್ಚು ಸಿಟ್ಟು ಬಂತು. ಬಂಡಾಯಗಾರರನ್ನು ಚೆನ್ನಾಗಿ ಶಪಿಸಿದರು. ಕೆಲವರಲ್ಲಿ ಅಸ್ಪಷ್ಟ ಆಸೆ ಉದಯವಾಯಿತು; ಕಾತರ ತಲೆದೋರಿತು. ತೀರ ಕೆಲವರೇ ಆಗಿದ್ದ ಇನ್ನಿತರರಿಗೆ, ಜನರ ನಡುವಿನ ಈ ಎಲ್ಲ ಪ್ರಕ್ಷೋಭೆಗೆ ತಾವೇ ಕಾರಣರೆಂಬ ತೀವ್ರ ಆನಂದದ ಅನುಭವವಾಯಿತು.

○ ○ ○

" ಬಾಂಧವರೇ ! ನಾವೊಂದು ತೀರ್ಮಾನ ಮಾಡಿ ಈ ದಿನ ಇಲ್ಲಿಗೆ ಬಂದಿದೀವಿ ನಾವು ಯಾರು ಅನ್ನೋದನ್ನ ಈ ದಿನ ಘೋಷಿಸ್ಬೇಕು ; ವಿಚಾರದ ನ್ಯಾಯದ ಸ್ವಾತಂತ್ರ್ಯದ ನಮ್ಮ ಬಾವುಟಾನ ಈ ದಿನ ಹಾರಿಸ್ಬೇಕು—ಅನ್ನೋದೇ ಆ ನಿರ್ಧಾರ ! "

ಕೂಲಿಕಾರ ವರ್ಗದ ವಿಶಾಲವಾದ ಕೆಂಪು ಬಾವುಟ, ದೊಡ್ಡದೊಂದು ಹಕ್ಕಿಯ ರೆಕ್ಕೆಗಳಂತೆ, ಮೇಲ್ಮುಖವಾಗಿದ್ದ ಜನರ ದೃಷ್ಟಿಗಳನ್ನು ದಾಟಿ ಮೇಲಕ್ಕೇರಿತು.

ಪಾವೆಲ್ ತೋಳನ್ನು ಮೇಲಕ್ಕೆತ್ತಿದ ; ಬಾವುಟ ಓಡಾಡಿತು. ಹತ್ತಾರು ಕೈಗಳು ಮುಂಚೆಯೆ ಮೃದುವಾದ ಆ ಧ್ವಜ—ಕೋಲನ್ನು ಹಿಡಿದುವು. ತಾಯಿಯ ಕೈಯೂ ಮುಂದೆ ಬಂದು ಧ್ವಜಕೋಲನ್ನು ಮುಟ್ಟಿತು.

" ಕೂಲಿಕಾರ ವರ್ಗ ಚಿರಾಯುವಾಗಲಿ !" ಎಂದು ಪಾವಲ್ ಘೋಷಿಸಿದ. ಉತ್ತರವಾಗಿ ನೂರಾರು ಕಂಠಗಳು ಗರ್ಜಿಸಿದುವು.

" ಬಾಧಂವರೇ ! ಸೋಶಿಯಲ್ ಡೆಮಾಕ್ರಾಟಿಕ್ ಕಾರ್ಮಿಕ ಪಾರ್ಟಿ,—ನಮ್ಮ ವಿಚಾರಗಳ ಉತ್ಪತ್ತಿಸ್ಥಾನ,—ಚಿರಾಯುವಾಗಲಿ ! "

ಗುಂಪಿಗೆ ಕಳೆ ಬಂತು ; ಉತ್ಸಾಹ ಚಿಮ್ಮಿತು ಬಾವುಟದ ಮಹತ್ವ ತಿಳಿದವರು ಅದರ ಬಳಿ ಬಂದರು. ಮಾಜಿನ್, ಸಮೊಯಿಲೋವ್, ಗುಸೆವರು ಪಾವೆಲ್‌ನ ಬಳಿಗೆ ಬಂದು ನಿಂತರು ನಿಕೊಲಾಯಿ, ತಲೆ ಬಾಗಿಸಿಕೊಂಡು ಜನರ ಒತ್ತಡವನ್ನು ಭೇದಿಸಿಕೊಂಡು ಮುಂದೆ ಬಂದ. ಶುಭ್ರ ಕಣ್ಣುಗಳ ಅಪರಿಚಿತಯುವಕರು ತನ್ನನ್ನು ಬದಿಗೊತ್ತಿ ಮುಂದೆ ಸಾಗುತ್ತಿದ್ದಂತೆ ತಾಯಿಗೆ ಭಾಸವಾಯಿತು.

" ವಿಶ್ವದ ಕಾರ್ಮಿಕರು ದೀರ್ಘ ಕಾಲ ಬಾಳಲಿ ! " ಎಂದು ಪಾವೆಲ್ ಘೋಷಿಸಿದ.

ಹೃದಯ ಕಲಕುವ ಸ್ವರವೊಂದು ಸಾವಿರ ಕಂಠಗಳಿಂದ ಹೊರಟು, ಸಂತೋಷದ ಶಕ್ತಿಯ ತಾರಕ ಸ್ವರವಾಗಿ ಉತ್ತರವಿತ್ತಿತು.

ಜನ ಸಮ್ಮರ್ದ ಹೆಚ್ಚಿತು. ಪಾವೆಲ್ ಬಾವುಟವನ್ನೆತ್ತಿ ಹಿಡಿದು, ಮುಂದಕ್ಕೆ ನಡೆದ. ಮುಖವರಳಿಸಿ ಶುಭ್ರವಾಗಿ ನಗುತಿದ್ದ ಬೆಳಕಿನಲ್ಲಿ, ಬಾವುಟ ಹರಡಿಕೊಂಡಿತು.

ಫಿಯೊದೋರ್ ಮಾಜಿನ್ ಹಾಡತೊಡಗಿದ :

ಹಳೆಯ ಲೋಕವನೆಂದೆಂದಿಗೂ ನಾವು ತ್ಯಜಿಸೀ........

ಹತ್ತಾರು ಇತರ ಕಂಠಗಳಿಂದಲೂ ಎರಡನೆಯ ಚರಣ ಬಂತು

ನಮ್ಮ ಪಾದಗಳಿಂದ ಧೂಳನ್ನು ಹಿಡಿದು ಝಾಡಿಸೀ.... ....

ತಾಯಿ ಮಾಜಿನನ ಹಿಂದೆಯೇ ನಡೆದಳು. ಮಿನುಗುವ ಮುಗುಳ್ನಗುವಿತ್ತು ಅವಳ ತುಟಿಗಳ ಮೇಲೆ. ಕಣ್ಣುಗಳು, ಫೆಯೊದೋರಾನ ತಲೆಯನ್ನು ದಾಟಿ, ಬಾವುಟವನ್ನೂ ತನ್ನ ಮಗನನ್ನೂ ದಿಟ್ಟಿಸುತ್ತಿದ್ದುವು. ತನ್ನ ಸುತ್ತಲೂ ಸಂತೋಷದ ಮುಖಗಳನ್ನೂ ಹೊಳೆಯುವ ಕಣ್ಣುಗಳನ್ನೂ ಅವಳು ಕಂಡಳು. ಆಕೆಯ ಮಗನೂ ಅಂದ್ರೇಯಿಯೂ ಮೆರವಣಿಗೆಯ ಎದುರುಗಡೆ ನಡೆದಿದ್ದರು. ಅಂದ್ರೇಯಿಯ ನ್ಯಾಝಿ ಸ್ವರ ಪಾವೆಲ್‌ನ ದಪ್ಪನೆಯ ಧ್ವನಿಯೊಡನೆ ಮಿಲನಗೊಂಡು ಅವರಿಬ್ಬರೂ ಹಾಡುತಿದ್ದುದು ತಾಯಿಗೆ ಕೇಳಿಸುತಿತ್ತು.

ಹೋರಾಡಲೇಳಿ, ಓ ಕಾರ್ಮಿಕರೇ ಏಳಿ!
ಏಳಿ, ದುಡಿಮೆಯುಪವಾಸದಾ ಬಂದಿಗಳೇ
ಏಳಿ!

ಕೆಂಪು ಬಾವುಟವನ್ನು ಕಾಣಲು ಜನರು ಓಡಿಯೋಡಿ ಬರುತಿದ್ದರೂ ಅವರು ಗದ್ದಲವಾಡುತ್ತಲೇ ಇದ್ದರು. ಆ ಗದ್ದಲ, ಹಾಡಿನ ಸ್ವರಕ್ಕೆ ಶ್ರುತಿಯಾಯಿತು. ಮನೆಗಳಲ್ಲಿ ತಗ್ಗಿದ ಸ್ವರದಲ್ಲಿ ಅದೇ ಹಾಡನ್ನು ಕಾರ್ಮಿಕರು ಹಿಂದೆ ಹಾಡಿದ್ದರು. ಆದರೆ ಇಲ್ಲಿ ಬೀದಿಯಲ್ಲಿ ನಿರಂಕುಶವಾಗಿ ಪ್ರಬಲ ಶಕ್ತಿಯಿಂದ ಆ ಹಾಡು ಹರಿಯಿತು. ಅದಮ್ಯವಾದ ಧೈರ್ಯ ಆ ಹಾಡಿನಲ್ಲಿ ಪ್ರತಿಧ್ವನಿಸುತಿತ್ತು. ಭವಿಷ್ಯತ್ತಿನ ಹಾದಿಯಲ್ಲಿ ನಡೆದು ಬನ್ನಿರೆಂದು ಜನರನ್ನದು ಕರೆಯುತ್ತಿತ್ತು. ಆದರೆ ಜತೆಯಲ್ಲೇ, ಮುಚ್ಚುಮರೆಯಿಲ್ಲದೇ ಅದೆಷ್ಟು ಕಷ್ಟದ ಹಾದಿ ಎಂಬುದನ್ನೂ ಹಾಡು ಹೇಳುತ್ತಿತ್ತು. ಸತ್ತು ಜಡವಾಗಿದ್ದ ವಿಚಾರಗಳ ಕರಿಯ ಇಜ್ಜಲನ್ನು, ಪರಂಪರಾಗತವಾದ ಭಾವನೆಗಳ ಭಾರವಾದ ಕೋಟೆಯನ್ನು, ಹಾಡಿನ ಶಾಂತವಾದ ಜ್ವಾಲೆ ದಹಿಸಿತು ; ಹೋರಾಟ ಕುರಿತಾದ ಭೀತಿಯನ್ನು ಸುಟ್ಟು ಭಸ್ಮಮಾಡಿತು.

ಭೀತಿಗೊಂಡಿದ್ದ, ಆದರೆ ಆನಂದಿತವಾಗಿದ್ದ ಯಾರದೋ ಮುಖ, ತಾಯಿಯ ಪಕ್ಕಕ್ಕೆ ಬಂತು. ನಡುಗುತ್ತಿದ್ದ ಕುಂಯ್‌ಗುಡುತ್ತಿದ್ದ ಸ್ವರವೊಂದು ಉದ್ಗಾರವೆತ್ತಿತು :

"ಮಿಟ್ಯಾ! ಎಲ್ಲಿಗೆ ಹೋಗಿದೀಯಾ?"

ನಿಲ್ಲದೆ ನಡೆಯುತ್ತ ತಾಯಿಯೆಂದಳು :

"ಹೋಗಲಿ. ಅವನ ವಿಷಯ ಚಿಂತಿಸ್ಬೇಡ: ಮೊದಮೊದಲು ನನಗೇ ಹೆದರಿಕೆಯಾಗಿತ್ತು. ನನ್ನ ಮಗ ನೋಡು, ಎದುರಲ್ಲಿದಾನೆ— ಬಾವುಟ ಹೊತ್ತಿರೋನು."

"ಎಲ್ಲಿಗೆ ಹೋಗ್ತಿದೀರಿ ಮೂರ್ಖರೆ? ಮುಂದೆ ಸೈನಿಕರು ನಿಂತಿದ್ದಾರೆ!"

ಒಮ್ಮೆಲೆ ಕ್ಷೀಣವಾದ ಕೈಯಿಂದ ತಾಯಿಯನ್ನು ಬಿಗಿಹಿಡಿದುಕೊಂಡು, ತೆಳ್ಳನೆಯ ಎತ್ತರದ ಆ ಹೆಂಗಸು ಹೇಳಿದಳು :

"ಆ! ಹ್ಯಾಗೆ ಹಾಡ್ತಿದಾರೆ ಕೇಳಿದಿಯಾ? ಅಮ್ಮ! ನನ್ನ ಮಿಟ್ಯಾ ಕೂಡಾ ಹಾಡ್ತಿದಾನೆ!"

ಅಗ್ರಹದಿಂದ ಸಮಜಾಯಿಸುವ ಧ್ವನಿಯಲ್ಲಿ ತಾಯಿ ಹೇಳಿದಳು :

"ಹೆದರಬೇಡವಮ್ಮ. ಇದು ಪವಿತ್ರ ಕೆಲಸ. ಯೋಚಿಸಿ ನೋಡು. ಜನರು ಹೋಗಿ ದೇವರಿಗಾಗಿ ಪ್ರಾಣ ತೆರದೇ ಇದ್ದಿದ್ದರೆ, ಕ್ರಿಸ್ತ ದೊರೆತಿದ್ದನೇ?"

o o o

ಒಮ್ಮೆಲೆ ಮೆರವಣಿಗೆಯ ಮುಂಭಾಗ ಯಾವುದಕ್ಕೋ ಢಿಕ್ಕಿ ಹೊಡೆದಂತಾಯಿತು. ಮೆರವಣಿಗೆಯ ದೇಹವೇ ಹಿಂದಕ್ಕೆ ಬಾಗಿ ಮೆಲ್ಲನೆ ಕೋಪದ ಗರ್ಜನೆ ಮಾಡಿದ ಹಾಗಾಯಿತು. ಹಾಡು ಕೂಡಾ ಕಂಪಿಸಿತು. ಆದರೆ ಅದು ಕ್ಷಣಕಾಲ. ಬಳಿಕ ಮೊದಲಿಗಿಂತ ಹೆಚ್ಚು ವೇಗವಾಗಿ ಗಟ್ಟಿಯಾಗಿ ಹಾಡು ಕೇಳಿಸಿತು. ಆದರೆ ಮತ್ತೊಮ್ಮೆ ಸ್ವರನಿಂತಿತು. ಒಬ್ಬರ ಹಿಂದೊಬ್ಬರಾಗಿ ಜನರು ಹಾಡುವುದನ್ನು ನಿಲ್ಲಿಸಿದರು. ಅಲ್ಲಲ್ಲಿ ಸ್ವರಗಳು ಮತ್ತೆ ಆ ಹಾಡನ್ನೆತ್ತಿ ಹಿಂದಿನ ಗಂಭೀರತೆಗೇರಿಸಿ ಮುಂದುವರಿಸಲು ಯತ್ನಿಸುತ್ತಿದ್ದರು.

ಹೋರಾಡಲೇಳಿ, ಓ ಕಾರ್ಮಿಕರೇ ಏಳಿ!
ಏಳಿ, ದುಡಿಮೆಯುಪವಾಸದಾ ಬಂದಿಗಳೇ...

ಆದರೆ ಈ ಯತ್ನದಲ್ಲಿ ಸಾಮೂಹಿಕ ನಿರ್ಧಾರವಿರಲಿಲ್ಲ. ಒಗ್ಗೂಡಿದ ಶ್ರದ್ಧೆ ಇರಲಿಲ್ಲ. ಸ್ವರಗಳಲ್ಲಿ ಗಾಬರಿಯ ಕಂಪನವಿತ್ತು.

ನಾವು ಮುಂದೆ ಸಾಗಬೇಕು. ಮುನ್ನಡೆಯಿರಿ, ಬಾಂಧವರೆ!

ಪಾವೆಲ್‌ನ ಸ್ವರ ದೃಢವಾಗಿತ್ತು. ಅವನ ಮಾತು ತೀಕ್ಷ್ಣವಾಗಿ ಸ್ಪಷ್ಟವಾಗಿ ಕೇಳಿಸಿತು. ಆದರೆ ಗುಂಪು ಚದರತೊಡಗಿತು. ಒಬ್ಬರ ಹಿಂದೊಬ್ಬರು ಮೆರವಣಿಗೆಯ ಸಾಲಿನಿಂದ ಹೊರಬಿದ್ದರು. ಮನೆಗಳಿಗೆ ಹೋಗುತ್ತ ಬೇಲಿಗೊರಗಿ ನಿಂತರು. ಮೆರವಣಿಗೆಯಾಗ ಮೊನಚಾದ ಗೂಟದ ರೂಪ ತಳೆಯಿತು. ಪಾವೆಲ್ ಅದರ ಮುಂಚೂಣಿಯಾಗಿದ್ದ ಕೂಲಿಕಾರರ ಆ ಕೆಂಪು ಬಾವುಟ ಅವನ ಮೇಲ್ಗಡೆ ಶುಭ್ರವಾಗಿ ಹಾರಾಡುತಿತ್ತು. ಅಥವಾ ಅದಕ್ಕಿಂತಲೂ ಹೆಚ್ಚು ಚೆನ್ನಾಗಿ ಹಾರಲು ಸಿದ್ಧವಾಗಿ ರೆಕ್ಕೆ ಬಿಡಿಸಿದ ಕಪ್ಪು ಹಕ್ಕಿಯನ್ನು ಆ ಮೆರವಣಿಗೆ ಹೋಲುತಿತ್ತು. ಪಾವೆಲ್ ಆ ಹಕ್ಕಿಯ ಕೊಕ್ಕಿನಂತೆ ನಿಂತಿದ್ದ........

o o o

"ಅಂಜಬೇಡಿ. ವೀರರೇ!"

"ವ್ಲಾಸೋವ್ ಓಡು!"

"ಹಿಂದಕ್ಕೆ ಬಾ, ಪಾವೆಲ್!"

ವೆಸೋವ್‌ಷ್ಚಿಕೋವ್ ವ್ಯಗ್ರವಾಗಿ ಹೇ

"ಬಾವುಟಾನ ಬಿಟ್ಬಿಬಿಡು ಪಾವೆಲ್
ಇಲ್ಲಿ ಕೊಡು–ಬಚ್ಚಿಡ್ತೀನಿ." ಆತ ಧ್ವಜಕ
ಲಿನತ್ತ ಕೈ ಚಾಚಿ ಅದನ್ನೆಳೆದ. ಬಾವು
ಹಿಂದಕ್ಕೆ ಸರಿಯಿತು.

"ಬಿಡು! ದೂರ ಹೋಗು!" ಎಂ
ಪಾವೆಲ್ ಗದರಿದ.

ಸುಟ್ಟುಹೋಯಿತೇನೋ ಎಂಬಂತೆ
ಕ್ಕನೆ ನಿಕೊಲಾಯಿ ಕೈಯನ್ನು ಹಿಂದಕ್ಕೆ
ಹಾಡು ನಿಂತಿತು. ಜನರು ಅಲ್ಲೆ ತಡೆ
ಪಾವೆಲ್‌ನ ಸುತ್ತಲೂ ಭದ್ರವಾದ ಗೋಡೆಯ
ನಿಂತರು. ಆದರೆ ಪಾವೆಲ್ ಮುನ್ನುಗ್ಗಲೆತ್ನಿ
ಮೇಲಿನಿಂದುದುರಿ, ತೆಳ್ಳನೆಯ ಮೋಡದ
ಎಲ್ಲರನ್ನೂ ಮುಚ್ಚಿಕೊಂಡಂತೆ, ಮಹಾ ಮ
ಒಮ್ಮೆಲೆ ನೆಲೆಸಿತು.

ಹೆಚ್ಚೆಲ್ಲ, ಸುಮಾರು ಇಪ್ಪತ್ತು ಜನ
ಬಾವುಟದ ಸುತ್ತಲೂ ನಿಂತಿದ್ದರು. ಆದರೆ ಆ
ಜನ ದೃಢವಾಗಿ ಕದಲದೆ ನಿಂತರು. ಕ
ಗೊಂಡ ತಾಯಿಗೆ ಅವರ ಬಳಿ ಸಾರುವ
ಯಾಯಿತು. ಅವರಿಗೇನಾದರೂ ಹೇಳಬೇ
ಅಸ್ಪಷ್ಟ ಹಂಬಲ ಹುಟ್ಟಿತು.

ಎತ್ತರದ ಆ ವೃದ್ಧ ಮನುಷ್ಯ, ಬಾ
ದತ್ತ ಬೊಟ್ಟು ಮಾಡುತ್ತ, "ಅದನ್ನು
ನಿಂದ ಕಿತ್ಕೋ, ಲೆಫ್ಟಿನೆಂಟ್!" ಎಂದ.

ಆ ಕಿರಿಯ ಗಾತ್ರದ ಅಧಿಕಾರಿ ಪಾವೆ
ಬಳಿಗೋಡಿ ಧ್ವಜಕ್ಕೆ ಕೈ ಹಾಕಿದ.

"ಇಲ್ಲಿ ಕೊಡಿ!" ಎಂದು ಕಿರಿಚಿದ.

"ನಿನ್ನ ಕೈ ತೆಗೆ" ಎಂದು ಪಾವ
ಗಟ್ಟಿಯಾದ ಸ್ವರದಲ್ಲಿ ಉತ್ತರವಿತ್ತ. ಬಾ
ಶುಭ್ರವಾಗಿ ಗಾಳಿಯಲ್ಲಿ ಹಾರಾಡಿತು. ಬಲ
ಎಡಕ್ಕೂ, ಇಳಿದು ಏರಿತು. ಕೊನೆಗೆ
ನೇರವಾಗಿ ಸೆಟೆದು ನಿಂತಿತು. ಆ ಪುಟ್ಟ ಅಧಿ
ಹಿಂದಕ್ಕೆ ಹಾರಿಬಿದ್ದುಬಿಟ್ಟ. ನಿಕೊಲಾ
ಮುಷ್ಟಿಯಲುಗಿಸುತ್ತಾ ತಾಯಿಯನ್ನು ದಾ
ಹೋದ.

"ಅವರನ್ನು ಬಂಧಿಸಿರಿ!" ಎ
ಮುದುಕ ಕಾಲ್ತುಳಿತದ ಸದ್ದಿನೊಡನೆ ಗಜ

ಹಲವು ಸೈನಿಕರು ಮುಂದಕ್ಕೋಡಿ
ಅವರಲ್ಲೊಬ್ಬ ಬಂದೂಕಿನ ಹಿಡಿಯನ್ನು ಬೀ
ಬಾವುಟ ಕಂಪಿಸಿ, ಮುಂದಕ್ಕೆ ಬಿದ್ದು, ಸೈ
ಬೂದು ಸಮೂಹದಲ್ಲಿ ಅದೃಶ್ಯವಾಯಿತು.

ಕಿಟಕಿ ಮತ್ತು ಗಾಲಿಗಳು

– ಸು. ರಂ. ಎಕ್ಕುಂಡಿ

ಬೆಳಕು ಹರಿದಾಗ ಕಿಡಕಿಯ ಬಳಿ ನಿಂತು
ಪರದೆಗಳ ಸರಿಸಿ, ನೋಡಿದರು ಹೊರಗೆ
ಹುಡುಗ ಕಾರ್ಲ ; ಅಸ್ವಸ್ಥ ಹೊಳಪುಗಣ್ಣುಗಳಿಂದ
ಹೆನ್ರಿಯುತ ಬಂದಳು, ಮಗನ ಬಳಿಗೆ,

ಕೂದಲು ನೇವರಿಸಿ ಅಂದಳು ಕಾರ್ಲ,
ಚಳಿಯಾಗದೆ ? ಎಷ್ಟು ಬೇಗ ಎದ್ದೆ ?
ಜಿಮ್ನಾಸಿಯರ್ಮ್‌ನ ಪರೀಕ್ಷೆಯ ಚಿಂತೆಯೆ ?
ಮುಗಿಯಿತೆ ಈಗಲೇ ನಿನ್ನ ನಿದ್ದೆ ?

ಟ್ರಿಯರನ ಬೀದಿಯಲಿ, ಕಂಡರು ದೃಶ್ಯಗಳ
ಚರ್ಚುಗಳು ಮನೆಗಳು ಮರಗಳನ್ನು
ಕೈಗಾಡಿ ತಳ್ಳಿ ನಡೆದಿರುವ ಕೂಲಿಗಳು
ಹಳ್ಳಿಗರು ಹೊತ್ತಲೆವ ಹೊರೆಗಳನ್ನು

ಕಂಡಲ್ಲಿ ಅಂಡಲೆದು ಬಡವರು ಕೂತರು
ನಿಂತಿತು ಒಮ್ಮೊಮ್ಮೆ ನಡುಗಿ ಚಳಿಗೆ
ಗಂಟೆಗಳು ಬಾರಿಸಲು ಮುತ್ತಿನಲಿ ಎಂಬಂತೆ
ಒಮ್ಮೊಮ್ಮೆ ನೋಡಿದರು ಮುಗಿಲ ಕಡೆಗೆ

ಚಿಂದಿಗಳನುಟ್ಟಿರುವ ಮಂದಿಯ ಮುಖ
ದಲ್ಲಿ, ಹಸಿವು ಕೊರೆದಂಥ ಗೆರೆಗಳಲ್ಲಿ
ಕಷ್ಟಗಳು ತೊಟ್ಟಿಕ್ಕಿದವು ಬಡವಸೆಗಳು
ಮುಳುಗಿದವು ನಿಟ್ಟುಸಿರ ತೆರೆಗಳಲ್ಲಿ

0 0 0 0

ತಾಯಿ ಅಂದರು, "ಮಗು, ಚರಿತ್ರೆ ಸುಲಭ
ದೊರೆಗಳ ರಾಣಿಯರ ಹುಟ್ಟು ಸಾವು
ನೆನಪಿಟ್ಟರಾಯಿತು, ಯುದ್ಧಗಳು ಜರುಗಿದ್ದು
ಬರಗಾಲ ಭೂಕಂಪ ತಂದ ನೋವು,

ಹುಡುಗ ಕಾರ್ಲ ಅಂದನು "ಕಂಡಿರುವಿರಲ್ಲವೆ
ಅಲ್ಲಿರುವ ಕೋಟೆ ಕೊತ್ತಳಗಳನ್ನು
ಕಿಡಿಕಿಯಾಚೆಗೆ ಉರುಳಿವೆ ಚರಿತ್ರೆಯ ಗಾಲಿ
ದಾರಿಯಲಿ ಎಸೆದು ಸ್ಮಾರಕಗಳನ್ನು"

ಕಿಡಿಕಿಯಿರಬೇಕು ; ಆಗಲೆ ಕಾಣುವದು
ಉರುಳುವ ಗಾಲಿಗಳ ಗೂಢ ದೃಶ್ಯ
ಕಾಲವೆ ತಳ್ಳಿರುವ ಗಾಡಿಯಿಂದೆ ಪ್ಪೆಷ್ಟೊ
ವೈಭವದ ಸರಕುಗಳು, ಈಗ ದೃಶ್ಯ !

ನಿಧಾನ, ಆದರೂ ದೃಢವಾಗಿ ಉರುಳಿವೆ
ಗಾಲಿಯವು, ಇವನ್ನು ತಡೆವೆವೆಂದು
ಎದೆಯೊಡ್ಡಿ ನಿಂತ ಸಾಮ್ರಾಟ ಸಾಮಂತ ಪಡೆ
ಎಲ್ಲರನು ಗುಡಿಸಿ ಉರುಳಿರುವವಿಂದು

ಹಸಿದವರ ತುತ್ತುಗಳ ಕಸಿದ–ಕಪಟಿ
ಗಳು, ಗಾಲಿಗಳ ಬುಡದಲ್ಲಿ ಹುಡಿಯ ಹಾದಿ
ದುಡಿದವರ ಜಾಡುಗಟ್ಟಿದ ಕ್ರೋಧವು
ಹೃಯಲ್ಲಿ ಹೊಸಯುಗದ ಮಗುವನೆತ್ತುವಳು ದಾದಿ

ದುಡಿವ ಜನ ಬರೆವರು ಚರಿತ್ರೆ. ಧಾನ್ಯಗಳ
ತೆನೆಯಲ್ಲಿ ಕಾಲದ ಕುಲುಮೆಯಲ್ಲಿ
ಹಗಲೀರಿ ಕೂತವರ ಕೆಳಗೆಳೆದು ಹಾಕು
ವರು ಶ್ರಮ ಜೀವಿಗಳ ಧ್ವಜದ ಗೆಲುವಿನಲ್ಲಿ

ದುಡಿವ ಕೈಯುರುಳಿಸುವ ಗಾಲಿಗಳ ವೈ
ಭವಕೆ ಹೆಗಲೊಡ್ಡ ಬೇಕೆಂಬ ತವಕದೊಳಗೆ
ಹೊಸ ಯುಗದ ಧೀರ ಮುನ್ನಡೆಯ ಸಂ
ಕಲ್ಪಗಳ ದೃಶ್ಯ ಕಂಡಿದ್ದ ಕಾರ್ಲ, ಕಿಟಕಿಯೊಳಗೆ

"ಆ !" ಎಂದು ಯಾರೋ ಕಟುವಿಷಾದದ ಉದ್ಗಾರವೆತ್ತಿದರು.

ಗಾಯಗೊಂಡ ಮೃಗದಂತೆ ಗಂಟಲಿನಿಂದ ರೋದನ ಹೊರಚಿಮ್ಮಿತು. ಉತ್ತರವಾಗಿ, ಸೈನಿಕರೆಡೆಯಿಂದ ಪಾವೆಲ್‌ನ ಸ್ಪಷ್ಟ ಸ್ವರ ಕೇಳಿಸಿತು ;

"ಹೋಗ್ಬರ್ತೀನಿ ಅಮ್ಮಾ ; ಹೋಗ್ಬರ್ತೀನಿ ಅಮ್ಮಾ..."

ಎರಡು ವಿಚಾರಗಳು ಒಮ್ಮೆಲೆ ಆಕೆಗೆ ಹೊಳಿದುವು : "ಆತ ಜೀವಂತವಾಗಿದ್ದಾನೆ. ನನ್ನನ್ನು ಸ್ಮರಿಸಿಕೊಂಡ......."

ಆಗಲೆ ಅಂದ್ರೇಯಿಯ ಸ್ವರ ಕೇಳಿಸಿತು.

"ಬರ್ತೀನವ್ವಾ !"

ಕಾಲ್ಬೆರಳುಗಳ ಮೇಲೆ ನಿಂತು ಕತ್ತನ್ನು ಎತ್ತಿ ಹಿಡಿದು, ಅವರನ್ನೊಮ್ಮೆ ಕಾಣಲು ತಾಯಿ ಯತ್ನಿಸಿದಳು. ಅಲ್ಲಿ ಸೈನಿಕರ ತಲೆಗಳಿಗಿಂತ ಎತ್ತರವಾಗಿ ಅಂದ್ರೇಯಿಯ ಮುಖ ಕಾಣಿಸುತ್ತಿತ್ತು. ಆತ ಮುಗುಳ್ನಗುತ್ತ ಆಕೆಗೆ ವಂದಿಸುತಿದ್ದ.

"ಹ.....ಕಂದವ್ವಗಳೇ .... ! ಆಂದ್ರಿಯೂಷಾ ! ಪಾಶಾ !" ಎಂದು ಅವಳು ಕೂಗಿದಳು.

"ವಂದನೆ, ಬಾಂಧವರೇ !" ಎಂದು ಅವರತ್ತ ಸೈನಿಕರೆಡೆಯಿಂದ ಕರೆದು ಹೇಳಿದರು.

ವಿವಿಧ ಸ್ವರಗಳ ಪ್ರತಿಧ್ವನಿಯೊಂದು ಅವರಿಗೆ ಮರುವಂದನೆಯನ್ನಿತ್ತಿತ್ತು. ಕಿಟಕಿಗಳಿಂದ. ಎಲ್ಲೋ ಮೇಲಿನಿಂದ, ಮಾಡಗಳಿಂದಲೂ ಆ ಪ್ರತಿಧ್ವನಿ ಬಂತು.

ಸ್ವಾತಂತ್ರ್ಯವನ್ನು ಬಲಪಡಿಸಲು

ಸಾರ್ವಜನಿಕ ಕ್ಷೇತ್ರವನ್ನು ಉಳಿಸಿ

ಎಸ್. ಸೂರ್ಯನಾರಾಯಣರಾವ್

ಬ್ರಿಟಿಷ್ ಸಾಮ್ರಾಜ್ಯವಾದಿಗಳು ನಮ್ಮ ದೇಶವನ್ನು ಆಳುತ್ತಿರುವಾಗ ದೇಶದ ಕೈಗಾರಿಕೀಕರಣ ಮಾಡಲು ತಯಾರಿದ್ದಿಲ್ಲ. ತಮ್ಮ ಆಳ್ವಿಕೆಗೆ ಸಹಾಯ ಮಾಡತಕ್ಕಂತ ಕೆಲವು ಉದ್ದಿಮೆಗಳನ್ನು ಮಾತ್ರ ಅವರು ಕೈಗೆತ್ತಿಕೊಂಡರು. ಉದಾಹರಣೆಗೆ ಸೈನ್ಯ ಸಾಗಾಣಿಕೆ ಮಾಡಲು ರೈಲ್ವೇ, ಆಡಳಿತ ನಡೆಸಲು ಅಂಚೆ ತಂತಿ ಇಂತಹವುಗಳು ಮೊದಲನೇ ಹಾಗೂ ಎರಡನೇ ಮಹಾಯುದ್ಧ ಕಾಲದಲ್ಲಿ ಹತ್ತಿ ಗಿರಣಿ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದವು. ಹಳೇ ಮೈಸೂರಿನ ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಎಷ್ಟೇ ಪ್ರಯತ್ನಪಟ್ಟರೂ ಮೋಟಾರ್ (ಕಾರು) ತಯಾರಿಸುವ ಕಾರ್ಖಾನೆ ಸ್ಥಾಪಿಸಲು ಸಾಧ್ಯವಾಗಲಿಲ್ಲ. ಭದ್ರಾವತಿಯ ಉಕ್ಕಿನ ಕಾರ್ಖಾನೆಯನ್ನು ಮಾತ್ರ ಸ್ಥಾಪಿಸುವ ಯತ್ನದಲ್ಲಿ ಯಶಸ್ವಿ ಆದರು. ಜಮ್‌ಶೇಟ್‌ಜಿ ಟಾಟಾ ಅವರು ಸಾರ್ವಜನಿಕರಿಂದ ಹಣ ಕೂಡಿಸಿ, ಜೆಮ್‌ಶೆಡ್‌ಪುರದಲ್ಲಿ ಒಂದು ಉಕ್ಕಿನ ಕಾರ್ಖಾನೆ ಸ್ಥಾಪಿಸಿದರು. 1947 ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ದಿ. ಪಂಡಿತ್ ಜವಾಹರಲಾಲ್ ನೆಹರೂ ಅವರು ಕೈಗಾರಿಕೀಕರಣ ಆಗಬೇಕೆಂಬ ಅಪೇಕ್ಷೆಯಿಂದ ಸಾಮ್ರಾಜ್ಯವಾದೀ ರಾಷ್ಟ್ರಗಳಿಗೆ ನಿಯೋಗಗಳನ್ನು ಕಳುಹಿಸಿದರೂ ಅದು ಯಶಸ್ವಿ ಆಗಲಿಲ್ಲ. ಆ ರಾಷ್ಟ್ರಗಳು ವ್ಯವಸಾಯ ಕ್ಷೇತ್ರವನ್ನು ಉತ್ತಮ ಪಡಿಸಿ ಎಂದು ಉಪದೇಶ ಹೇಳಿ ಕೊಲೊಂಬೊ ಯೋಜನೆಯನ್ನು ಕಾರ್ಯಗತ ಮಾಡಿ ಎಂದು ಒತ್ತಾಯಿಸಿದವು. ಅದ್ದರಿಂಲೇ ಕೈಗಾರಿಕೀಕರಣಕ್ಕೆ ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಒತ್ತು ಇರಲಿಲ್ಲ.

ಮೊದ ಮೊದಲು ಕೇಂದ್ರ ಕಾಂಗ್ರೆಸ್ ಸರ್ಕಾರ ಸಮಾಜವಾದೀ ರಾಷ್ಟ್ರವಾದ ಸೋವಿಯತ್ ರಶ್ಯಾದೊಂದಿಗೆ ನೆರವು ಪಡೆಯಲು ಹಿಂದೇಟು ಹಾಕುತ್ತಿತ್ತು. ಯಾವಾಗ ಸಾಮ್ರಾಜ್ಯವಾದೀ ದೇಶಗಳು ಘನ ಕೈಗಾರಿಕೆಯನ್ನು ಸ್ಥಾಪಿಸಲು ಸಹಾಯ ಮಾಡಲಿಲ್ಲವೋ, ಆಗ ವಾಸ್ತವಿಕತೆ ಕೇಂದ್ರ ಸರ್ಕಾರವನ್ನು ಸಮಾಜವಾದೀ ರಾಷ್ಟ್ರಗಳ ಕಡೆ ನೆರವಿಗೆ ನೋಡುವಂತೆ ನಿರ್ಬಂಧಪಡಿಸಿತು. ಸೋವಿಯತ್ ದೇಶದಿಂದ ನಮ್ಮಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪನೆ ಆದ ಮೇಲೆ ಬ್ರಿಟಿಷ್ ಮತ್ತು ಜರ್ಮನ್ ಸರ್ಕಾರಗಳು ಕೂಡ ತಮ್ಮ ಹಿಡಿತ ತಪ್ಪೀತೆಂಬ ಭಯದಿಂದ ಉಕ್ಕಿನ ಕಾರ್ಖಾನೆಯ ಸ್ಥಾಪನೆಗೆ ನೆರವು ನೀಡಲು ಮುಂದೆ ಬಂದವು. 1956 ರಲ್ಲಿ ಕೈಗಾರಿಕೀಕರಣದ ಬಗ್ಗೆ ಧೋರಣೆ ರೂಪಿತವಾಯಿತು. ಇದರಂತೆ "ಸಮಾಜವಾದೀ ಮಾದರಿಯ ಸಮಾಜ ರಚನೆಗೆ, ಯೋಜಿತ ಹಾಗೂ ಶೀಘ್ರ ಬೆಳವಣಿಗೆಗೆ, ಎಲ್ಲಾ ಪ್ರಮುಖ್ಯ ಹಾಗೂ ಮೂಲಭೂತ ಕಾರ್ಖಾನೆಗಳನ್ನೂ ಮತ್ತು ಲೋಕೋಪಯೋಗಿ ಉದ್ದಿಮೆಗಳನ್ನು ಸಾರ್ವಜನಿಕ ಕ್ಷೇತ್ರವೇ ಹೊಂದಿರಬೇಕು" ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸ್ಪಷ್ಟಪಡಿಸಿದಂತೆ, ನೂತನ "ಕೈಗಾರೀಕರಣ ಹಾಗೂ ದೊಡ್ಡ ಮಟ್ಟದ ಉತ್ಪತ್ತಿಗೆ, ಏಕರೀತಿಯ ಹಿಡಿತ. ಮತ್ತು ವಸ್ತುಸಂಪತ್ತನ್ನು ಕೆಲವು ನಿಶ್ಚಿತ ದಿಕ್ಕಿನತ್ತ ಹರಿಯುವಂತೆ ಮಾಡುವುದು ಅತೀ ಮುಖ್ಯವಾಗಿದೆ. ನಮ್ಮ ಅರ್ಥಿಕತೆಯ ಬೆಳವಣಿಗೆಯ ಮಟ್ಟ, ನಾವು ಬೆಳೆಸುವ ಮೂಲ ಉದ್ದಿಮೆ, ಭಾರಿ ಉದ್ದಿಮೆ ಹಾಗೂ ಖನಿಜಗಳನ್ನು ಉಪಯೋಗಿಸತಕ್ಕಂತಾದ್ದು, ಇವುಗಳ ಮೆಲೆ ಹೊಂದಿಕೊಂಡಿದೆ. ಯಾವ ಕೈಗಾರಿಕೆಗಳಿಂದಾಗಿ ಬಂಡವಾಳದ ಕೈಗಾರಿಕೀಕರಣವಾಗುವ ಸಾಧ್ಯತೆ ಇರುತ್ತದೋ, ಅಂತಹ ಕೈಗಾರಿಕೆಗಳಲ್ಲಿ; ಸಾರ್ವಜನಿಕ ಹಿಡಿತ, ಅಥವಾ ಆಡಳಿತೆಯಲ್ಲಿ ಸಾರ್ವಜನಿಕರ ಪಾತ್ರ ಅತೀ ಮುಖ್ಯವಾಗಿರುತ್ತದೆ"

ಭಾರತ ದೇಶಕ್ಕೂ ನೆರೆ ರಾಷ್ಟ್ರವಾದ ಪಾಕಿಸ್ತಾನಕ್ಕೂ 1965 ರಲ್ಲಿ ಘರ್ಷಣೆ ಆದಾಗ ಅಮೇರಿಕಾ ದೇಶ ಉಪಕರಣ ಹಾಗೂ ಬಿಡಿ ಭಾಗಗಳನ್ನು ಕೊಡಲು ನಿರಾಕರಿಸಿತು. ಆಗ ಶ್ರೀಮತಿ ಇಂದಿರಾ ಗಾಂಧಿಯವರು ಸ್ವಾವಲಂಬನೆಯ ಬಗ್ಗೆ ಒತ್ತು ಕೊಟ್ಟರು.

ರಾಜೀವ್ ಗಾಂಧಿಯವರು ಅಧಿಕಾರಕ್ಕೆ ಬಂದ ಮೇಲೆ ಸ್ವಾವಲಂಬನೆ ಹಾಗೂ 1956ನೇ ಇಸವಿಯ ಕೈಗಾರಿಕೀಕರಣ ನೀತಿಯನ್ನೇ ಕೈಬಿಟ್ಟಂತೆ ಕಾಣುತ್ತಿದೆ. ಅವರು ರೂಪಿಸಿರುವ ಹೊಸ ಅರ್ಥಿಕ ಯೋಜನೆ ದೇಶದ ಬೆಳವಣಿಗೆಗೆ ಅತಂಕಕಾರಿ ಆಗಿದೆ ರಾಜೀವ ಗಾಂಧಿ ಸರ್ಕಾರ ಡಾ। ಅರ್ಜುನ್ ಸೇನ್ ಗುಪ್ತಾರವರನ್ನು ಸಾರ್ವಜನಿಕ ಕ್ಷೇತ್ರ ಉದ್ದಿಮೆಗಳ ಬಗ್ಗೆ ಪರಿಶೀಲನೆ ನಡೆಸಲು ನೇಮಿಸಿದರು, ಮತ್ತು ಆ ವರದಿಯನ್ನು ಸದರೀ ಕಮಿಟಿ 31-12-84 ರಂದು ಕೇಂದ್ರ ಸರಕಾರಕ್ಕೆ ಒಪ್ಪಿಸಿತು. ಈ ವರದಿಯಂತೆ ಸರಕಾರವು ಕೇವಲ ಆಯಕಟ್ಟಿನ ಉದ್ದಿಮೆಗಳಿಗೆ (Core sector industries) ಮಾತ್ರ ಪ್ರಾಧಾನ್ಯ ಕೊಟ್ಟು, ಇತರ ಉದ್ದಿಮೆಗಳನ್ನು ಖಾಸಗೀ ಕ್ಷೇತ್ರದಂತೆ ಪರಿಗಣಿಸಬೇಕೆಂದಿದೆ. ಈ ವರದಿಯ ಅಭಿಪ್ರಾಯದಂತೆ, ಸರಕಾರವು ಯೋಜಿತ ಬೆಳವಣಿಗೆಗೆ ಬೇಕಾದ ಮೂಲಭೂತ ಉದಿಮೆ ಮಾತ್ರ ಸಾರ್ವಜನಿಕ ಕ್ಷೇತ್ರದಲ್ಲಿ ಉಳಿಸಿಕೊಂಡು, ಉಳಿದವುಗಳನ್ನು ಈ ಕ್ಷೇತ್ರದಿಂದ ಕಿತ್ತು ತೆಗೆಯಬೇಕು. ಈ ಆಯಕಟ್ಟಿನ ಉದಿಮೆಗಳು ಖಾಸಗೀ ಕ್ಷೇತ್ರದಲ್ಲಿದ್ದರೂ ಅದರಲ್ಲಿ ಸರ್ಕಾರದ ಹಿಡಿತ ಇರತಕ್ಕದ್ದು. ಸಮಿತಿಯ ವರದಿಯಂತೆ ಆಯಕಟ್ಟಿನ ಉದ್ದಿಮೆಗಳಲ್ಲಿ ಕಲ್ಲಿದ್ದಲು, ಲಿಗ್ನೈಟ್, ಪೆಟ್ರೋಲಿಯಂ, ವಿದ್ಯುಶಕ್ತಿ, ಉಕ್ಕು ಎಲ್ಯೂಮಿನಿಯಂ, ಸತು,

ಸೀಸ, ತಾಮ್ರ, ನಿಕಲ್ ಲೋಹಗಳ ಉತ್ಪಾದನೆ. ಪೆಟ್ರೋಕೆಮಿಕಲ್‌ಗಳ ಮಧ್ಯ ಉತ್ಪಾದನಗಳು. ಆಯಕಟ್ಟಿನಲ್ಲಿಲ್ಲದ ಇತರ ಉದ್ದಿಮೆಗಳಿಗೆ ವರದಿಯು ಕಡಿಮೆ ಪ್ರಾಮುಖ್ಯತೆಯನ್ನು ಕೊಟ್ಟಿದೆ

ಕೇಂದ್ರ ಸರಕಾರ ದೇಶವನ್ನು ಬಂಡವಾಳಶಾಹೀ ಪಥದಲ್ಲಿ ತೆಗೆದುಕೊಂಡು ಹೋಗುತ್ತಿರುವಾಗ, ಜಗತ್ತಿನಲ್ಲಿ ಬಂಡವಾಳ ಶಾಹೀ ಜಗತ್ತೇ ತೀವ್ರ ಆರ್ಥಿಕ ಬಿಕ್ಕಟ್ಟಿನಲ್ಲಿ ಬಿದ್ದಿರುವಾಗ, ನಮ್ಮ ದೇಶವೂ ಸಹ ತೀವ್ರ ಆರ್ಥಿಕ ಇಕ್ಕಟ್ಟಿನಲ್ಲಿ ಬಿದ್ದಿದೆ. ಇದರಿಂದ ಹೊರಬರಲು ಬಂಡವಾಳಶಾಹಿಗೆ ಕಾಣುವ ಒಂದೇ ಒಂದು ದಾರಿ—ಹೆಚ್ಚೆಚ್ಚು ಶ್ರಮಭಾರವನ್ನು ಕಾರ್ಮಿಕರ ಮೇಲೆ ಹೊರಿಸಿ, ಬೆಲೆಗಳನ್ನು ಏರಿಸಿ, ಖೋತಾ ಬಜೆಟ್ ರಚಿಸಿ ಹೊರದೇಶದ ಬಹುರಾಷ್ಟ್ರೀಯ ಸಂಸ್ಥೆಗಳೊಡನೆ ಹೆಚ್ಚೆಚ್ಚು ಒಪ್ಪಂದಗಳನ್ನು ಮಾಡಿ, ರಫ್ತುಗಳಿಗೆ ಒತ್ತು ಕೊಟ್ಟು ಪಾರಾಗಬೇಕೆಂಬುದು. ಆದ್ದರಿಂದಲೇ ಶ್ರೀ ರಾಜೀವ್ ಗಾಂಧಿಯವರು ಕೂಡ 21 ನೇ ಶತಮಾನದ ಎಲೆಕ್ಟ್ರಾನಿಕ್ ಯುಗ ತಲುಪಬೇಕೆಂದು, ಅದರಿಂದ ಹೆಚ್ಚಿನ ರೀತಿಯಲ್ಲಿ ಕಂಪ್ಯೂಟರ್‌ಗಳನ್ನು ಬಳಕೆ ಮಾಡಬೇಕೆಂದು, ಸಾರ್ವಜನಿಕ ಕ್ಷೇತ್ರಗಳ ಉದ್ಯಮಗಳು ಪೈಪೋಟಿ ಮಾಡಿ ಲಾಭದಾಯಕವಾಗಿ ಕೆಲಸ ಮಾಡಬೇಕು. ಆದಾಗದ ಪಕ್ಷದಲ್ಲಿ ಅಂತಹ ಉದ್ಯಮವನ್ನು ಖಾಸಗಿಯವರಿಗೆ ಒಪ್ಪಿಸಬೇಕೆಂದು ಹೇಳಿ ಸಾರ್ವಜನಿಕ ಕ್ಷೇತ್ರದ ಮಹತ್ವವನ್ನೇ ಅಲ್ಲಗಳೆದು ಖಾಸಗೀ ಕ್ಷೇತ್ರಕ್ಕೆ ಉತ್ತೇಜನ ಕೊಡುವಂತಾಗಿದೆ. ಇದು ವಿಶ್ವಬ್ಯಾಂಕಿನ ಹಾಗೂ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಒತ್ತಡ ಮತ್ತು ಧೋರಣೆಗಳಿಗೆ ಅನುಗುಣವಾಗಿದೆ. ಇಲ್ಲದ ಪಕ್ಷದಲ್ಲಿ ಅವರಿಂದ ಹಣಕಾಸಿನ ನೆರವು ಸಿಗುವುದಿಲ್ಲ ಎಂಬ ಅಭಿಪ್ರಾಯ ಕೇಂದ್ರ ಸರ್ಕಾರಕ್ಕಿದೆ. ಅವರ ಒತ್ತಾಯದ ಮೇಲೆ ಮತ್ತು ವಿಶ್ವಬ್ಯಾಂಕಿನವರು ಹಾಕಿರುವ ಶರತ್ತುಗಳ ಮೇಲೆ ನಮ್ಮ ಆರ್ಥಿಕ ಯೋಜನೆ ರೂಪಿಸಲ್ಪಟ್ಟಿದೆ. ಆಮದು ಸರಳೀಕರಣ ಇದರಿಂದಲೇ ಆಗಿದೆ ಈ ವಿಚಾರದಲ್ಲಿ ಶ್ರೀ ರಾಜೀವ್ ಗಾಂಧಿಯವರ ಸರ್ಕಾರ ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರಕ್ಕಿಂತ ಒಂದು ಕೈ ಮೇಲಿದೆ. ಶ್ರೀ ರಾಜೀವ್ ಗಾಂಧಿಯವರು ದೇಶಿಯ ಹಾಗೂ ವಿದೇಶಿಯ ಬಂಡವಾಳವನ್ನು ಆಹ್ವಾನಿಸುತ್ತಿದ್ದು ಏಕಸ್ವಾಮ್ಯ ಬಂಡವಾಳದ ಬೆಳವಣಿಗೆಗೆ ಉತ್ತೇಜನ ಕೊಡುತ್ತಿದ್ದಾರೆ. ಗುತ್ತೇದಾರಿಬಂಡವಾಳಿಗರ ಮೇಲೆ ಸ್ವಲ್ಪವೇ ಹಿಡಿತವನ್ನು ಹಾಕುತ್ತಿದ್ದ MRTP ಅಂತಹ ಕಾನೂನುಗಳನ್ನು ನಿಶ್ಚೇತನಗೊಳಿಸಲಾಗಿದೆ. ಈ ಸಲದ ಬಜೆಟ್ಟಿನಲ್ಲಿ ಹಣಕಾಸಿನ ಮಂತ್ರಿಗಳು ಭಾರಿ ಶ್ರೀಮಂತರಿಗೆ ಸಡಿಲ ನೀತಿ ತೋರಿದ್ದರಿಂದ ಬಂಡವಾಳದ ಶೇಖರಣೆ ಕೆಲವೇ ಗುತ್ತೇದಾರಿ ಬಂಡವಾಳಿಗರ ಕೈ ಸೇರುವಂತೆ ಮಾಡಿದೆ. ರಾಜೀವ್ ಗಾಂಧಿಯವರ ಮಾತಿನಂತೆ "ಸಾರ್ವಜನಿಕ ಕ್ಷೇತ್ರ ಬೇಕಾದ್ದಕ್ಕಿಂತ ಹೆಚ್ಚಿನ ಕಾರ್ಯವಲಯವನ್ನು ಹೊಂದಿದೆ....ನಾವು ಖಾಸಗೀ ಬಂಡವಾಳಿಗರಿಂದ ಮಾಡಲು ಸಾಧ್ಯವಾಗದ ಉದ್ದಿಮೆಗಳನ್ನು ಮಾತ್ರ ಸಾರ್ವಜನಿಕ ಕ್ಷೇತ್ರಕ್ಕೆಬಿಟ್ಟುಕೊಡಬೇಕಾಗಿದೆ" ಇದನ್ನು ಅವರು ನ್ಯೂಯಾರ್ಕ್ ಟೈಂಸ್‌ನ ಸಂದರ್ಶನದಲ್ಲಿ ಹೇಳಿದರು. ಈಗ ಕೇಂದ್ರ ಸರಕಾರ ಸಾರ್ವಜನಿಕ ಕ್ಷೇತ್ರಗಳಲ್ಲಿ 42 811 ಕೋಟಿ ರೂ.ಗಳನ್ನು ತೊಡಗಿಸಿದೆ. ಸರ್ಕಾರ ಹಾಗೂ ಬಂಡವಾಳಶಾಹಿ ಪತ್ರಿಕೆಗಳು, ಸಾರ್ವಜನಿಕ ಉದ್ಯಮಗಳು ಲಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ, ಕಾರ್ಮಿಕರು ಕೆಲಸದ ಭದ್ರತೆ ಇರುವುದರಿಂದ ಸರಿಯಾಗಿ ದುಡಿಯುತ್ತಿಲ್ಲ. ಆದ್ದರಿಂದ ಇದನ್ನು ಲಾಭದಾಯವಾಗಿ ನಡೆಸಬೇಕಾದರೆ ಖಾಸಗಿಯವರಿಗೆ ಬಿಟ್ಟು ಕೊಡಬೇಕೆಂದು ಬೊಬ್ಬೆ ಹೊಡೆಯುತ್ತಿವೆ. ಈ ದುಃಸ್ಥಿತಿಗೆ ಕಾರಣ ಕಾರ್ಮಿಕ ವರ್ಗವಲ್ಲ, ಕೇಂದ್ರ ಸರಕಾರದ ನೀತಿ ಮತ್ತು ಅಧಿಕಾರಶಾಹೀ ಆಡಳಿತ ಕಾರಣ ಸಾರ್ವಜನಿಕ ಕೈಗಾರಿಕೆಗಳಾವುವೂ ಪೂರ್ಣ ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಉಪಯೋಗಿಸಿ ಕೊಳ್ಳುತ್ತಿಲ್ಲ. ಹೆಚ್ಚಿನ ಉದ್ದಿಮೆಗಳು ಪ್ರಮಾಣದಲ್ಲಿ ಶೇಕಡ 76 ಕ್ಕಿಂತ ಕಡಿಮೆ ಉತ್ಪಾದನಾ ಸಾಮರ್ಥ್ಯವನ್ನು ಉಪಯೋಗಿಸುತ್ತಿವೆ. ಉತ್ಪಾದನಾ ಸಾಮರ್ಥ್ಯದ ಬಳಕೆವರ್ಷ ವರ್ಷಕ್ಕೆ ಕಡಿಮೆ ಆಗುತ್ತಿದೆ. ಬಂಡವಾಳವನ್ನು ತಪ್ಪಾಗಿ ತೊಡಗಿಸುವ ನೀತಿ, ಕಚ್ಚಾ ವಸ್ತು ಹಾಗೂ ಶಕ್ತಿ ಪೂರೈಕೆಯಲ್ಲಿ ವಿಫಲತೆ, ಕೆಟ್ಟ ರೀತಿಯಲ್ಲಿ ಯಂತ್ರೋಪಕರಣಗಳ ಉಪಯೋಗ, ಹಾಗೂ ನಮ್ಮ ದೇಶದಲ್ಲಿ ಇಳಿಯುತ್ತಿರುವ ಬೇಡಿಕೆ ಇತ್ಯಾದಿಗಳೇ ಸಾರ್ವಜನಿಕ ಕ್ಷೇತ್ರ ಗುರಿತಲುಪುವುದರಲ್ಲಿ ವೈಫಲ್ಯತೆಗೆ ಕಾರಣಗಳು ಹೀಗಿದ್ದರೂ ಈ ಉದ್ಯಮಗಳು 84-85 ರಲ್ಲಿ ದೇಶದ ಖಜಾನೆಗೆ 7597 ಕೋಟಿ ರೂ. ಗಳನ್ನು ತುಂಬಿವೆ. ಉತ್ಪಾದನ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಿದ್ದಲ್ಲಿ ಇದರ ಚಿತ್ರ ಇನ್ನೂ ಚೆನ್ನಾಗಿರುತ್ತಿತ್ತು.

ಖಾಸಗೀ ವಲಯದ ಗುತ್ತೇದಾರಿ ಬಂಡವಾಳಿಗಳಿಗೂ ಹಾಗೂ ಬಹುದೇಶಿಯ ಕಂಪನಿಗಳಿಗೆ ಲಾಭ ತರುವ ಉದ್ದೇಶದಿಂದ ಕೈಗೊಂಡ ಅನೇಕ ಕೇಂದ್ರ ಸರಕಾರದ ಕ್ರಮಗಳು ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳಿಗೆ ಕಂಟಕಪ್ರಾಯವಾಗಿ ಸಮುದ್ರತೀರದಲ್ಲಿ ತೈಲ ಶೋಧನೆ, ಶಕ್ತಿ ಉತ್ಪಾದನೆ, ಬಾಗಶಃ ಅಂಚೆ ಕಾರ್ಯ, ರಕ್ಷಣ ಉತ್ಪಾದನೆಯಲ್ಲಿ ಕಲವು ವಸ್ತುಗಳು, ಇನ್ನೂ ಅನೇಕ ಉದ್ಯಮಗಳು ಸಾರ್ವಜನಿಕ ಕ್ಷೇತ್ರಗಳಿಂದ ಕಳಚಿಕೊಂಡು ಖಾಸಗೀ ಕ್ಷೇತ್ರಕ್ಕೆ ಒಪ್ಪಿಸಲ್ಪಡತಕ್ಕಂತವುಗಳು ಆಹಾರ ನಿಗಮದ ಕೆಲವು ಕೆಲಸಗಳನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟ ಕಾರಣ ಸುಮಾರು 6500 ಕೆಲಸಗಾರರು ಕೆಲಸ ಕಳೆದುಕೊಳ್ಳಬೇಕಾಗಿ ಬಂದಿದೆ. ನ್ಯಾಶನಲ್ ಥರ್ಮಲ್ ಪವರ್ ಕಾರ್ಪೋರೇಶನ್‌ನಂತಹ ಸಾರ್ವಜನಿಕ ಉದ್ದಿಮೆಗಳಲ್ಲಿ ಖಾಸಗಿ ಶೇರುಗಳನ್ನು ಮಾರಾಟ ಮಾಡಿ, ಖಾಸಗಿ ಬಂಡವಾಳಗಾರರಿಗೆ, ಸಾರ್ವಜನಿಕ ಕ್ಷೇತ್ರದೊಳಗೆ ನುಗ್ಗುವಂತೆ ದಾರಿ ಮಾಡಿ ಕೊಡಲಾಗಿದೆ. ಏಳನೆ ಯೋಜನೆಯಲ್ಲಿ ಸಾರ್ವಜನಿಕ ಕ್ಷೇತ್ರದ ಉಕ್ಕಿನ ಕಾರ್ಖಾನೆಯ ಅಭಿವೃದ್ಧಿಗೆ ಹಣವನ್ನು ನಿರಾಕರಿಸುವುದರೊಂದಿಗೆ, ಟಾಟಾರವರ ಟಿಸ್ಕೋ ಕಂಪನಿಯವರು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವಂತೆ ಅನುವು ಮಾಡಿಕೊಡಲಾಗಿದೆ. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ತರಿಯಲು ಬಹುರಾಷ್ಟ್ರೀಯ ಕಂಪನಿಗಳು ಒಳಬರುತ್ತಿವೆ. ಒಳ ಬರುವಂತೆ ಎಡೆ ಮಾಡಿ ಕೊಡಲಾಗುತ್ತಿದೆ. ನಮ್ಮದೇಶದ ಸಾರ್ವಜನಿಕ ಕ್ಷೇತ್ರದ BHEL ಗೆ ಬರಬೇಕಿದ್ದ ONGC ಯವರ ಕೊಳವೆ ಹಾಸುವ ಕಾರ್ಯದ ಕಂಟ್ರಾಕ್ಟನ್ನು ಇಟಲಿಯ ಕಂಪನಿಯೊಂದಕ್ಕೆ ಬಿಟ್ಟುಕೊಟ್ಟದ್ದು, ಮಾರುತಿ ಉದ್ಯೋಗದ ಕಂಟ್ರಾಕ್ಟನ್ನು H.M.T ಗೆ ಕೊಡದೇ, ಜಪಾನಿನ ಕಂಪನಿಯೊಂದಕ್ಕೆ ಕೊಟ್ಟದ್ದು, ಕಲ್ಕತ್ತಾದ ಮೆಟ್ರೋಗೆ ಬೇಕಾದ 600 ಕೋಟಿ ರೂ. ಗಳ ಇಲೆಕ್ಟ್ರಾನಿಕ್ಸ್‌ನ ಕಂಟ್ರಾಕ್ಟನ್ನು ನಮ್ಮ ದೇಶದ

ECIL ಕೊಡಲು ನಿರಾಕರಿಸಿದ್ದು, ಕೆಲವೇ ಉದಾಹರಣೆಗಳು. ಈ ರೀತಿ ಸಾರ್ವಜನಿಕ ಕ್ಷೇತ್ರದ ಮರ್ದನವೇ ನಡೆಯುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗಕ್ಕೆ ಹಿರಿದಾದ ಜವಾಬ್ದಾರಿ ಇದೆ. ಖಾಸಗೀ ಬಂಡವಾಳಿಗರು ಘನ ಉದ್ದಿಮೆಯಲ್ಲಿ ಹಣತೊಡಗಿಸಲು ವಿಫಲರಾದಾಗ, ಬಂಡವಾಳಶಾಹೀ ಉಳಿವಿಗಾಗಿ ಸರ್ಕಾರವೇ ಸಾರ್ವಜನಿಕಕ್ಷೇತ್ರಗಳಲ್ಲಿ ಈ ಉದ್ದಿಮೆಗಳನ್ನು ಪ್ರಾರಂಭಿಸ ಬೇಕಾಗುತ್ತದೆ. ಈ ಉದ್ದಿಮೆಗಳಲ್ಲಿ ಎಲ್ಲಾರೀತಿಯ ಬಂಡವಾಳಶಾಹೀ ಗುಣಗಳೇ ಇರುತ್ತವೆ. ಮತ್ತು ಇವು ಬಂಡವಾಳ ಶಾಹೀ ಪದ್ಧತಿಯ ಅಂಗವೇ ಆಗಿರುತ್ತವೆ. ಸಾರ್ವಜನಿಕ ಕ್ಷೇತ್ರದ ಪಾತ್ರವು ಬಂಡವಾಳಶಾಹೀ ದೇಶಗಳಲ್ಲಿ ಸಮಾಜವಾದೀ ದೇಶಗಳಲ್ಲಿನಕ್ಕಿಂತ ವಿರುದ್ಧವಾಗಿರುತ್ತದೆ. ಬಂಡವಾಳಶಾಹೀ ಪದ್ಧತಿಯಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರಗಳು ಒಂದೇ ನಾಣ್ಯದ ಎರಡು ಮುಖಗಳು. ಹೀಗಿದ್ದರೂ. ಸಾರ್ವಜನಿಕ ಕ್ಷೇತ್ರಗಳು ನಮ್ಮಂತ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಅತೀ ಮುಖ್ಯವಾಗಿವೆ. ನಮ್ಮ ದೇಶದಲ್ಲೇ, ಸಾರ್ವಜನಿಕ ಕ್ಷೇತ್ರ ಬೆಳೆದಂತೆ ಹೊರದೇಶದ ಬಂಡವಾಳಿಗರ ಒತ್ತಡವನ್ನು ತಡೆದು ನಿಲ್ಲಿಸಲು ಸಾಧ್ಯವಾಗುತ್ತದೆ. ಸಮಾಜವಾದೀ ದೇಶಗಳ ಸಹಾಯದಿಂದ ರಚಿಸಲ್ಪಟ್ಟಂತ ಮೂಲಭೂತ ಕೈಗಾರಿಕೆಗಳು ನಮ್ಮಲ್ಲಿ ಇರುವುದರಿಂದ, ನಮ್ಮ ಆರ್ಥಿಕತೆಯು ಪರಾವಲಂಬಿ ಆಗುವುದು ತಪ್ಪಿದೆ. ಸಾರ್ವಜನಿಕ ಕ್ಷೇತ್ರದ ಅಭಿವೃದ್ಧಿ ಇಲ್ಲದೇ ಹೋಗಿದ್ದಲ್ಲಿ, ಅಲಿಪ್ತ ಚಳವಳಿಯ ಮುಂಚೂಣಿಯಲ್ಲಿದ್ದು, ಒತ್ತಡಗಳನ್ನು ತಡೆದು ನಿಲ್ಲಿಸಲು ಸಾಧ್ಯವಾಗುತ್ತಿರಲಿಲ್ಲ. ತೃತಿಯ ಜಗತ್ತಿನಲ್ಲಿ ನಮ್ಮ ದೇಶಕ್ಕೆ ಒಂದು ಸ್ಥಾನ ಇರುವುದಕ್ಕೆ, ಸಾರ್ವಜನಿಕ ಕ್ಷೇತ್ರದ ಅಭಿವೃದ್ಧಿಯೇ ಭಾಗಶಃ ಕಾರಣವಾಗಿದೆ. ನಮ್ಮ ಕೇಂದ್ರ ಸರಕಾರ ಡೋಲಾಯಮಾನ ನೀತಿಯನ್ನು ಹೊಂದಿದ್ದರೂ, ಸಾರ್ವಜನಿಕ ಕ್ಷೇತ್ರಗಳು, ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಆರ್ಥಿಕತೆಯ ಮೇಲೆ ನಡೆಸುವ ಧಾಳಿಯನ್ನು ತಡೆಯುತ್ತಿವೆ.

ಸಾರ್ವಜನಿಕ ಉದ್ದಿಮೆಗಳಲ್ಲಿ ಸರಿಯಾದ ನೀತಿಯನ್ನು ಹೊಂದುವಂತೆ ಸರಕಾರದ ಮೇಲೆ ರಾಜಕೀಯ ಒತ್ತಡವನ್ನು ಪ್ರಜಾತಾಂತ್ರಿಕ ರೀತಿಯಲ್ಲಿ ತರಲು ಸಾಧ್ಯವಿದೆ. ಖಾಸಗೀ ಕ್ಷೇತ್ರದಲ್ಲಿ ಇದು ಸಾಧ್ಯವಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಆರೋಗ್ಯ ದಾಯಕವಾಗಿ ಪ್ರಜಾಪ್ರಭುತ್ವ ಹೋರಾಟಗಳೂ, ಕಾರ್ಮಿಕ ಸಂಘದ ಚಳವಳಿಯು ನಡೆಯುವ ಸಾಧ್ಯವಿದೆ. ಇದರೊಂದಿಗೆ, ಸಾರ್ವಜನಿಕ ಕ್ಷೇತ್ರದಲ್ಲಿನ ಕಾರ್ಮಿಕ ವರ್ಗವು ಅದರ ಆಡಳಿತ ನಡೆಸುವ ಅಧಿಕಾರ ಶಾಹಿಯ ವಿರುದ್ಧ ನೇರವಾಗಿ ನಿಲ್ಲುವುದರಿಂದ, ಅಧಿಕಾರ ಶಾಹಿಯ ಬಂಡವಾಳಿಗ-ಭೂ ಮಾಲಕ ವರ್ಗ ಗುಣ ತಿಳಿದು ಭ್ರಮೆಯ ಪೊರೆಯನ್ನು ಕಳಚಿ ಕೊಳ್ಳುತ್ತದೆ. ನಮ್ಮ ಸಾರ್ವಜನಿಕ ಕ್ಷೇತ್ರದಲ್ಲಿ ಖಾಗೀ ಒಡೆತನ ಇಲ್ಲ, ಆದ್ದರಿಂದ ಕಾರ್ಮಿಕ ಶೋಷಣೆ ಇಲ್ಲಿ ನಡೆಯುತ್ತಿಲ್ಲ ಎಂಬುದು ತಪ್ಪು ತಿಳಿವಳಿಕೆ ಇದಕ್ಕೆ ತದ್ವಿರುದ್ಧವಾಗಿ, ಸಾರ್ವಜನಿಕ ಕ್ಷೇತ್ರದಲ್ಲಿ ಕಾರ್ಮಿಕ ಹೆಚ್ಚಿಗೆ ಕೆಲಸ ಮಾಡಿದಂತೆ ಹೆಚ್ಚಿನ ಶೋಷಣೆಗೆ ಒಳಗಾಗುತ್ತಾನೆ ಎಂಬ ಅಭಿಪ್ರಾಯವೂ ಇದೆ. ಇದೂ ತಪ್ಪು. ಉತ್ಪಾದನೆಯ ಬಗ್ಗೆ ಇರುವ ನಕಾರಾತ್ಮಕ ಅಭಿಪ್ರಾಯವು ಉದ್ದಿಮೆಯನ್ನು ಹಾಳುಗೆಡವಬಲ್ಲದು.

ಮೇಲೆ ಕಾಣಿಸಿದ ಕಾರಣಗಳಿಗಾಗಿ, ದೇಶವನ್ನೂ, ಸಾರ್ವಜನಿಕ ಕ್ಷೇತ್ರವನ್ನೂ ಉಳಿಸಲು, ಜನ ಜಾಗೃತಿ ಉಂಟುಮಾಡಲು ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಮೇ 21 ರಂದು ದೇಶಾದ್ಯಂತ 'ಸಾರ್ವಜನಿಕ ಕ್ಷೇತ್ರವನ್ನುಳಿಸಿ' ಎಂಬ ದಿನಾಚರಣೆಯನ್ನು ಆಚರಿಸುತ್ತಿದ್ದಾರೆ. ರಕ್ಷಣಾ ಕೈಗಾರಿಕೆಗಳ ನೌಕರರೂ ಕೂಡ ಕೇಂದ್ರ ಸರಕಾರದ ತಪ್ಪು ಧೋರಣೆಗಳನ್ನು ಪ್ರತಿಭಟಿಸಿ ಒಂದು ದಿನದ ಮುಷ್ಕರ ಆಚರಿಸುತ್ತಿದ್ದಾರೆ.

ನಮ್ಮ ದೇಶದ ಹೊಸ್ತಿಲಿಗೆ ಯುದ್ಧ ಭೀತಿ ಬಂದಿರುವುದರಿಂದ, ಕರಾಚಿ ಬಂದರಿನಲ್ಲಿ ಅಮೇರಿಕಾದ ಸಪ್ತಮ ನೌಕೆ ತಂಗಿರುವುದರಿಂದ, ಲಿಬ್ಯಾದಲ್ಲಿ ಎಲ್ಲಾ ಅಂತರ್‌ರಾಷ್ಟ್ರೀಯ ನೀತಿಯನ್ನು ಗಾಳಿಗೆ ತೂರಿ, ಅಲಿಪ್ತರಾಷ್ಟ್ರಗಳಲ್ಲಿ ಭಯ ಹುಟ್ಟಿಸಿ, ಜಗತ್ತಿನ ಅಧಿಪತ್ಯ ಹೊಂದಬೇಕೆಂದು ರೀಗನ್ ಉದ್ದೇಶ ಪಟ್ಟಿರುವಾಗ, ಅಲಿಪ್ತ ನೀತಿಯನ್ನು ಕಾಪಾಡುವುದು, ಬಲಪಡಿಸುವುದು, ಕಾರ್ಮಿಕರ ಹಾಗೂ ದೇಶಪ್ರೇಮಿಗಳ ಜವಾಬ್ದಾರಿ ಆಗಿದೆ. ಇದಾಗಬೇಕಾದರೆ ಸಾರ್ವಜನಿಕ ಕ್ಷೇತ್ರವನ್ನು ಉಳಿಸುವ, ಬೆಳೆಸುವ ಕರ್ತವ್ಯವನ್ನು ನಾವು ಮಾಡಲೇ ಬೇಕಾಗುತ್ತಿದೆ. ○

ಮಾಂಡೆಲಾ

ಕಪ್ಪು ಜನರ
ಕೆಂಪು ಶೌರ್ಯ !
ಮಾಂಡೆಲಾ
ನೆಲ್ಸನ್ ಮಾಂಡೆಲಾ

ಸರಳುಗಳಿಲ್ಲದೆ
ಗುರುತಿಸಲ್ಪಡದ
ಸರಳುಗಳ ವಿರೋಧಿ

ದಶಕಗಳಿಂದ
ದಾಟಲಾಗದ
ಭದ್ರ ಬಂದಿಯಾಗುಳಿದು
ಹಾರು ಹಕ್ಕಿಯ
ಕನಸ ಹೆಣೆವವನೆ

ಮಾಂಡೆಲಾ;
ಕುಲವಾದಿಗಳ
ಕನಸ ಕೋಟೆಯ
ಸ್ಫೋಟಕ !

ಓ, ಮಾಂಡೆಲಾ,
ಆಫ್ರಿಕದ
ಅಗಣಿತ ಜನತೆಯ
ಸ್ವಾತಂತ್ರ್ಯದ ಸಂಕೇತ ನೀನು
ಒಳಗಿದ್ದೂ
ಹೊರಗಿನದೆಲ್ಲಕ್ಕೆ
ಪ್ರಚೋದಕ ನೀನು.

ಹೆಚ್. ಶೇಷಗಿರಿರಾವ್

ರೀಗನನ ಬೆನ್ನ ಹಿಂದೆ

ಕಳೆದ ಆರು ವರ್ಷಗಳಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷನಾಗಿರುವ ರೀಗನ್ ಎಂಬ ಮನುಷ್ಯ, ಅಷ್ಟೇನೂ ಜನಪ್ರಿಯನಲ್ಲದ ನಟ ಇದ್ದಕ್ಕಿದ್ದಂತೆ ಅಧ್ಯಕ್ಷನಾದಿಗೇರಿ ಜಗತ್ತಿನ ಎಲ್ಲಾ ದೇಶಗಳ ಮೇಲೆ ಪೈಲ್ವಾನಗಿರಿಯನ್ನು ಪ್ರದರ್ಶಿಸುತ್ತಿದ್ದಾನೆ. "ತಾನುಂಟೋ ಮೂರು ಲೋಕವುಂಟೋ" ಎಂಬ ಈ ಮನುಷ್ಯನ ಬೆನ್ನ ಹಿಂದೆ ಲೋಕದೆಲ್ಲಾ ಜನರ ಜೀವರನ್ನು ಬಸಿದರೂ ತೃಪ್ತಿಯಾಗದೆ, ನರಮಾಂಸಕ್ಕೆ ಬಾಯ್ಬಿಡುತ್ತಿರುವ ರಣಹದ್ದುಗಳ ಒಂದು ಹಿಂಡೇ ಇದೆ. ಅವುಗಳ ಇಚ್ಛೆಯೇ ರೀಗನನ ಇಚ್ಛೆಯಾಗಿದೆ. ಈ ಹಿಂಡನ್ನು ಮಿಲಿಟರಿ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್ (ಮಿಲಿಟರಿ—ಕೈಗಾರಿಕಾ ಕೂಟ) ಎಂದು ಕರೆಯುತ್ತಾರೆ.

ಅಮೆರಿಕ ಸಂಸ್ಥಾನಗಳಲ್ಲಿ ಇಡೀ ವಿಶ್ವದ ಗುತ್ತೇದಾರರು ಇದ್ದಾರೆಂಬುದು ಈಗಾಗಲೇ ಸ್ಪಷ್ಟವಾಗಿದೆ. ಈ ಗುತ್ತೇದಾರರಲ್ಲಿಯೂ ಹಲವು ಪಂಗಡಗಳಿವೆ. ಈ ಪಂಗಡಗಳಲ್ಲಿ ಕ್ಯಾಲಿಫೋರ್ನಿಯಾ ತಂಡವೆಂದು, ಪಶ್ಚಿಮ ತೀರದ ತಂಡವೆಂದು ಹೆಸರಾಂತ - ಕೈಗಾರಿಕೆ,

ರೀಗನ್ ಸಲಹೆಗಾರವೃಂದ

(ಮಿಲಿಟರಿ ಕೈಗಾರಿಕಾ ಕೂಟದಿಂದ-ಸರ್ಕಾರಕ್ಕೆ)

ಕ್ಲಾಸೆನ್-ಬ್ಯಾಂಕ್ ಆಫ್ ಅಮೆರಿಕದ ಅಧ್ಯಕ್ಷನಾಗಿದ್ದು ರೀಗನ್‌ರಿಂದ "ವಿಶ್ವಬ್ಯಾಂಕ್" ಅಧ್ಯಕ್ಷನಾಗಿ ನೇಮಿತನಾದ.

ಜಾರ್ಜ್ ಶೂಲ್ಟ್ಸ್ ವಿದೇಶಾಂಗ ಕಾರ್ಯದರ್ಶಿ-ಬೆಕ್ಟೆಲ್ ಕಾರ್ಪೊರೇಷನ್‌ನ ಮಾಜೀ ಅಧ್ಯಕ್ಷ.

ಕಾಸ್ಪರ್ ವೈನ್ ಬರ್ಗರ್, ರಕ್ಷಣಾ ಕಾರ್ಯದರ್ಶಿ-ಇದೇ ಕಂಪನಿಯ ಮಾಜೀ ಡೈರೆಕ್ಟರ್ ಹಾಗೂ ಸಲಹೆಗಾರ.


ಕೆನೆಥ್ ಡೇವಿಸ್, ಎನರ್ಜಿ ಉಪಕಾರ್ಯದರ್ಶಿ—ಇದೇ ಕಂಪನಿಯ ಪರಮಾಣು ವಿಭಾಗದ ಮಾಜೀ ಉಪಾಧ್ಯಕ್ಷ.

ಜ|| ಅಲೆಕ್ಸಾಂಡರ್ ಹೇಗ್, ಹಿಂದಿನ ವಿದೇಶಾಂಗ ಕಾರ್ಯದರ್ಶಿ-ಪೆಂಟಗನ್‌ನ ಒಬ್ಬ ಪ್ರಮುಖ ಕಂಟ್ರಾಕ್ಟದಾರ ಕಂಪನಿಯ ಮಾಜೀ ಅಧ್ಯಕ್ಷ.

ಪಾಲ್ ಥಾಯೆರ್, ಉಪ ರಕ್ಷಣಾ ಕಾರ್ಯದರ್ಶಿ-ಶಸ್ತ್ರಾಸ್ತ್ರ ಕಂಪನಿ L T V ಯ ಮಾಜೀ ಅಧ್ಯಕ್ಷ.

ಜಾನ್ ಲೆಹ್‌ಮನ್, ನಾವಿಕ ಪಡೆ ಕಾರ್ಯದರ್ಶಿ—ಪ್ರಮುಖ ಶಸ್ತ್ರಾಸ್ತ್ರ ಕಂಪನಿಗಳಿಗೆ ಸಲಹೆ ನೀಡುವ ಸಂಸ್ಥೆಯಾದ ಅಂಬಿಗ್ಟನ್ ಕಾರ್ಪೊರೇಶನ್‌ನ ಮಾಜೀ ಮಾಲಿಕ.

ರಿಚರ್ಡ್ ಪೆರ್ಲೆ, ರಕ್ಷಣಾ ಸಹಾಯಕ ಕಾರ್ಯದರ್ಶಿ-ಮೇಲಿನದ್ದೇ ಸಂಸ್ಥೆಯ ಮಾಜೀ ಅಧಿಕಾರಿ.




ಪಶ್ಚಿಮ ಯುರೋಪ್‌ನಿಂದ ಅಮೇರಿಕನ್ ಗುತ್ತೇದಾರಿಗಳ ಸೂರೆ

ರೀಗನ್ ಬೆಂಬಲಿಗರ ಲಾಭ

(1984 ರಲ್ಲಿ ಶತಕೋಟಿ ಡಾಲರ್‌ಗಳಲ್ಲಿ)

ಮೆಕ್ಡೊನೆಲ್ ಡಗ್ಲಾಸ್	7.1
ರಾಕ್‌ವೆಲ್ ಇಂಟರ್‌ನ್ಯಾಶನಲ್	6.2
ಜನರಲ್ ಡೈನಾಮಿಕ್ಸ್	6.0
ಲಾಕ್‌ಹೀಡ್	5.0
ಬೋಯಿಂಗ್	4.6
ಜನರಲ್ ಇಲೆಕ್ಟ್ರಿಕ್	4.5

ಇವುಗಳ ಜೊತೆಗೆ ಬೆಕ್ಟೆಲ್, ಎಲ್. ಟಿ. ವಿ., ಅಂಬಿಗ್ಟನ್ ಕಾರ್ಪೋರೇಶನ್.



ಅಮೇರಿಕನ್ ಸೈನಿಕ ವ್ಯವಸ್ಥೆ ಪೆಂಟಗನ್‌ಗೆ ಹಣ

ಬ್ಯಾಂಕ್, ಪತ್ರಿಕಾ ಮಾಲೀಕರ, ತಮ್ಮ ಮೆದುಳನ್ನು ಇವರಿಗೆ ತುತ್ತಾಗಿಸಿರುವ ವಿಶ್ವವಿದ್ಯಾನಿಲಯ ಪ್ರಾಧ್ಯಾಪಕರ ತಂಡವೊಂದಿದೆ

ಈ ತಂಡದ ನಾಯಕಮಣಿ ಇಡೀ ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದ ಬ್ಯಾಂಕ್ ಇಫ್ ಅಮೆರಿಕ ! ಲೆನಿನ್‌ರವರು 1918ರಲ್ಲಿ ಹೇಳಿದಂತೆ ಈ ಬ್ಯಾಂಕ್‌ನ ತುಂಬಾ ಅಮೇರಿಕದಲ್ಲಿರುವ ಇತರ ಮೂರು ವಿಶ್ವದಲ್ಲಿಯೇ ದೊಡ್ಡ ಬ್ಯಾಂಕ್‌ಗಳ ಹಣದಂತೆಯೇ ಪ್ರತಿ ಡಾಲರಿಗೂ ರಕ್ತ-ಮಾನವ ರಕ್ತ ಅಂಟಿದೆ. ಈ ಬ್ಯಾಂಕ್‌ನಿಂದಲೇ ರೀಗನ್ ನಟಿಸಿದ ಚಿತ್ರಗಳಿಗೆಲ್ಲಾ ಹಣ ದೊರೆತದ್ದು. ಈ ಬ್ಯಾಂಕ್‌ನಿಂದ ಹಣ ಪಡೆದು ದೊಡ್ಡದಾಗಿ ಬೆಳೆದ, ಎರಡನೇ ಮಹಾಯುದ್ಧಕ್ಕೆ ಯುದ್ಧ ವಿಮಾನ, ಟ್ಯಾಂಕ್, ಮತ್ತಿತರ ಅಸ್ತ್ರಗಳನ್ನು ತಯಾರುಮಾಡುವ ಒಂದು ದೊಡ್ಡ ತಂಡವೇ ಇದೆ. ಇವುಗಳಲ್ಲಿ ಒಂದೊಂದರ ಹೆಸರೂ ಚರಿತ್ರೆಯಲ್ಲಿ ಅನೇಕ ಬಾರಿ ಕಪ್ಪುಮಸಿಯಲ್ಲಿ ಕೆತ್ತಲಾಗಿದೆ.

ಒಂದೇ ಒಂದು ಉದಾಹರಣೆ ನೋಡೋಣ. ಲಾಕ್‌ಹೀಡ್ ಎಂಬ ತಲೆ ಹಿಡುಕ ಸಂಸ್ಥೆಯೊಂದು ಜಪಾನಿನ ಪ್ರಧಾನಿಗೆ ಅಪಾರ ಹಣ ನೀಡಿ, ಅದು ಬಹಿರಂಗಗೊಂಡ ಮೇಲೆ ನಡೆದ ಗಲಾಟೆಯಲ್ಲಿ ಆ ವ್ಯಕ್ತಿ ರಾಜೀನಾಮೆ ಕೊಡಬೇಕಾಯಿತು. ವಿಶ್ವಾದ್ಯಂತ ಇಂತಹ ಹಲವು ಹತ್ತು ಪ್ರಕರಣಗಳ ಖಳರು, ದ ಆಫ್ರಿಕಾದ ವರ್ಣಬೇಧ ನೀತಿ, ಯಿಂದ ನೀಗ್ರೋಗಳನ್ನು ಅದುಮಿಡುವುದರಿಂದ ಲಾಭ ಪಡೆಯುವ ಹದ್ದುಗಳು ಈ ತಂಡದ ತುಂಬ ತುಂಬಿದ್ದಾರೆ. ಈ ಬಹು ರಾಷ್ಟ್ರೀಯ ಕಂಪನಿಗಳಿಗೆ ಅವರಂತೆಯೇ ಮಾನವ ರಕ್ತವನ್ನೇ ಅಹಾರವಾಗಿ ಬಯಸುವ ಬ್ರಿಟನ್ನಿನ ಡೇಗೆಗಳು, ಜರ್ಮನಿಯ ಗಿಡುಗಗಳು, ಜಪಾನಿನ, ಫ್ರಾನ್ಸ್‌ನ ಹಾಲೆಂಡ್‌ನ ರಣಹದ್ದುಗಳ ಒಂದು ವಿಶ್ವ ವ್ಯಾಪಿ ಹಗಲುಗಳ್ಳರ ಕೂಟವೇ ಇದೆ.

ಅಮೇರಿಕದ ಈ ಹದ್ದುಗಳ ಕೂಟ ಇಲ್ಲಿಯವರೆಗೂ ಅತಿ ಪ್ರತಿಗಾಮಿಗಳೆಂದು ಪ್ರಸಿದ್ಧರಾದ ಐಸೆನ್‌ಹೋವರ್. ಆಗಿನ ಉಪಾಧ್ಯಕ್ಷ ಮುಂದಿನ ಅಧ್ಯಕ್ಷ ನಿಕ್ಸನ್, ನಂತರ ಬ್ಯಾರಿಗೋಲ್ಡ್ ವಾಟರ್, ಈಗ ರೀಗನ್‌ನನ್ನು ಬೆಂಬಲಿಸಿ ಮುಂದಕ್ಕೆ ತಂದು ತನ್ನ ತಾಳಕ್ಕೆ ತಕ್ಕಂತೆ ಕುಣಿಸುತ್ತಿದೆ.

ಕುರುಡು ಕಾಂಚಾಣದ ಈ ಕುಣಿದಾಟ ಹೇಗೆ ನಡೆದಿದೆ ಎಂಬುದು ನಿಮಗೆ ಸ್ಪಷ್ಟವಾಗುತ್ತದೆ. (ಪಕ್ಕದಲ್ಲಿರುವ ಬಾಕ್ಸ್‌ಗಳನ್ನು ನೋಡಿ)

ಸರ್ಕಾರದಿಂದ ಮಿಲಿಟರಿ ಕೈಗಾರಿಕಾ ಕೂಟಕ್ಕೆ

ಕಳೆದ ಮೂರು ವರ್ಷಗಳಲ್ಲಿ ಅಮೆರಿಕನ್ ಸೈನಿಕ ವ್ಯವಸ್ಥೆ ಪೆಂಟಗನ್‌ನ 2240 ಉಚ್ಚಸ್ತರದ ಮಿಲಿಟರಿ ಮತ್ತು ಶಿವಿಲ್ ಅಧಿಕಾರಿಗಳು ಶಸ್ತ್ರಾಸ್ತ್ರ ತಯಾರಿಕಾ ಕಂಪನಿಗಳಿಗೆ ವರ್ಗಾವಣೆ ಹೊಂದಿದ್ದಾರೆ. ಈ ಜನರನ್ನು ದೊಡ್ಡ ಸಂಬಳ ನೀಡಿ ಈ ಖಾಸಗಿ ಕಂಪನಿಗಳು, ಉನ್ನತ ಹುದ್ದೆಗೆ ಏರಿಸಿದ್ದು ಇವರು ಸರ್ಕಾರಿ ಅಧಿಕಾರಿಗಳಾಗಿದ್ದಾಗ ಮಿಲಿಟರಿ ಕಂಟ್ರಾಕ್ಟ್‌ಗಳನ್ನು ದಯಪಾಲಿಸಿದ್ದಕ್ಕಾಗಿಯೇ ಅಲ್ಲವೆ.

ಮಿಲಿಟರಿಶಾಹಿಗಳ ಲಾಭ, ಜನತೆಯ ನಷ್ಟ

ಅಫ್ರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಒಕ್ಕೂಟದ ಆಯುವ್ಯಯ ಖೋತಾ ಮತ್ತು ಮಿಲಿಟರಿ ಖರ್ಚು ಹೋಲಿಕೆ.

ಆರ್ಥಿಕ ವರ್ಷ	ಮಿಲಿಟರಿ ಖರ್ಚು	ಫೆಡರಲ್ ಬಜೆಟ್ ಖೋತಾ	ಫೆಡರಲ್ ಸಾಲ
	(ಶತಕೋಟಿಡಾಲರುಗಳಲ್ಲಿ)		
1980	134.0	73 8	914.3
1981	157.5	78.9	1003.9
1982	185.3	127.9	114.0
1983	209.1	227.8	1381.9
1984	227.4	185.3	1576.7
1985	253.8	213.0	1841.1
1986	285.7	180.0	2074.2

(1986 ರದ್ದು ಅಂದಾಜು ಸಂಖ್ಯೆಗಳು)

ಅಮೇರಿಕನ್ ಪ್ರಜಾಪ್ರಭುತ್ವದ ಕರಾಳಮುಖ

ಮೇ ದಿನ-ಎರಡು ದೃಷ್ಟಿಕೋನಗಳು

ನಾವು ಈ ವರ್ಷ ಮೇ ದಿನದ ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ವಾಸ್ತವವಾಗಿ ಮೇ ದಿನದ ಆಚರಣೆ ಜಗತ್ತಿನಾದ್ಯಂತ ಆರಂಭವಾದದ್ದು 1890ರ ಮೇ ದಿನದಿಂದ. 1889 ರಲ್ಲಿ ಜರುಗಿದ ದ್ವಿತೀಯ ಅಂತರರಾಷ್ಟ್ರೀಯದ ಪ್ಯಾರಿಸ್ ಮಹಾಧಿವೇಶನದ ಕರೆಯ ಮೇರೆಗೆ ಮೇ ದಿನದ ಆಚರಣೆ ಆರಂಭವಾಯಿತು. ಈ ಕರೆ ನೀಡುವಲ್ಲಿ ಅಂತರರಾಷ್ಟ್ರೀಯದ ಉದ್ದೇಶವೇನೆಂಬುದನ್ನು ಫ್ರೆಡರಿಕ್ ಎಂಗೆಲ್ಸ್‌ರ ಈ ಕೆಳಗಿನ ಮಾತುಗಳಿಂದ ಅರಿಯಬಹುದು.

...."ಇಂದು ಈ ಮಾತುಗಳನ್ನು ಬರೆಯುತ್ತಿರುವಾಗ ಮೊತ್ತ ಮೊದಲ ಬಾರಿಗೆ ಒಂದು ಸೇನೆಯಾಗಿ, ಒಂದು ಬಾವುಟದ ಕೆಳಗೆ, ಒಂದು ಉದ್ದೇಶಕ್ಕಾಗಿ—ಅಂತರ್‍ರಾಷ್ಟ್ರೀಯದ 1866ರ ಜಿನೇವಾ ಅಧಿವೇಶನ ಘೋಷಿಸಿದಂತೆ ಹಾಗೂ 1889 ರಲ್ಲಿ ಪ್ಯಾರಿಸಿನಲ್ಲಿ ಕಾರ್ಮಿಕರ ಅಧಿವೇಶನ ಪುನರುಚ್ಚರಿಸಿದಂತೆ ಎಂಟು ಗಂಟೆಗಳ ದುಡಿಮೆಯ ದಿನವನ್ನಾಗಿ ಶಾಸನ ರಚಿಸಿ ಪ್ರತಿಷ್ಠಾಪಿಸಬೇಕೆಂಬ ಉದ್ದೇಶಕ್ಕಾಗಿ—ಒಂದುಗೂಡಿದ ಯೂರೋಪು ಮತ್ತು ಕಾರ್ಮಿಕವರ್ಗ ತನ್ನ ಹೋರಾಟಶೀಲ ಪಡೆಗಳ ಪರಾಮರ್ಶೆ ನಡೆಸುತ್ತಿದೆ. ಈ ದೃಶ್ಯ ಎಲ್ಲಾ ದೇಶಗಳ ದುಡಿಯುವ ಜನ ನಿಜವಾಗಿಯೂ ಒಗ್ಗಟ್ಟಾಗಿದ್ದಾರೆ ಎಂಬ ವಾಸ್ತವತೆಯತ್ತ ಎಲ್ಲಾ ದೇಶಗಳ ಬಂಡವಾಳಶಾಹಿಗಳ ಹಾಗೂ ಭೂಮಾಲಕರ ಕಣ್ಣು ತೆರೆಸಲಿದೆ."

ಮೇ ದಿನದ ಮುಷ್ಕರವನ್ನೂ ಹಂತ ಹಂತವಾಗಿ ಮೇಲ್ಮಟ್ಟಕ್ಕೆ ಒಯ್ಯುವ ಕ್ರಮವನ್ನು 1900ರ ನಂತರ ಲೆನಿನ್ ಬಳಸಿಕೊಂಡರು. ಕಾರ್ಮಿಕರ ವರ್ಗದ ತಕ್ಷಣದ ಬೇಡಿಕೆಗಳನ್ನು ರಶ್ಯಾದಲ್ಲಿ ಆಗ ನಡೆಯುತ್ತಿದ್ದ ರಾಜಕೀಯ ಹೋರಾಟಗಳನ್ನು ಮತ್ತು ಬೂರ್ಜ್ವಾ ಹಾಗೂ ಭೂಮಾಲಕರನ್ನು ಕಿತ್ತೊಗೆದು, ತನ್ಮೂಲಕ ಜನರನ್ನು ವಿಮುಕ್ತಗೊಳಿಸಿ ಸಮಾಜವಾದದ ಅಡಿಗಲ್ಲು ಹಾಕುವ ಹೋರಾಟದೊಂದಿಗೆ ಕಾ|| ಲೆನಿನ್ ಯಶಸ್ವಿಯಾಗಿ ಬೆಸೆದರು. ಇದರಿಂದಾಗಿ ಸಮಾಜವಾದ ಕೇವಲ ಒಂದು ಕಲ್ಪನೆ ಅಥವಾ ವೈಜ್ಞಾನಿಕ ಅನುಮಾನ ಆಗಿ ಉಳಿಯದೆ ಕಾರ್ಯರೂಪಕ್ಕೆ ಬರಬಲ್ಲ, ಪ್ರತಿಪಾದನೆಯಾಯಿತು. ಮೇ ದಿನದ ಕ್ರಾಂತಿಕಾರೀ ಪರಂಪರೆಯ ಅಂಶಗಳನ್ನು ಕಾಂ. ಬಿ. ಟಿ. ಆರ್. ತಮ್ಮ ಲೇಖನದಲ್ಲಿ ಪರಿಶೀಲಿಸಿದ್ದಾರೆ.

ಈ ಶತಮಾನೋತ್ಸವ 1890ರ ಮೇ ದಿನಾಚರಣೆಯದಲ್ಲ, ಚಿಕಾಗೋ ಕಾರ್ಮಿಕರ 1886ರ ಹೋರಾಟದ್ದು. 1890ರ ಆಚರಣೆ ಹಾಗೂ 1886ರ ಚಿಕಾಗೋ ಕಾರ್ಮಿಕರ ತಕ್ಷಣದ ಉದ್ದೇಶ ಒಂದೇ ಎಂಬುದೇನೋ ನಿಜ.

ವಿ. ಜೆ. ಕೆ. ನಾಯರ್

ಎಂಟು ಗಂಟೆಗಳ ದುಡಿಮೆಯ ದಿನವೇ ಆ ಉದ್ದೇಶ. ಅಲ್ಲದೆ ವರ್ಗ ಹೋರಾಟಗಳ ಪ್ರತಿಯೊಂದು ಚಿಕ್ಕ ಸ್ವರೂಪವನ್ನು ವಿಶ್ಲೇಷಿಸಿದಾಗ ಪ್ರಭುತ್ವದ ವರ್ಗ ಸ್ವರೂಪದ ಬಗ್ಗೆ ಕೆಲವು ತೀರ್ಮಾನಗಳಿಗೆ ಬರಬಹುದು. ಅಮೇರಿಕನ್ ಕಾರ್ಮಿಕರ ಹೋರಾಟ ಹಾಗೂ ಆ ಕಾರ್ಮಿಕರ ವಿರುದ್ಧ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರಕಾರದ ರಕ್ತಸಿಕ್ತ ದಮನದ ವಿಶ್ಲೇಷಣೆ ಕೂಡಾ ಅದನ್ನೇ ತೋರಿಸಿಕೊಡುತ್ತದೆ.

ಅಂತರ್‍ರಾಷ್ಟ್ರೀಯ ಕಾರ್ಮಿಕವರ್ಗ ಆಂದೋಲನದ ಇತಿಹಾಸ (History of International working class movement) ದಲ್ಲಿ 1886ರ ಹೋರಾಟಕ್ಕೆ ಸಂಬಂಧಪಟ್ಟ ಅಂಶಗಳನ್ನು ಹೀಗೆ ಹೇಳಲಾಗಿದೆ—

"ಮೇ 1886 ಅಮೆರಿಕನ್ ಕಾರ್ಮಿಕ ವರ್ಗದ ಆಂದೋಲನದ ಇತಿಹಾಸದಲ್ಲಿ ಒಂದು ಅಳಿಸಲಾರದ ಗುರುತು ಬಿಟ್ಟು ಹೋಗಿದೆ. ಆ ವರ್ಷ ನ್ಯೂಯಾರ್ಕ್‌ನಿಂದ ಸ್ಯಾನ್‌ಫ್ರಾನ್ಸಿಸ್ಕೋವರೆಗೆ ಮತಪ್ರದರ್ಶನಗಳ ಒಂದು ಅಲೆಯೇ ದೇಶವನ್ನೆಲ್ಲಾ ಅಪ್ಪಳಿಸಿತು. ಅದರ ಪ್ರಮುಖ ಬೇಡಿಕೆ-ಎಂಟು ಗಂಟೆಗಳ ದುಡಿಮೆಯ ದಿನ. ಚಿಕಾಗೋ ಹೋರಾಟದ ಕೇಂದ್ರವಾಗಿತ್ತು. ಮೇ ಒಂದರಂದು ಚಿಕಾಗೋ ಬೀದಿಗಳು 40 ಸಾವಿರ ಮುಷ್ಕರಗಾರರಿಂದ ತುಂಬಿಹೋಯಿತು. ಆ ದಿನಗಳಲ್ಲಿ ಇದು ಭಾರೀ ಸಂಖ್ಯೆಯೇ. ಸುಸಂಘಟಿತ ಹಾಗೂ ಶಾಂತಿಪೂರ್ಣವಾಗಿದ್ದ ಮತಪ್ರದರ್ಶನ ಮತ್ತು ಮುಷ್ಕರ ಮತ್ತೆ ಎರಡು ದಿನ ಮುಂದುವರಿಯಿತು.

ಆದರೆ ಮೇ 3ರಂದು ಮ್ಯಾಕ್‌ಕಾರ್‌ಮಿಕ್ ಕೃಷಿಯಂತ್ರ ಸ್ಥಾವರದಲ್ಲಿ ಮುಷ್ಕರನಿರತ ಕಾರ್ಮಿಕರು ಹಾಗೂ ಮುಷ್ಕರ ಮುರುಕರ ನಡುವೆ ನಡೆದ ಒಂದು ಘರ್ಷಣೆಯ ನೆಪ ಮಾಡಿ ಪೋಲೀಸರು ಕಾರ್ಮಿಕರ ಮೇಲೆ ಗುಂಡು ಹಾರಿಸಿದರು. ಆರು ಜನ ಕೊಲ್ಲಲ್ಪಟ್ಟರು. 50 ಜನ ಗಾಯಗೊಂಡರು.

ನಂತರದ ಕೇಂದ್ರ ಚೌಕದಲ್ಲಿ ಈ ಹೀನ ಕೃತ್ಯವನ್ನು ಪ್ರತಿಭಟಿಸಲು ಒಂದು ಸಾಮೂಹಿಕ ರ್‍ಯಾಲಿ ನಡೆಯಿತು. ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಚಿಕಾಗೋ ಕಾರ್ಮಿಕರ ಮುಖಂಡರು ಪೋಲೀಸರ ಮೇಲೆ ಕಳಂಕ ಹೊರಿಸಿ ಅಧಿಕಾರಿಗಳು ಮತ್ತಷ್ಟು ಹಿಂಸಾಚಾರಕ್ಕಿಳಿಯಬಹುದಾದ ಸಂಭವದತ್ತ ಕಾರ್ಮಿಕರ ಗಮನ ಸೆಳೆದು ದೃಢತೆ, ಶಾಂತಚಿತ್ತತೆ ಹಾಗೂ ಸಂಘಟನಾ ಶಕ್ತಿಯನ್ನು ಪ್ರದರ್ಶಿಸಬೇಕೆಂದು ಕಾರ್ಮಿಕರಿಗೆ ಕರೆ ನೀಡಿದರು. ರ್‍ಯಾಲಿ ಮುಗಿಯುವ ಐದು ನಿಮಿಷಗಳ ಮೊದಲು ಪೋಲೀಸ್ ಪಡೆ ಕಾಣಿಸಿಕೊಂಡಿತು. ಒಬ್ಬ ಅಪರಿಚಿತ ವ್ಯಕ್ತಿ ಚೌಕದೊಳಗೆ ಒಂದು ಬಾಂಬು ಎಸೆದ. ಇದರಿಂದ ಒಬ್ಬ ಪೋಲೀಸ್ ಕೊಲ್ಲಲ್ಪಟ್ಟು, 5 ಮಂದಿ ಗಾಯಗೊಂಡರು. ಪೋಲೀಸರು ಗೋಲೀಬಾರು ಆರಂಭಿಸಿ ಕಾರ್ಮಿಕರನ್ನು

ಹೊಡೆದುರುಳಿಸಿದರು, ಎಳೆದಾಡಿದರು.

ಚಿಕಾಗೋದ ಈ ರಕ್ತಪಾತದ ಬೆನ್ನಿಗೇ ಸಂಬಂಧಪಟ್ಟ ಅಧಿಕಾರಿಗಳು ಕಾರ್ಮಿಕವರ್ಗವನ್ನು ಹಾಗೂ ಪ್ರಗತಿಪರ ಆಂದೋಲನಗಳನ್ನು ಜರೆಯುವ ಅಪಪ್ರಚಾರವನ್ನು ದೇಶಾದ್ಯಂತ ಯಾವ ಲಂಗು–ಲಗಾಮೂ ಇಲ್ಲದಂತೆ ನಡೆಸಲಾರಂಭಿಸಿದರು. ಲೆಕ್ಕವಿಲ್ಲದಷ್ಟು ಬಂಧನಗಳಾದವು. ಆಲ್ಬರ್ಟ್ ಆರ್. ಪಾರ್ಸನ್ಸ್, ಆಗಸ್ಟ ಸ್ಪೈಸ್, ಸ್ಯಾಮುವೆಲ್ ಜೆ. ಫೀಲ್ಡೆನ್, ಯೂಜಿಸ್ ಶ್ವಾಬ್, ಅಡಾಲ್ಫ್ ಫಿಶರ್, ಜಾರ್ಜ್ ಎಂಗೆಲ್, ಲೂಯಿ ಲಿಂಗ್ ಮತ್ತು ಆಸ್ಕರ್ ನೀಜಿ ಎಂಬ ಚಿಕಾಗೋ ಕಾರ್ಮಿಕರ ಎಂಟು ಮುಖಂಡರ ವಿಚಾರಣೆ ನಡೆಯಿತು. ಫೀಲ್ಡೆನ್ ವಿನಃ ಇತರ ಎಲ್ಲರೂ ಬಾಂಬ್ ಎಸೆತದ ಮೊದಲೇ ಚೌಕವನ್ನು ಬಿಟ್ಟು ಹೋಗಿದ್ದರೂ ಅವರೆಲ್ಲರ ಮೇಲೆ ಕೊಲೆಯ ಆಪಾದನೆ ಹೊರಿಸಲಾಯಿತು. ಪ್ರಗತಿಪರರ ಬಗ್ಗೆ ಬಹಿರಂಗವಾಗಿಯೇ ದ್ವೇಷ ಕಾರುವ ವ್ಯಕ್ತಿಗಳನ್ನೇ ಆರಿಸಿ ಈ ವಿಚಾರಣೆಯ ನ್ಯಾಯಾಧೀಶರುಗಳನ್ನಾಗಿ (ಜ್ಯೂರಿಯನ್ನಾಗಿ) ಮಾಡಲಾಯಿತು. ಪ್ರಮುಖ ಸಾಕ್ಷಿಗೆ ಲಂಚ ನೀಡಲಾಗಿತ್ತು. ಎನ್ನುವುದು ಆಮೇಲೆ ಬಯಲಾಯಿತು. ಪ್ರತಿವಾದಿಗಳು ಧೈರ್ಯದಿಂದ ಹಾಗೂ ಗೌರವ ಪೂರ್ಣವಾಗಿ ನಡೆದುಕೊಂಡರು. ಅವರು ತಮ್ಮನ್ನು ಸಮರ್ಥಿಸಿ ಕೊಂಡರು. ಮಾತ್ರವಲ್ಲ, ಅಧಿಕಾರಿಗಳ ಮೇಲೆಯೇ ಅಪಾದನೆ ಹೊರಿಸಿದರು. ಬಂಧನವನ್ನು ತಪ್ಪಿಸಿಕೊಂಡಿದ್ದ ಪಾರ್ಸನ್ಸ್ ನ್ಯಾಯಾಲಯದಲ್ಲಿ ಹಾಜರಾಗಿ, ಪರಿಣಾಮವೇನಾಗಬಹುದು ಎಂದು ಪೂರ್ಣವಾಗಿ ತಿಳಿದಿದ್ದರೂ ತನ್ನ ಸಂಗಾತಿಗಳ ಜತೆಗೆ ನಿಂತ. ನ್ಯಾಯಾಲಯ ಏಳು ಮಂದಿಗೆ ನಲ್ಲು ಶಿಕ್ಷೆ ಕೊಟ್ಟಿತು, ಆಸ್ಕರ್ ನೀಜಿಗೆ 15 ವರ್ಷಗಳ ಜೈಲುವಾಸ ವಿಧಿಸಿತು

ಗಲ್ಲಿಗೇರಿಸುವ ದಿನ ಸಮೀಪಿಸಿದಂತೆ ಶಿಕ್ಷೆಗೊಳಗಾದವರನ್ನೂ ರಕ್ಷಿಸುವ ಆಂದೋಲನ ದೇಶದ ಗಡಿಗಳನ್ನೂ ದಾಟಿ ದೂರ–ದೂರದವರೆಗೆ ಹರಡಿತು. ಜಗತ್ತಿನ ಎಲ್ಲೆಡೆ ಭಾಗಗಳಿಂದಲೂ ಶಿಕ್ಷೆಯನ್ನು ಕಡಿಮೆ ಮಾಡಬೇಕೆಂದು ಅರ್ಜಿಗಳು ಬಂದವು. ಈ ಪ್ರತಿಭಟನೆಗಳ ಒತ್ತಡದಿಂದಾಗಿ ಇಲಿನಾಯ್ಸ್‌ನ ಗವರ್ನರ್ ಫೀಲ್ಡೆನ್ ಹಾಗೂ ಶ್ವಾಬ್‌ರ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಪರಿವರ್ತಿಸಿದ.

ತಲೆಯ ಮೇಲೊಂದು ಸೂರು

ಮುಂದುವರಿದ ದೇಶಗಳಲ್ಲಿಯೂ ಭಾರತದಂತಹ ಬಡ ದೇಶದಲ್ಲಿದ್ದಂತೆ ಮನೆ ಮಾರಿಲ್ಲದೆ ಫುಟ್‌ಪಾತ್‌ಗಳಲ್ಲಿ ವಾಸಿಸುವ ಜನ ಬಹಳಷ್ಟಿದ್ದಾರೆ. ಉದಾಹರಣೆಗೆ, ಪ್ಯಾರಿಸ್ಸಿನಲ್ಲಿ ಬೀದಿ ಬೀದಿಗಳಲ್ಲಿ. ರೈಲ್ವೇ ನಿಲ್ದಾಣಗಳಲ್ಲಿ ವಾಸಿಸುತ್ತಿದ್ದ ಜನಗಳ ಸಂಖ್ಯೆ 1982 ರಲ್ಲಿ 8 ಸಾವಿರ ಇದ್ದದ್ದು ಈಗ 22 ಸಾವಿರಕ್ಕೇರಿದೆ. ಪಶ್ಚಿಮ ಜರ್ಮನಿಯಲ್ಲಿ ಒಟ್ಟು ಒಂದು ಲಕ್ಷ ಜನ ನಿರ್ವಸಿದರು.

ತದ್ವಿರುದ್ಧವಾಗಿ, ಸಮಾಜವಾದಿ ದೇಶಗಳಲ್ಲಿ ಮನೆ ಹೊಂದಿರುವ ಹಕ್ಕು ಸಂವಿಧಾನ ಬದ್ಧ ಹಕ್ಕು. ಕೇವಲ ಕಾಗದದ ಮೇಲೆ ಉಳಿದಿರುವ ಹಕ್ಕು ಮಾತ್ರವಲ್ಲ. ಉದಾ : ಕಳೆದ ಹದಿನೈದು ವರ್ಷಗಳಲ್ಲಿ 16 ಕೋಟಿ ಸೋವಿಯತ್ ಜನತೆ ಸ್ವಂತ ಫ್ಲಾಟ್ ಪಡೆದಿದ್ದಾರೆ. ಇದು ಫ್ರಾನ್ಸ್, ಬ್ರಿಟನ್ ಹಾಗೂ ಸ್ಪೇನಿನ ಒಟ್ಟು ಜನಸಂಖ್ಯೆಗೆ ಸಮ. ಯಾವುದೇ ಸಮಾಜವಾದಿ ದೇಶಕ್ಕೆ ಭೇಟಿ ನೀಡುವ ಸಂದರ್ಶಕರು ಕಾಣುವ ಒಂದು ಸಾಮಾನ್ಯ ದೃಶ್ಯವೆಂದರೆ ದುಡಿಯುವ ಜನರಿಗಾಗಿ ಗೃಹ ನಿರ್ಮಾಣದ ತೀವ್ರ ಚಟುವಟಿಕೆ.

ಗಲ್ಲಿಗೇರಿಸುವ ಹಿಂದಿನ ದಿನ, ದಂಡನೆಗೊಳಗಾದವರಲ್ಲಿ ಅತೀ ಚಿಕ್ಕವನಾದ ಲೂಯಿಲಿಂಗ್ ಆತ್ಮಹತ್ಯೆ ಮಾಡಿಕೊಂಡ. ನವಂಬರ್ 11, 1887 ರಂದು ಆಲ್ಬರ್ಟ್ ಪಾರ್ಸನ್ಸ್, ಆಗಸ್ಟ ಸ್ಪೈಸ್, ಜಾರ್ಜ್‌ಎಂಗೆಲ್ ಹಾಗೂ ಅಡಾಲ್ಫ್ ಫಿಶರ್ ಇವರನ್ನು ಗಲ್ಲಿಗೇರಿಸಲಾಯಿತು. ಅವರು ಧೀರತನದಿಂದ ತಮ್ಮ ಸಾವನ್ನೆದುರಿಸಿದರು. "ನಮ್ಮ ಮೌನವೇ ನಮ್ಮ ಮಾತುಗಳಿಗಿಂತ ಹೆಚ್ಚು ಪ್ರಭಾವ ಹೊಂದುವ ಕಾಲ ಬಂದೇ ಬರುತ್ತದೆ"– ಸ್ಪೈಸ್‌ನ ಅಂತಿಮ ನುಡಿಗಳಿವು. ಫೀಲ್ಡೆನ್, ಶ್ವಾಬ್ ಹಾಗೂ ನೀಜಿ 1893 ರಲ್ಲಿ ಬಿಡುಗಡೆಯಾದರು. ಅವರ ಅಪರಾಧ ಸಾಬೀತಾಗಿರಲಿಲ್ಲ, ಗಲ್ಲಿಗೇರಿಸಲ್ಪಟ್ಟ ಅವರ ಕ್ರಾಂತಿಕಾರಿ ಸಂಗಾತಿಗಳಂತೆ ಅವರೂ ಉದ್ದೇಶ ಪೂರ್ವಕವಾಗಿ ಆರಿಸಲ್ಪಟ್ಟ ಪಕ್ಷಪಾತ ಪೀಡಿತ ನ್ಯಾಯಾಧೀಶ ಮಂಡಲಿಗೆ ಹಾಗೂ ಅನ್ಯಾಯಪೂರ್ಣ ವಿಚಾರಣೆಗೆ ಬಲಿಯಾದರು. ಎಂಬುದನ್ನು ಇಲಿನಾಯ್ಸ್‌ನ ಹೊಸ ಗವರ್ನರ್ ಜಾನ್ ಪಿ ಆಲ್ಟ್‌ಗೆಲ್ಡ್ ಒಪ್ಪಿಕೊಂಡನು.

ಇದು ಕಾರ್ಮಿಕ ವರ್ಗದ ಇತಿಹಾಸಕಾರರು ಪ್ರಸ್ತುತ ಪಡಿಸಿದವಾಸ್ತವಾಂಶಗಳಾದರೆ ಬೂರ್ಜ್ವಾ ಇತಿಹಾಸಕಾರರು ನೀಡುವ ಚಿತ್ರ ಬೇರೆಯೇ ಆಗಿದೆ. ಥಾಮಸ್ ಎ. ಬೈಲಿಯ ಅಮೇರಿಕನ್ ಪೇಜೆಂಟ್ ಎಂಬ ಪುಸ್ತಕದಿಂದ ಇದೇ ಘಟ... ಅದರ ಹಿನ್ನೆಲೆ ಹಾಗೂ ಫಲಿತಾಂಶಗಳ ಬಗ್ಗೆ ಏ... ಹೇಳಿದ್ದಾನೆಂಬುದನ್ನು ಇಲ್ಲಿ ಉದ್ಧರಿಸುತ್ತೇನೆ.

"ಕುಂಟುತ್ತಿರುವ ಶ್ರಮಿಕ ವರ್ಗ" ಎ... ಉಪಶಿರೋನಾಮೆಯ ಕೆಳಗೆ ಆತ ಹೀಗೆ ಬ... ದ್ದಾನೆ.

"ಕುಂಟಿತಗೊಂಡ ನ್ಯಾಶನಲ್ ಲೇಬ... ಯೂನಿಯನ್ ಕೆಳಗೆ ಬೀಳಿಸಿದ ಪಂಜನ್ನು ಒಂ... ಹೊಸ ಸಂಘಟನೆ – ನೈಟ್ಸ್ ಆಫ್ ಲೇಬರ್ ಎತ್ತಿ ಕೊಂಡಿತು. ಅಧಿಕೃತವಾಗಿ ದಿ ನೋಬ... ಆರ್ಡರ್ ಆಫ್ ನೈಟ್ಸ್ ಆಫ್ ಲೇಬರ್ ಎಂ... ಹೆಸರಿನ ಈ ಸಂಘಟನೆ 1860 ರಲ್ಲಿ ಅಶುಭ ರಾ... ಯಲ್ಲಿ ಒಂದು ಖಾಸಗೀಕರ್ಮಕಾಂಡ, ಸಂಕೇತನ... ಗಳು ಹಾಗೂ ಬಿಗಿಹಿಡಿತ ಹೊಂದಿರುವ ಒಂದು ಗು... ಸಂಘಟನೆಯಾಗಿ ಆರಂಭವಾಯಿತು. ಮಾಲಿಕ... ಮಾಡಬಹುದಾದ ಪ್ರತೀಕಾರಗಳಿಂದ ಮೊದ... ತಪ್ಪಿಸಿಕೊಳ್ಳಲು ಇದ್ದ ಈ ಗುಪ್ತತೆ 1881 ವರೆಗೂ ಮುಂದುವರಿಯಿತು.

ನೈಟ್ಸ್ ಆಫ್ ಲೇಬರ್ ಕೂಡ ನ್ಯಾಶನ... ಲೇಬರ್ ಯೂನಿಯನ್‌ನಂತೆ ಎಲ್ಲಾ ಕಾರ್ಮಿ... ರನ್ನೂ "ಒಂದು ದೊಡ್ಡ ಸಂಘ"ದಲ್ಲಿ ಸೇರಿಸಬ... ಸಿತು. "ಒಬ್ಬನಿಗಾದ ಗಾಯ ಎಲ್ಲರಿಗ... ನೋವುಂಟುಮಾಡುವಂತಹುದು" ಎಂಬು...

ರ ಘೋಷ ವಾಕ್ಯವಾಗಿತ್ತು. ಕುಶಲ ಕೆಲಸ ರು ಮತ್ತು ಕುಶಲರಲ್ಲದ ಕೆಲಸಗಾರರು, ಳೆಯರು ಮತ್ತು ಪುರುಷರು, ಬಿಳಿಯರು ತ್ತು ದಲಿತ ನಿಗ್ರೋಗಳು ಹೀಗೆ ಎಲ್ಲರಿಗೂ ಈ ಟನೆ ಸುಸ್ವಾಗತ ನೀಡಿತು. ಒಟ್ಟು ಸುಮಾರು ಸಾವಿರ ಜನ ಸೇರಿಕೊಂಡರು. ಮಧ್ಯ ಪಾರಸ್ಥರು. ಜೂಜುಕೋರರು, ವಕೀಲರು, ಾದೇವಿಗಾರರು ಹಾಗೂ ಶೇರು ದಳ್ಳಾಳಿಗಳ ್ಯ ಸೇರಿಸಿಕೊಳ್ಳಲಿಲ್ಲ.

ವಿಶಾಲ ಗುರಿಯಿಟ್ಟುಕೊಂಡು ರಂಗದಲ್ಲಿ ಗಿದ ಈ ನೈಟ ಗಳು ರಾಜಕೀಯದತ್ತ ಖಡ್ಗವನ್ನು ಬೀಸಲಿಲ್ಲ. ಅದರ ಬದಲು ಕ ಹಾಗೂ ಸಾಮಾಜಿಕ ಸುಧಾರಣೆಗಳು, ಪ್ಪಾದಕರ ಸಹಕಾರ ಸಂಘಗಳ ರಚನೆಯ ತ್ತು ಸುರಕ್ಷಿತತೆ ಹಾಗೂ ಆರೋಗ್ಯದ ಸಂಹಿ ರಚನೆಯ ಪ್ರಚಾರ ಮಾಡಿದರು. ್ಯಗಳ ಹಾಗೂ ಬಂಡವಾಳದ ಏಕಮಾತ್ರ ಕರ್ತ ಶ್ರಮಿಕ ಎಂಬ ಯುದ್ಧ ಘೋಷ ದ ಇವರು- ಕೈಗಾರಿಕಾ ಸಮರವನ್ನು ಾಧಿಸಿ ಕೈಗಾರಿಕಾ ಮಾತುಕತೆಗಳಿಗೆ ತ್ಸಾಹ ನೀಡಿದರು. ಆಗಿನ ದುಡಿಮೆಯ ಹತ್ತು ಗಂಟೆಗಿಂತಲೂ ಹೆಚ್ಚಿತ್ತು. ನೈಟ್ಸ್ ಟನೆ ಅದನ್ನು ಎಂಟು ಗಂಟೆಗಿಳಿಸಲು ದೃಢ ಾರ ನಡೆಸಿತು.

ಶ್ರಮ ಶಕ್ತಿಗೆ ಜಯ, ಶ್ರಮಶಕ್ತಿ ಬಲ ಪಡೆಯುತ್ತಿದೆ.

ಎಂಟು ಗಂಟೆಗಳ ಬಾವುಟದೊಂದಿಗೆ ಮುದತ್ತ ಸಾಗಲಿದೆ. ಆದಿನಗಳ ಪ್ರಿಯ ಹಾಡಾ ಇದು. ಟೆರೆನ್ಸ್ ವಿ. ಪೌಡರ್ಲಿ ಎಂಬ ಚತುರ ೂ ನಿರರ್ಗಳ ವಾಕ್ಪಟುತ್ವ ಹೊಂದಿದ್ದ ್.– ಅಮೆರಿಕನ್ನರ ಮುಖಂಡತ್ವದಲ್ಲಿ ಈ ಟನೆ ಎಂಟು ಗಂಟೆಗಳ ದುಡಿಮೆಯ ಹಲ ಮುಷ್ಕರಗಳನ್ನು ಗೆದ್ದಿತು. 1886 ರ ಗೆ, ತಮ್ಮ ಸದಸ್ಯ ಸಂಖ್ಯೆ ಹತ್ತು ಲಕ್ಷವೆಂಬ ಹೇಳಿಕೆ ಅತಿಶಯೋಕ್ತಿಯಾಗಿದ್ದರೂ ಅವರು ಾಗಿಯೂ ಗಮನಿಸಲೇಬೇಕಾದ ಒಂದು ಮಾಗಿದ್ದರು.

ಅಮೆರಿಕನ್ ಸರಕಾರ ಈ ನೈಟ್ಸ್ ಆಫ್ ್ (ಶ್ರಮಿಕ ವೀರಾಗ್ರಣಿಗಳು) ಸಂಘಟ ಶಕ್ತಿಯನ್ನು ಹೇಗೆ ಗಮನಿಸ ಬಯಸಿದರು

ಕಾರ್ಮಿಕ ಸಂಘಗಳು – ಎರಡು ವ್ಯವಸ್ಥೆಗಳಲ್ಲಿ

ಸೋವಿಯತ್ ಒಕ್ಕೂಟ	ಅಮೇರಿಕಾ ಸಂಯುಕ್ತ ಸಂಸ್ಥಾನಗಳು
ಕಾರ್ಮಿಕ ಸಂಘಗಳ ಒಟ್ಟು ಸದಸ್ಯ ಸಂಖ್ಯೆ 14 ಕೋಟಿ. ದೇಶದ ದುಡಿಯುವ ಜನಗಳಲ್ಲಿ98ಶೇ. ರಷ್ಟಾಗುತ್ತದೆ ಇದು. ಪ್ರತಿ ವರ್ಷ 30 ಲಕ್ಷ ಜನ ಕಾರ್ಮಿಕ ಸಂಘಗಳ ಸದಸ್ಯರಾಗುತ್ತಾರೆ.	ಒಟ್ಟು ಸದಸ್ಯ ಸಂಖ್ಯೆ 2 ಕೋಟಿ. ಸಂಬಳದ ಕೆಲಸಗಾರರಲ್ಲಿ ಯೂನಿಯನ್ ಸದಸ್ಯರ ಅನುಪಾತ ಯುದ್ಧ ನಂತರದ ದಿನಗಳಲ್ಲಿ ಇಳಿಮುಖಗೊಳ್ಳುತ್ತದೆ. 60 ರ ದಶಕದಲ್ಲಿ 27.5% ಇದ್ದದ್ದು, 1980ರಲ್ಲಿ20.9 ಶೇ. ಕ್ಕೆ 1983 ರಲ್ಲಿ 19 ಶೇ. ಕ್ಕೆ ಇಳಿದಿದೆ.
ಕಾರ್ಮಿಕ ಸಂಘಗಳು ತಮ್ಮದೇ ನಿಯಮಗಳ ಪ್ರಕಾರ ಕೆಲಸ ಮಾಡುತ್ತವೆ. ಸರಕಾರದಿಂದ ರಿಜಿಸ್ಟ್ರೇಶನ್ ಪಡೆಯಬೇಕಾಗಿಲ್ಲ. ಅಲ್ಲದೆ ಅವು ತಮಗೆ ಸಂಬಂಧಪಟ್ಟ ಶಾಸನಗಳನ್ನು ಸೂಚಿಸುವ ಅಧಿಕಾರ ಹೊಂದಿವೆ.	ಕಾರ್ಮಿಕ ಸಂಘಗಳ ಚಟುವಟಿಕೆಗಳನ್ನು, ಸರಕಾರ ಕಟ್ಟುನಿಟ್ಟಾಗಿ ನಿಯಂತ್ರಿಸುತ್ತದೆ. ರಿಜಿಸ್ಟ್ರೇಶನ್ ಪಡೆದಿರುವ, ತಮ್ಮ ಚಟುವಟಿಕೆಗಳ ವಿವರವಾದ ವಾರ್ಷಿಕ ಲೆಕ್ಕಾಚಾರ ಕೊಡುವ ಸಂಘಗಳನ್ನಷ್ಟೆ ಅಸ್ತಿತ್ವದಲ್ಲಿರಲು ಬಿಡಲಾಗುತ್ತದೆ. ಇದರ ಉಲ್ಲಂಘನೆ ಶಿಕ್ಷಾರ್ಹ ಕ್ರಿಮಿನಲ್ ಅಪರಾಧ.
ಕಾರ್ಮಿಕರ ರಕ್ಷಣೆ ಹಾಗೂ ಸುರಕ್ಷತಾ ಹತೋಟಿಯಲ್ಲಿ ಕಾರ್ಮಿಕ ಸಂಘಗಳು ಸಕ್ರಿಯ ಪಾತ್ರ ವಹಿಸುತ್ತವೆ. 6000 ಪರಿಣತರು ಹಾಗೂ 56 ಸಾವಿರ ಸ್ವಯಂ ಸೇವಕ ಸಹಾಯಕರ ಮೂಲಕ ಅದು ತಾಂತ್ರಿಕ ಪರೀಕ್ಷೆ ನಡೆಸುತ್ತವೆ. 1981 – 83 ರಲ್ಲಿ 8000 ಕೋಟಿ ಡಾಲರುಗಳಷ್ಟು ಹಣವನ್ನು ಸೋವಿಯತ್ ಉದ್ಯಮಗಳ ಕೆಲಸದ ಪರಿಸರ ಸುಧಾರಿಸಲು ಖರ್ಚು ಮಾಡಲಾಗಿದೆ. ಕೈಗಾರಿಕಾ ಅಪಘಾತಗಳು 1980 ರಿಂದ 1983 ರ ಅವಧಿಯಲ್ಲಿ 12.5 ಶೇ. ಇಳಿದಿವೆ. ಉದ್ಯೋಗ ಸಂಬಂಧಿ ಕಾಯಿಲೆಗಳೂ 18.8ಶೇ. ಕಡಿಮೆಯಾಗಿವೆ.	ತಮ್ಮ ದುಡಿಮೆಯ ಪರಿಸರದ ಮೇಲೆ ಅ. ಸಂ. ಸಂ. ಕಾರ್ಮಿಕರಿಗೆ ಯಾವ ಹತೋಟಿಯೂ ಇಲ್ಲ. ಇದು "ಉದ್ಯೋಗ ಸಂಬಂಧೀ ಸುರಕ್ಷಿತತೆ ಹಾಗೂ ಆರೋಗ್ಯ ಏಜೆನ್ಸಿಯ" ಕೆಲಸವಷ್ಟೆ. ಸದ್ಯದ ಅ. ಸಂ. ಸಂ. ಆಡಳಿತ ಈ ಏಜೆನ್ಸಿಗೆ ನೀಡಬೇಕಾದ ಹಣದಲ್ಲಿ ತೀವ್ರ ಕಡಿತ ಮಾಡಿರುವುದರ ಪರಿಣಾಮವಾಗಿ ಏಜೆನ್ಸಿಯ ತನಿಖೆ 45% ಕಮ್ಮಿ ಆಗಿದೆ. ಸಾಕಷ್ಟು ಇಂತಹ ಹತೋಟಿಗಳಿಲ್ಲದ ಕಾರಣ ಪ್ರತಿ ವರ್ಷ 1,14,000 ಜನ ಉದ್ಯೋಗ ಸಂಬಂಧಿ ಕಾಯಿಲೆಗಳಿಂದ ಸಾಯುತ್ತಾರೆ. ಸುಮಾರು 20 ಲಕ್ಷ ಜನ ದುಡಿಮೆಯ ಪರಿಸರದ ಅಪಾಯಗಳಿಗೆ ಉಂಟಾದ ಕಾಯಿಲೆಗಳಿಂದ ನರಳುತ್ತಿದ್ದಾರೆ.

ಎನ್ನುವುದನ್ನು ಶ್ರೀಯುತ ಬ್ಯೆಲಿ ನಂತರದ ಪರಿಚ್ಛೇದಕ್ಕೆ ಕೊಟ್ಟಿರುವ ಶಿರೋನಾಮೆಯಿಂದಲೇ ನಾವು ಅರ್ಥಮಾಡಿಕೊಳ್ಳಬಹುದು.

ನೈಟ್ಸ್ ಆಫ್ ಲೇಬರ್ (ಶ್ರಮಿಕ ವೀರಾಗ್ರಣಿ)ನ್ನು ಕುದುರೆಯಿಂದ ಇಳಿಸಿದ್ದು

ಹೊರಗಿನ ನೋಟಕ್ಕೆ ವಿಜಯಗಳಿಸುತ್ತಿದ್ದಂತೆ ಕಂಡರೂ ನೈಟ್ಸ್ ಆಫ್ ಲೇಬರ್ ಪತನದತ್ತ ಸವಾರಿ ಮಾಡುತ್ತಿದ್ದರು. 1886 ರ ಮೇ ದಿನದ ಹಲವು ಮುಷ್ಕರದಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಅವುಗಳಲ್ಲಿ ಅರ್ಧದಷ್ಟು ವಿಫಲಗೊಂಡವು. ಚಿಕಾಗೋ ಇದರ ಒಂದು ಕೇಂದ್ರವಾಗಿತ್ತು. ಇಲ್ಲಿ 80 ಸಾವಿರ ನೈಟ್‌ಗಳಿದ್ದರು. ಕೆಲವು ನೂರು ಅರಾಜಕತಾವಾದಿಗಳು ಕೂಡಾ ನಗರದಲ್ಲಿ ಬಂದು ಸೇರಿಕೊಂಡಿದ್ದರು ಅವರಲ್ಲಿ ಬಹಳಷ್ಟು ಜನವಿದೇಶಗಳಲ್ಲಿ ಜನಿಸಿದವರು. ಅವರು ಅಮೆರಿಕನ್ ಸರಕಾರವನ್ನು ಹಿಂಸಾತ್ಮಕ [illegible] ಕಿತ್ತೆಸೆಯಬೇಕೆಂದು ಪ್ರತಿಪಾದಿಸುತ್ತಿದ್ದರು.

ರಕ್ತಸಿಕ್ತ ಹೇಮಾರ್ಕೆಟ್ ಚೌಕದ ಘಟನೆಯ ವರೆಗೆ ಪರಿಸ್ಥಿತಿ ಗಂಭೀರಗೊಳ್ಳುತ್ತಾ ಹೋಯಿತು. ಶ್ರಮಿಕ ಅವ್ಯವಸ್ಥೆ ಹರಡಿತ್ತು. ಮೇ, 4 1886 ರಂದು ಚಿಕಾಗೋ ಪೋಲಿಸರು ಅಧಿಕಾರಿಗಳ ಮೇಲೆ ಅಮಾನುಷತೆಯ ಅಪವಾದ ಹೇರಿ ಅದನ್ನು ಪ್ರತಿಭಟಿಸಲೆಂದು ಕರೆದ ಸಭೆಯತ್ತ ಮುಂದುವರಿದು ಇದ್ದಕ್ಕಿದ್ದಂತೆ ಒಂದು ಡೈನಾಮೈಟ್ ಬಾಂಬ್ ಎಸೆಯಲ್ಪಟ್ಟಿತು. ಹಲವು ಜನರನ್ನು ಅದು ಕೊಂದಿತು ಅಥವಾ ಗಾಯಗೊಳಿಸಿತು. ಸತ್ತವರಲ್ಲಿ ಒಬ್ಬ ಪೋಲೀಸಿನವನೂ ಇದ್ದ.

ನಗರದಲ್ಲೆಲ್ಲಾ ಭಾವೋದ್ರೇಕ ಗಾಳಿಯಂತೆ ಹರಡಿತು. ಎಂಟು ಅರಾಜಕತಾವಾದಿಗಳನ್ನು ಅವರಿಗೂ ಬಾಂಬಿಗೂ ನೇರವಾಗಿ ಯಾವ ಸಂಬಂಧವಿದೆಯೆಂದು ಯಾರಿಗೂ ಸಾಬೀತುಪಡಿಸುವುದಾಗದಿದ್ದರೂ ಸುತ್ತುವರಿಯಲಾಯಿತು, ಆದರೆ ನ್ಯಾಯಾಧೀಶರುಗಳು ಅವರು ಸ್ಫೋಟಕ ಸಿದ್ಧಾಂತಗಳನ್ನು ಬೋಧಿಸಿದ್ದರಿಂದ ಅವರ ಮೇಲೆ ಪಿತೂರಿಯ ಅಪಾದನೆ ಮಾಡಬಹುದೆಂದು ತೀರ್ಪಿತ್ತರು. ಇವರಿಗೆ ಮರಣ ದಂಡನೆಯಾಯಿತು. ಅವರಲ್ಲೊಬ್ಬ ಆತ್ಮಹತ್ಯೆ ಮಾಡಿಕೊಂಡ. ಉಳಿದಿಬ್ಬರಿಗೆ ಕಠಿಣ ಶಿಕ್ಷೆಯಾಯಿತು

ಕ್ಷಮಾಧಾನಕ್ಕೆಂದು ಒತ್ತಾಯಿಸಿ ಚಳವಳಿ ಹೆಚ್ಚಾಯಿತು. 1892 ರಲ್ಲಿ, ಸುಮಾರು ಆರು ವರ್ಷಗಳ ನಂತರ ಜರ್ಮನ್ ಸಂಜಾತ ಹಾಗೂ ಬಲವಾದ ಉದಾರವಾದಿ ಪ್ರವೃತ್ತಿಯಿದ್ದ ಪ್ರಜಾಪ್ರಭುತ್ವವಾದಿ ಜಾನ್ ಪಿ. ಆಟ್ಗೆಲ್ಡ್ ಇಲಿನ್ಯೋಸ್‌ನ ಗವರ್ನರಾಗಿ ಚುನಾಯಿತನಾದ. ಹೇ ಮಾರ್ಕೆಟ್ ಮೊಕದ್ದಮೆಯನ್ನು ಅಮೂಲಾಗ್ರವಾಗಿ ಅಧ್ಯಯನ ಮಾಡಿದ ನಂತರ ಆತ ಬದುಕುಳಿದಿದ್ದ ಮೂವರಿಗೆ ಕ್ಷಮಾದಾನ ನೀಡಿದ. ಸಂಪ್ರದಾಯ ಶರಣರು ಅವನನ್ನು ತೀವ್ರವಾಗಿ ಬೈದರು. ಈ ಜನ ನಿರಪರಾಧಿಗಳು ಎಂದು ಬಗೆದಿದ್ದ ಜನ ಅವನ ಮೇಲೆ ಹೊಗಳಿಕೆಯ ಮಳೆ ಗೆರೆದರು. ನಂತರ ಆತ ಮರು ಚುನಾವಣೆಯಲ್ಲಿ ಸೋತ. ಸ್ವಲ್ಪ ವರ್ಷಗಳನಂತರ ಅಜ್ಞಾತನಾಗಿ ಸತ್ತ. ಅದೇನೇ ಇರಲಿ ಆಟ್ಗೆಲ್ಡ್ ತಾನು ತೀರಾ ಅನ್ಯಾಯ ಎಂದು ಬಗೆದುದನ್ನು ವಿರೋಧಿಸುವಲ್ಲಿ ಧೈರ್ಯ ತೋರ್ಪಡಿಸಿದ.

ಹೇಮಾರ್ಕೆಟ್ ಚೌಕ ನೈಟ್ಸ್ ಆಫ್ ಲೇಬರ್‌ನ ಊರುಗೋಲುಗಳನ್ನು ಮುರಿದು ಬಿಟ್ಟಿತು. ಸಾರ್ವಜನಿಕರ ಮನಸ್ಸಿನಲ್ಲಿ, ತಪ್ಪಾಗಿಯೆ ಆದರೂ, ಅವರು ಅರಾಜಕತಾವಾದಿಗಳಾಗಿಯೆ ಬಿಟ್ಟಿದ್ದರು. ಅದಕ್ಕನುಗುಣವಾಗಿ ಎಂಟು ಗಂಟೆ ಆಂದೋಲನಕ್ಕೆ ತೊಂದರೆಯುಂಟಾಯಿತು. ನೈಟ್‌ಗಳ ನಂತರದ ಮುಷ್ಕರಗಳಿಗೆ ಸಿಕ್ಕಿದಜಯ ಅತ್ಯಲ್ಪ.

ನೈಟ್ಸ್‌ಗಳಿಗೆಮರಣಾಂತಿಕವಾದ ಇನ್ನೊಂದು ತೊಂದರೆಯೆಂದರೆ ಕುಶಲ ಹಾಗೂ ಕುಶಲರಲ್ಲದ ಕಾರ್ಮಿಕರು, ಹೀಗೆ ಇಬ್ಬರನ್ನೂ ಸೇರಿಸಿಕೊಂಡದ್ದು. ಕುಶಲರಲ್ಲದ ಕಾರ್ಮಿಕರ ಸ್ಥಾನದಲ್ಲಿ ಸುಲಭವಾಗಿಯೇ ಮುಷ್ಕರ ಮುರಿಯುವ 'ಆಣಚಿ'ಗಳನ್ನು ತರಬಹುದು. ಉಚ್ಚ ದರ್ಜೆಯ ಕುಶಲ ಯೂನಿಯನ್ ಸದಸ್ಯರು ಕುಶಲತೆಯ ಮೇಲೆ ಅರೆ - ಗುತ್ತೇದಾರಿಕೆಯನ್ನೇ ಹೊಂದಿದ್ದರು. ಅಂತಹವರ ಸ್ಥಾನದಲ್ಲಿ ಬೇರೆಯವರನ್ನು ಬೇಗನೇ ತರುವುದು ಸಾಧ್ಯವಿಲ್ಲ. ಆದ್ದರಿಂದ ಅವರಿಗೆ ಹೆಚ್ಚಿನ ಚೌಕಾಶಿ ಸಾಮರ್ಥ್ಯವಿತ್ತು. ತಮ್ಮ ಈ ಲಾಭವನ್ನು ಕುಶಲರಲ್ಲದ ಕಾರ್ಮಿಕರನ್ನು ಉಳಿಸುವುದಕ್ಕಾಗಿ ತ್ಯಾಗ ಮಾಡಿ ಅವರಿಗೆ ಕೊನೆಗೆ ಇನ್ನು ಸಾಕು ಎನ್ನುವಂತಾಯಿತು 1890 ರ ಹೊತ್ತಿಗೆ ನೈಟ್ಸ್‌ಗಳ ಸಂಖ್ಯೆ ಕರಗಿ 1 ಲಕ್ಷಕ್ಕಿಳಿಯಿತು. ಇವರೂ ಕ್ರಮೇಣ 1890 ರ ದಶಕದ ಇತರ ಪ್ರತಿಭಟನಾ ಗುಂಪುಗಳೊಡನೆ ಸೇರಿ ಹೋದರು.

ಕಾರ್ಮಿಕರ ಪ್ರಭುತ್ವದಲ್ಲಿ

ರೇಗನ್ ಆಡಳಿತ ವಿಮಾನಯಾನ ಹತೋಟಿ ಕೆಲಸಗಾರರ ಸಂಘದ ಚಟುವಟಿಕೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಸಮಯದಲ್ಲೇ ಸೋವಿಯತ್ ಒಕ್ಕೂಟದಲ್ಲಿ ಗಣಿ ಕೆಲಸಗಾರರ ಸಂಘ ಕೆಲವು ಗಣಿಗಳ ಆಡಳಿತ ನಿರ್ವಾಹಕರು ಹಾಗೂ ಗಣಿಕೆಲಸಗಾರರ ನಡುವಿನ ವಿವಾದ ಪರಿಹರಿಸುವುದರಲ್ಲಿ ತೊಡಗಿತ್ತು. ಗಣಿಕೆಲಸಗಾರರನ್ನು ಸಾಕಷ್ಟು ಆರ್ಥಿಕ ಪರಿಹಾರ ನೀಡದೆ ಹೆಚ್ಚು ಸಮಯ ಕೆಲಸ ಮಾಡಿಸಲಾಗಿತ್ತು. ಇದು ಕಾರ್ಮಿಕ ಶಾಸನದ ಉಲ್ಲಂಘನೆ. ಕಾರ್ಮಿಕರ ಸಂಘದ ಒತ್ತಾಯದ (ಇದು ಕಾನೂನು ಬದ್ಧ ಹಕ್ಕು) ಪ್ರಕಾರ ಎಲ್ಲಾ ಗಣಿ ಕೆಲಸಗಾರರಿಗೆ ತಕ್ಕ ಪರಿಹಾರ ದೊರೆಯಿತು. ತಪ್ಪಿತಸ್ಥ ಆಡಳಿತ ನಿರ್ವಾಹಕರನ್ನು ಶಿಕ್ಷಿಸಲಾಯಿತು. ಅದರಲ್ಲಿ 150 ಮಂದಿಗೆ ದಂಡ ಹಾಗೂ ಇತರ100 ಮ್ಯಾನೇಜರುಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಯಿತು.

1982 ರಲ್ಲಿ ಕಾರ್ಮಿಕರು ತಮ್ಮ ಹಕ್ಕನ್ನು ಚಲಾಯಿಸಿ ಕಾರ್ಮಿಕರ ಹಿತಾಸಕ್ತಿಗಳ ವಿರುದ್ಧ ವರ್ತಿಸಿದ ಸುಮಾರು 10 ಸಾವಿರ ಆಡಳಿತ ನಿರ್ವಾಹಕರನ್ನು ಶಿಕ್ಷಿಸಿದ್ದಾರೆ.

ಳೆ ಉದ್ಭವಿಸಿದ ಸಂಗತಿಗಳಿಂದ ಹಲವಾರು ಅಂಶ
ಮೂಡಿಬರುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ
ಕ್ಷಿಪಸಲಾಗಿದೆ. ಮೊದಲನೆಯದಾಗಿ, ಚಿಕಾ
ದ ಕಾರ್ಮಿಕವರ್ಗ "ಕೆಂಬಾವುಟ" ಆಂದೋ
ನ ಪ್ರವರ್ತಕರಾದುದರಿಂದ ದಮನಕ್ಕೊಳಗಾಗ
. ವಾಸ್ತವವಾಗಿ ಅವರು 15 ವರ್ಷಗಳ
3 1871 ರಲ್ಲಿ ಪ್ರಥಮ ಕಾರ್ಮಿಕ ವರ್ಗದ
ಭುತ್ವವನ್ನು-ಪ್ಯಾರಿಸ್ ಕಮ್ಯೂನನ್ನು ಸ್ಥಾಪಿ
ಪ್ಯಾರಿಸಿನ ಕಾರ್ಮಿಕ ವರ್ಗಕ್ಕಿಂತ ಬಹಳ
ರದಲ್ಲಿದ್ದರು. ಪ್ಯಾರಿಸ್ ಕಮ್ಯೂನಾರ್ಡ್
ಎಷ್ಟೋ ಹೆಚ್ಚು ದಮನ ಸಹಿಸಬೇಕಾಗಿ
ತು. ಸಾವಿರಾರು ಜನರ ಪ್ರಾಣವನ್ನೇ ಅಪ
ಸಲಾಯಿತು. ಚಿಕಾಗೋ ಕಾರ್ಮಿಕರ
ಮೆಯ ದಿನಕ್ಕೆ ಶಾಸನಬದ್ಧ ಮಿತಿ ಹಾಕ
ಕೆಂಬ ಸುಧಾರಣೆಯ ಬೇಡಿಕೆಯನ್ನೇತ್ತಿದರಷ್ಟೆ.
ಬಹಳ ಮಹತ್ವದ್ದು. ಏಕೆಂದರೆ ನಮ್ಮಲ್ಲಿ
ವರಿಗೆ ಕೆಂಬಾವುಟ 1886 ರಲ್ಲಿ ಚಿಕಾಗೋ
ಹುಟ್ಟಿತು ಮುಂತಾಗಿ ಹೇಳುವ ಪ್ರವೃತ್ತಿ
. ಇಂತಹ ವಾದಗಳ ಜೊತೆಗೆ ಈ ಸಂಗಾತಿ
ಪ್ಯಾರಿಸ್ ಕಮ್ಯೂನ್, ಪ್ರಥಮ ಅಂತರ
ಷ್ಟ್ರೀಯ ಮುಂತಾದವುಗಳನ್ನು ಮರೆಗೆ ಸರಿ
ರೆ.

ಎರಡನೆಯದಾಗಿ, ಚಿಕಾಗೋ ಕಾರ್ಮಿ
, ಕೂಡಾ "ಪ್ರಜಾಪ್ರಭುತ್ವದ ಭದ್ರಕೋಟೆ"
ವಿಸಿದ ಅಮೆರಿಕಾ ಸಂಯುಕ್ತ ಸಂಸ್ಥಾನಗಳ
ಗರಿಕರಾಗಿದ್ದರು. 1886 ರಲ್ಲಿ "ಎಲ್ಲಾ ಮನು
ರು ಸಮಾನರಾಗಿ ಸೃಷ್ಟಿಯಾಗಿದ್ದಾರೆ,
ರು ಯಾರೂ ಕಸಿದುಕೊಳ್ಳಲಾರದ ಕೆಲವು
ಕ್ಕುಗಳನ್ನು ಸೃಷ್ಟಿಕರ್ತನಿಂದ ಪಡೆದಿದ್ದಾರೆ.
ಗಳಲ್ಲಿ ಜೀವನ, ಸ್ವಾತಂತ್ರ್ಯ ಹಾಗೂ
ತೋಷದ ಪ್ರಾಪ್ತಿಯ ಹಕ್ಕುಗಳು ಸೇರಿವೆ,
ಹಕ್ಕುಗಳನ್ನು ಪಡೆದುಕೊಳ್ಳಲು ಆಳಲ್ಪಡು
ರ ಒಪ್ಪಿಗೆಯಿಂದ ಬರುವ ನ್ಯಾಯಯುತ
ಕಾರಗಳು ಸರಕಾರಗಳನ್ನು ಮನುಷ್ಯರ ನಡುವೆ
ಪಿಸಲಾಗಿದೆ. ಯಾವಾಗ ಯಾವುದೇ ರೀತಿಯ
ರ್ಕಾರ ಈ ಉದ್ದೇಶಗಳನ್ನು ನಾಶಪಡಿಸು
ದೋ, ಆಗ ಅದನ್ನು ಬದಲಿಸುವುದು ಅಥವಾ
ದ್ದುಗೊಳಿಸುವುದು ಮತ್ತು ಹೊಸ ಸರ್ಕಾರ
ನ್ನು ಸ್ಥಾಪಿಸುವುದು, ತಮಗೆ ಸುರಕ್ಷಿತತೆ
ಗೂ ಸಂತೋಷವನ್ನು ಪ್ರಾಪ್ತಗೊಳಿಸುವುದು
ವುದರಿಂದ ಹೆಚ್ಚು ಸಾಧ್ಯವೆಂದೆನಿಸುವುದೋ
ಅಂತಹ ನೀತಿಗಳ ಮೇಲೆ ಈ ಹೊಸ ಸರ್ಕಾರದ
ಅಡಿಗಲ್ಲು ಹಾಕುವುದು ಜನತೆಯ ಹಕ್ಕು"
ಎಂದು ಅಮೆರಿಕನ್ ಸ್ವಾತಂತ್ರ್ಯದ ಘೋಷಣೆ
ಹೇಳುತ್ತದೆ.

ಚಿಕಾಗೋ ಕಾರ್ಮಿಕರು ಮೇಲೆ ಹೇಳಿದ ಪರಿಚ್ಛೇದದಲ್ಲಿ ಅಭಿವ್ಯಕ್ತಿಪಡೆದ ಮರಳುಗೊಳಿಸುವ ಮಾತಿನ ಬೂರ್ಜ್ವಾ ಪ್ರಜಾಪ್ರಭುತ್ವದ ಮೋಸಕ್ಕೆ ಒಳಗಾಗಿದ್ದರು

ಭ್ರಮೆ ಕುಸಿಯಿತು

ಎಂಗೆಲ್ಸ್ 1886ರ ಜೂನ್‌ನಲ್ಲಿ ಅಮೆರಿಕನ್ ವಿದ್ಯಾರ್ಥಿ ಕೆಲ್ಲಿ ವಿಷೆನ್‌ವೆಟ್ಸ್ಕಿಗೆ ಬರೆದ ಪತ್ರದಲ್ಲಿ ಹೇಳಿರುವಂತೆ ಅಮೆರಿಕಾ ಸಂಯುಕ್ತ

ಏಷ್ಯಾ ಖಂಡದಲ್ಲಿ ಜನತಾ ಪ್ರಜಾಪ್ರಭುತ್ವಗಳು

ಕೊರಿಯಾ

ದ್ವಿತೀಯ ಜಾಗತಿಕ ಯುದ್ಧದಲ್ಲಿ ಬರ್ಲಿನ್ ಪತನ ನಂತರ 1945ರ ಆಗಸ್ಟ್‌ನಲ್ಲಿ ಸೋವಿಯೆತ್ ಕೆಂಪುಸೇನೆ ಜಪಾನೀ ಮಿಲಿಟರಿ ಶಾಹಿಗಳನ್ನು ಮಣ್ಣು ಮುಕ್ಕಿಸಿದಾಗ ಕೊರಿಯಾ ವಸಾಹತುಶಾಹೀ ಆಳ್ವಿಕೆಯಿಂದ ವಿಮೋಚನೆಗೊಳಗಾದ ಅವಕಾಶ ಬಂದಿತ್ತು. ಆದರೆ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕುತಂತ್ರದಿಂದಾಗಿ ಕೊರಿಯಾ ಒಂದು ಐಕ್ಯ ಪ್ರಜಾಪ್ರಭುತ್ವ ದೇಶವಾಗುವುದು ಸಾಧ್ಯವಾಗಲಿಲ್ಲ. ಕೊರಿಯಾ ವಿಮೋಚನಾ ಹೋರಾಟಗಾರರು 1948ರ ಸೆಪ್ಟಂಬರ್ 9ರಂದು ಕೊರಿಯಾ ಪ್ರಜಾಪ್ರಭುತ್ವವಾದೀ ಜನತಾ ಗಣರಾಜ್ಯ ಘೋಷಿಸಿದಾಗ ಕೆಂಪು ಸೇನೆಯ ವಶದಲ್ಲಿದ್ದ ಪ್ರದೇಶದಲ್ಲಿ ಸೋವಿಯೆತ್ ಒಕ್ಕೂಟ ಅದಕ್ಕೆ ಮಾನ್ಯತೆ ನೀಡಿತು. ಉಳಿದ ಭಾಗ ಅಂದರೆ ದಕ್ಷಿಣ ಕೊರಿಯಾದಲ್ಲಿ ಮುಂದೆ 1948ರಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೈಗೊಂಬೆ ಸರ್ಕಾರ ಪ್ರತಿಷ್ಠಾಪಿಸಲ್ಪಟ್ಟಿತು. ಈಗ ಕೊರಿಯಾದ ಉತ್ತರ ಭಾಗದ ಜನ ಸಮಾಜವಾದೀ ರಚನೆಯಲ್ಲಿ ತೊಡಗಿದ್ದರೆ ದಕ್ಷಿಣ ಭಾಗದ ಜನ ಸಾಮ್ರಾಜ್ಯಶಾಹೀ ದಮನದ ವಿರುದ್ಧ ಹೋರಾಡುತ್ತಿದ್ದಾರೆ.

ಲಾವೋಸ್

ಜಪಾನೀ ಮಿಲಿಟರಿಶಾಹಿಗಳ ವಿರುದ್ಧ ಸೋವಿಯೆತ್ ಕೆಂಪು ಸೇನೆಯ ಫಲವಾಗಿ ವಸಾಹತುಶಾಹೀ ಆಳ್ವಿಕೆಯಿಂದ ಸ್ವತಂತ್ರಗೊಂಡ ಇನ್ನೊಂದು ದೇಶ ಲಾವೊಸ್. ಅಕ್ಟೋಬರ್ 12, 1945 ರಂದು ಅದು ಸ್ವತಂತ್ರವಾಯಿತು. ಆದರೆ ಜನಪರ ಸರಕಾರ ರಚನೆಗೊಳ್ಳಲಿಲ್ಲ ರಾಜಪ್ರಭುತ್ವ, ಆಂತರಿಕ ಪ್ರತಿಗಾಮಿಗಳ ಆಳ್ವಿಕೆ ಮುಂದುವರೆಯಿತು. ಸಾಮ್ರಾಜ್ಯಶಾಹಿಗಳು ಹಾಗೂ ಅವರ ಹಿಂಬಾಲಕರ ಕ್ರೂರ ಹಲ್ಲೆಗಳನ್ನು ಎದುರಿಸಬೇಕಾಯಿತು. ಮಾರ್ಚ್ 1955ರಲ್ಲಿ ಸ್ಥಾಪನೆಗೊಂಡ ಲಾವೊ ಜನತಾ ಕ್ರಾಂತಿಕಾರೀ ಪಕ್ಷದ ನೇತೃತ್ವದಲ್ಲಿ ಕಾರ್ಮಿಕವರ್ಗ ಹಾಗೂ ರೈತಾಪಿಗಳ ಸಖ್ಯತೆಯ ಆಧಾರದ ಮೇಲೆ ಸಶಸ್ತ್ರ ಹೋರಾಟ ನಡೆದು ಡಿಸೆಂಬರ್ ?, 1975ರಲ್ಲಿ ಜನತಾ ಪ್ರತಿನಿಧಿಗಳ ರಾಷ್ಟ್ರೀಯ ಅಧಿವೇಶನ ರಾಜಪ್ರಭುತ್ವವನ್ನು ರದ್ದುಮಾಡಿ "ಲಾವೊ ಜನತಾ ಪ್ರಜಾಪ್ರಭುತ್ವ ಗಣರಾಜ್ಯ"ದ ಘೋಷಣೆ ಮಾಡಿತು.

ಕಂಪೂಚಿಯಾ

1863 ರಿಂದ ಫ್ರೆಂಚ್ ಅಧೀನ ರಾಜಪ್ರಭುತ್ವವಾಗಿದ್ದ ಕಂಬೋಡಿಯಾ 1954ರಲ್ಲಿ ಸ್ವತಂತ್ರಗೊಂಡರೂ ರಾಜಪ್ರಭುತ್ವ ಮುಂದುವರಿಯಿತು. ರಾಜನ ಕ್ರೂರ ದಮನದಿಂದ ದೇಶದಲ್ಲಿ ಒಂದು ಗಂಭೀರವಾದ ಆರ್ಥಿಕ, ಸಾಮಾಜಿಕ ಬಿಕ್ಕಟ್ಟು ಉಂಟಾಯಿತು 1970 ರಲ್ಲಿ ಅಮೆರಿಕಾ-ಪರ ಸೇನಾಧಿಕಾರಿಯಾಗಿದ್ದ ಲೊನ್ ನೊಲ್ ಕ್ಷಿಪ್ರಕ್ರಾಂತಿ ನಡೆಸಿ ರಾಜಸಿಹನೂಕ್‌ನನ್ನು ಪದಚ್ಯುತಗೊಳಿಸಿ ಖ್ಮೇರ್ ಗಣತಂತ್ರ ರಚಿಸಿದ ನಂತರ ದೇಶ ಅಮೆರಿಕನ್ ಸೇನೆಗಳ ಆಕ್ರಮಣಕಾರೀ ಯುದ್ಧದಲ್ಲಿ ಸಿಲುಕಿಕೊಂಡಿತು. ಜನತೆಯ ಐದು ವರ್ಷಗಳ ಹೋರಾಟದ ನಂತರ 1975 ಏಪ್ರಿಲ್‌ನಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಸೋತುಹೋದರು. ಆದರೂ ಪೊಲ್‌ಪೋಟ್‌ನ ಆಳ್ವಿಕೆಯಿಂದಾಗಿ ಕಂಪೂಚಿಯಾದ ಜನತೆ ಶಾಂತಿಯುತ ಪುನರ್‌ರಚನೆಯಲ್ಲಿ ತೊಡಗಲು ಸಾಧ್ಯವಾಗಲಿಲ್ಲ. "ಕಂಪೂಚಿಯಾ ರಾಷ್ಟ್ರೀಯ ಮುಕ್ತಿರಂಗ" ನೇತೃತ್ವದಲ್ಲಿ ಕೊನೆಗೂ ಜನವರಿ 7, 1979 ರಲ್ಲಿ ವಿಯೆಟ್ನಾಮಿ ಸಂಗಾತಿಗಳ ನೆರವಿನಿಂದ ದುಡಿಯುವ ಜನರ ಪ್ರಭುತ್ವ ಸ್ಥಾಪನೆಗೊಂಡಿತು.

ಸಂಸ್ಥಾನಗಳ ವರ್ಗಕ್ರಾಂತಿಯನ್ನು ಈ ಬೆಳವಣಿಗೆಗಳು ಪುಡಿಪುಡಿಗೈದವು. ಎಂಗೆಲ್ಸ್ ಹೀಗೆ ಬರೆದಿದ್ದರು—

“ಅಮೇರಿಕಾ ವರ್ಗ ವೈಷಮ್ಯ ಹಾಗೂ ಹೋರಾಟಗಳಿಂದ ಮೇಲೆದ್ದು ನಿಂತಿದೆ ಎಂಬ ನಮ್ಮ ಹಾಗೂ ನಿಮ್ಮ-ಬೂರ್ಜ್ವಾ ವಿಚಾರ,-ಅಭ್ರಮೆ ಈಗ ಮುರಿದು ಬಿದ್ದಿದೆ ಭೂಮಿಯ ಮೇಲಿನ ಕೊನೆಯ ಬೂರ್ಜ್ವಾ ಸ್ವರ್ಗ ಬಹಳ ವೇಗದಲ್ಲಿ ಒಂದು ಪ್ರಾಯಶ್ಚಿತ್ತ ಪಡೆಯುವ ಸ್ಥಳವಾಗಿ ಬದಲಾಗುತ್ತಿದೆ. ಅವರು (ಅಮೆರಿಕಾದ ಕಾರ್ಮಿಕ ವರ್ಗ) ಇಟ್ಟಿಕ್ಕಿದ್ದಂತೆ ಸಮಸ್ತ ಬಂಡವಾಳಶಾಹಿ ವರ್ಗದಲ್ಲಿ ಭೀತಿ ಹುಟ್ಟಿಸುವ ರೀತಿಯ ಸಂಘಟಿತ ಜನಸಮೂಹವಾಗಿ ಕಾಣಬರುತ್ತಿದ್ದಾರೆ”.

ಅಮೆರಿಕಾದ ಆಳುವ ವರ್ಗಗಳು ವಿಶ್ವದ ಇತರೆಡೆಯ ಆಳುವ ವರ್ಗಗಳಂತೆಯೇ ಕಾನೂನು ಸುಧಾರಣೆಯ ಒಂದು ಒತ್ತಾಯವನ್ನು ದಮನ ಮಾಡುವಲ್ಲಿ ಯಾವ ಅಳುಕನ್ನೂ ತೋರ್ಪಡಿಸಲಿಲ್ಲವೆಂಬ ಸಂಗತಿ ರಾಷ್ಟ್ರಪ್ರಭುತ್ವದ, ಎಲ್ಲಾ ನಾಗರಿಕರನ್ನೂ ರಾಷ್ಟ್ರಪ್ರಭುತ್ವ ಸಮಾನವಾಗಿ ಕಾಣುತ್ತದೆ ಎಂಬ ಮಿಥ್ಯೆಯನ್ನು ಬಯಲಿಗೆಳೆಯುತ್ತದೆ. ವಾಸ್ತವವಾಗಿ ಪ್ರಭುತ್ವ ಯಂತ್ರ ಪ್ರಬಲ ವರ್ಗದ ಕೈಗಳಲ್ಲಿರುವ ಚಿಕಾಗೋ ಕಾರ್ಮಿಕರ ಸಂದರ್ಭದಲ್ಲಿ ಆ ಕಾಲದ ಕೈಗಾರಿಕಾ ಬಂಡವಾಳಶಾಹಿಗಳ ಕೈಗಳಲ್ಲಿನ “ದಮನದ ಸಾಧನ” ವಲ್ಲದೆ ಬೇರೇನೂ ಅಲ್ಲ ಎಂದು ಮಾರ್ಕ್ಸ್‌ವಾದ ನಮಗೆ ಕಲಿಸುತ್ತದೆ. ಬೂರ್ಜ್ವಾ ವರ್ಗದ ಪ್ರಭುತ್ವವನ್ನು ಒಡೆದು ತನ್ನದೇ ಪ್ರಭುತ್ವವನ್ನು ಕಟ್ಟಿದಾಗ ಮಾತ್ರ ಕಾರ್ಮಿಕ ವರ್ಗ ತನ್ನನ್ನು ಹಾಗೂ ಇತರ ಎಲ್ಲಾ ಶೋಷಿತ ವರ್ಗಗಳನ್ನು ದಾಸ್ಯದಿಂದ ಬಿಡುಗಡೆ ಮಾಡಲು ಸಾಧ್ಯ, ಎಂದು ಕೂಡಾ ಮಾರ್ಕ್ಸ್‌ವಾದ ನಮಗೆ ಕಲಿಸುತ್ತದೆ. ಇದನ್ನು ಕಾರ್ಮಿಕ ವರ್ಗದ ಒಂದು ಕ್ರಾಂತಿಕಾರೀ ಪಕ್ಷ ಮಾತ್ರವೇ ಮಾಡಬಲ್ಲುದು. ಕೇವಲ ಕಾರ್ಮಿಕರ ಆಂದೋಲನ ಮಾಡಲಾರದು. ಮತ್ತು ಕ್ರಾಂತಿಕಾರೀ ಪಕ್ಷವಂತೂ ಸದಾ ಆಳುವ ವರ್ಗಗಳಿಂದ ದಾಳಿಯನ್ನೆದುರಿಸಬೇಕಾದ ಪಕ್ಷ. ಆಳುವ ವರ್ಗಗಳು ಮೊದಲು ಕಾರ್ಮಿಕ ಸಂಘ ಆಂದೋಲನವನ್ನು ಸದೆಬಡಿಯಲು ಪ್ರಯತ್ನಿಸುತ್ತಾರೆ. ಅದರಲ್ಲಿ ವಿಫಲವಾದಾಗ ತಮಗೆ ಅನುಕೂಲವಾದ ಒಂದು ಕಾರ್ಮಿಕ ಆಂದೋಲನವನ್ನು ಒಂದು ಸುಧಾರಣಾವಾದಿ ಆಂದೋಲನವನ್ನು ಸೃಷ್ಟಿಸುತ್ತಾರೆ. ಅಮೆರಿಕನ್ ಬೂರ್ಜ್ವಾ ವರ್ಗ ಕೂಡಾ ಇದನ್ನೇ ಮಾಡಿದ್ದು. ಸಕ್ರಿಯ ರಾಜಕಾರಣದಿಂದ ತಪ್ಪಿಸಿ, ವರ್ಗ ಕಾಮ್ರೇಲಿಗೆ ಸೀಮಿತಗೊಳಿಸಿ ಬೂರ್ಜ್ವಾ ವರ್ಗದ ರೀತಿಯಲ್ಲೇ ಒಂದು ಕಾರ್ಮಿಕ ಆಂದೋಲನವನ್ನೂ ಸೃಷ್ಟಿಸುವಲ್ಲಿ ಅವರು ಯಶಸ್ವಿಯಾದರು.

ಈ ರೀತಿ ಕಾರ್ಮಿಕ ಆಂದೋಲನದ ದಮನ ಮತ್ತು ಬೂರ್ಜ್ವಾ ವರ್ಗಕ್ಕೆ ಅನುಕೂಲಕರವಾದ ಒಂದು ಕಾರ್ಮಿಕ ಆಂದೋಲನದ ಸೃಷ್ಟಿ ಅಮೇರಿಕದ ಬೂರ್ಜ್ವಾ ವರ್ಗ ಬಂಡವಾಳಶಾಹಿಯ ಅತ್ಯುನ್ನತ ಘಟ್ಟವಾದ ಸಾಮ್ರಾಜ್ಯಶಾಹೀ ಹಂತಕ್ಕೆ ವೇಗದಿಂದ ಬಂದು ತಲುಪಲು ನೆರವಾಯಿತು. ಬ್ರಿಟನ್, ಫ್ರಾನ್ಸ್, ಹಾಲೆಂಡ್ ಮುಂತಾದ ಮೆಟ್ರೊಪಾಲಿಟನ್ ದೇಶಗಳ ಬೂರ್ಜ್ವಾವರ್ಗ ವಸಾಹತು ಶಾಹಿಯ ಘಟ್ಟವನ್ನು ಹಾದು ಹೋಗಬೇಕಾಗಿ ಬರಲಿಲ್ಲ. ವಾಸ್ತವವಾಗಿ ಅವರ ಪ್ರಭುತ್ವ ಹದಿನೆಂಟನೇ ಶತಮಾನದಲ್ಲಿ ವಸಾಹತುಶಾಹಿ ವಿರುದ್ಧ ಹೋರಾಟದಲ್ಲೇ ಸ್ಥಾಪನೆಗೊಂಡಿತು. ಇಷ್ಟರ ಮಟ್ಟಿಗೆ ನಾವು ಮೇಲೆ ಉಧಾರಿಸಿದ ಘೋಷಣೆ ಪ್ರಗತಿಪರ ವಿಚಾರಗಳನ್ನು ಹೊಂದಿದೆ. ಆದರೆ ಇಂದು ಜನತೆಯ ಹಕ್ಕುಗಳೆಂದು ಯಾವುದನ್ನೂ ಅವರು ಹೇಳುತ್ತಾರೋ ಆ ಹಕ್ಕುಗಳನ್ನೂ ನಿರಾಕರಿಸುವ, ಲಿಬ್ಯಾ ಹಾಗೂ ಇತರ ಹಲವಾರು ದೇಶಗಳ ಜನತೆಗೆ ನಿರಾಕರಿಸುತ್ತಿರುವುದನ್ನೂ ಕಾಣುತ್ತೇವೆ. ಅವರು ವಿಯೆಟ್ನಾಂನಿಂದ ಏನೂ ಪಾಠ ಕಲಿಯಲಿಲ್ಲ. ಚಿಕಾಗೋದ ಪೋಲೀಸ್‌ನವರು ಕಾರ್ಮಿಕವರ್ಗದ ವಿರುದ್ಧ ಹೇಗೆ ವರ್ತಿಸಿದರೋ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರ ವಿಶ್ವಾದ್ಯಂತ ಅದೇ ರೀತಿ ವರ್ತಿಸುತ್ತಿದೆ. ಇದು ಸದ್ಯದ ಕಾಲದಲ್ಲಿ ವರ್ಗ. ಹೋರಾಟಗಳ ಮುಂದು ವಂಕೆ ಹಾಗೂ ಆಯಾಮಗಳನ್ನೂ ತೋರಿಸಿಕೊಡುತ್ತದೆ.

ಸಮರಧೀರ ಪರಂಪರೆ

ಸಮರಧೀರ ಕಾರ್ಮಿಕ ಆಂದೋಲನದ ಪರಂಪರೆಯನ್ನು ವಿಶ್ವದ ಕಾರ್ಮಿಕ ವರ್ಗ ಮುಂದುವರಿಸಿತು. ಚಿಕಾಗೋ ಕಾರ್ಮಿಕ ಹೋರಾಟದ ಒಂದು ನೂರು ವರ್ಷಗಳ ನಂತರ ಜಗತ್ತು ಇಂದು ತುಂಬಾ ಭಿನ್ನವಾಗಿದೆ. ವಿಶ್ವದ
ಮೂರನೇ ಒಂದು ಭಾಗದಲ್ಲಿ ಕಾರ್ಮಿಕ
ಬೂರ್ಜ್ವಾ ವರ್ಗದ ಆಳ್ವಿಕೆಯನ್ನು ಕಿತ್ತೊಗೆ
ಚಿಕಾಗೋ ಹೋರಾಟದ ಕೇವಲ ಮೂ
ವರ್ಷಗಳ ನಂತರ ರಷ್ಯಾದಲ್ಲಿ ಮಹಾನ್ ಅಕ್
ಬರ್ ಕ್ರಾಂತಿ ಸಂಭವಿಸಿತು. ಈ ಕ್ರಾಂ
ಫಲವಾಗಿ ಸ್ಥಾಪನೆಗೊಂಡ ಸೋವಿಯ
ಒಕ್ಕೂಟ ಈಗ ಸುಮಾರು ಎಪ್ಪತ್ತು ವರ್ಷಗಳ
ಪೂರ್ಣಗೊಳಿಸುತ್ತಿದೆ. ಸೋವಿಯೆತ್ ಒ
ಟದ ಸಾಹಸೀ ಕಾರ್ಮಿಕ ವರ್ಗ ಈ ಭೂಮಿ
ಮೊಗವನ್ನೇ ಬದಲಿಸಿದೆ.

ಸಮಾಜವಾದ ಕೇವಲ ಒಂದು ಕಾಲ್ಪ
ಸ್ವರ್ಗವಲ್ಲ. ಮಾನವ ಸಮಾಜದ ಬೆಳವ
ಯಲ್ಲಿ ಒಂದು ವಾಸ್ತವ ಘಟ್ಟ ಎಂಬುದ
ಅವರು ಸಾಧಿಸಿ ತೋರಿದ್ದಾರೆ. ಅಂ
ವಾಗಿ ಬಂಡವಾಳಶಾಹಿಯಿಂದ ಮುಕ್ತ
ಆದರಿಂದಾಗಿ ಬಡತನ, ನಿರುದ್ಯೋಗ, ಹ
ಹಾಗೂ ಸಾವಿನಿಂದ ಮುಕ್ತವಾ
ಒಂದು ಸಮಾಜವನ್ನು ಸೃಷ್ಟಿಸಿದ್ದಾರೆ. ನ
ಸೂಕ್ತ ಬದಲಾವಣೆಯೊಂದಿಗೆ ಅನು
ದಾದ ಒಂದು ಮಾದರಿಯನ್ನು ಅವರು ಸೃ
ದ್ದಾರೆ. ಸೋವಿಯತ್ ಒಕ್ಕೂಟವ
ಭೂಮಿಯ ಮೇಲಿಂದಲೇ ಅಳಿಸಿ ಬಿಡುವ ಅ
ರಾಷ್ಟ್ರೀಯ ಬಂಡವಾಳಶಾಹಿಗಳ ಪಿತೂರಿ ಹಿ
ನನ್ನೂ ಹಾಗೂ ನಾಝಿ (ರಾಷ್ಟ್ರೀಯ ಸಮಾ
ವಾದಿ) ಗಳನ್ನು ಸೃಷ್ಟಿಸಿತು. ಸೋವಿಯೆ
ಒಕ್ಕೂಟವನ್ನು ನುಚ್ಚುನೂರುಗೊಳಿ
ಉದ್ದೇಶದಿಂದ ಅವರು ಹಿಟ್ಲರನನ್ನು ಸಜ್ಜುಗೊ
ಸಿದರು. ಆದರೆ ಸೋವಿಯೆತ್ ಒಕ್ಕೂ
ನಾಝಿಗಳನ್ನು ತನ್ನ ಮಣ್ಣಿನಿಂದ ಹೊಡೆದೊ
ಸಿದ್ದು ಮಾತ್ರವಲ್ಲ ಪೋಲೆಂಡ್, ಜೆಕೋಸ
ವಾಕಿಯಾ, ಹಂಗೇರಿ, ರೊಮೆನಿಯಾ, ಯು
ಸ್ಲಾವಿಯಾ ಮುಂತಾದವುಗಳನ್ನೂ, ನಾಝಿಗ
ವಿಮೋಚನೆಗೊಳಿಸಿತು. ಕೆಂಪು ಸೇನೆ ಬರ್ಲಿ
ನಗರದವರೆಗೆ ಸಾಗಿ ನಾಝಿ ಯುದ್ಧ ಯಂತ್ರವ
ಉರುಳಿಸಿ ಹಿಟ್ಲರನ ಆತ್ಮಹತ್ಯೆಗೆ ಹ
ಫ್ಯಾಸಿಸಂನಿಂದ ಜರ್ಮನಿಯ ವಿಮೋಚನೆಗೆ ದ
ಮಾಡಿಕೊಟ್ಟಿತು ಆದರ ಈ ಚಾರಿತ್ರಿಕ ಸಾ
ನಡೆದದ್ದು 1945ರ ಮೇ ದಿನದಂದು. ಸಮಾ
ವಾದೀ ಪ್ರಭುತ್ವವನ್ನು ನುಚ್ಚುನೂರಾಗಿ
ಜಾಗತಿಕ ಸಾಮ್ರಾಜ್ಯಶಾಹಿ ಆರಂಭ
ದ್ವಿತೀಯ ಮಹಾಯುದ್ಧ ಹಲವು ದೇಶಗಳ

...ಮಾಜವಾದೀ ಬಣವನ್ನು ಸೃಷ್ಟಿಸಿ ಕೊನೆಗೊಂಡಿ... ದ್ವಿತೀಯ ಮಹಾಯುದ್ಧದ ಬೆನ್ನ... ದ್ದಿಯೇ ಮುಂದುವರಿದ ರಾಷ್ಟ್ರೀಯ ವಿಮೋ... ಆಂದೋಲನ ಚೀನಾ, ಕೊರಿಯಾ ...ಜಾಸತ್ತಾತ್ಮಕ ಜನತಾ ಗಣರಾಜ್ಯ, ನಂತರ ...ಯೆಟ್ನಾಂ, ಲಾವೋಸ್ ಮತ್ತು ಕಾಂಬೋ... ...ಯಾವನ್ನು ವಿಮೋಚನೆಗೊಳಿಸಿತು. ಕ್ಯೂಬಾದ ...ಕ್ರಾಂತಿ ಅಮೇರಿಕನ್ ಸಾಮ್ರಾಜ್ಯ... ...ಗಳ ಮೂಗಿನಡಿಯಲ್ಲೇ ಒಂದು ಸಮಾಜ... ...ದೀ ಪ್ರಭುತ್ವ ಸ್ಥಾಪಿಸಿತು. ಇಂದು ಇಥಿಯೋ... ...ಯಾ, ಅಂಗೋಲಾ, ಮೊಝಾಂಬಿಕ್ ...ಂತಾದ ಹಲವಾರು ದೇಶಗಳು ಸಮಾಜವಾದೀ ...ಗಳನ್ನು ಅನುಸರಿಸಿ ಸಾಮ್ರಾಜ್ಯಶಾಹಿಗಳಿಂದ ...ವಿಮೋಚನೆ ಸಾಧಿಸಿವೆ.

ಸಮಾಜವಾದೀ ಬಣ ಜಾಗತಿಕ ಕಾರ್ಮಿಕ ...ಕ್ಕೆ ಅನುಕರಣೀಯ ಮಾದರಿ ಹಾಕಿಕೊಟ್ಟ... ಅಲ್ಲ, ರಾಷ್ಟ್ರೀಯ ವಿಮೋಚನಾ ಆಂದೋ... ...ಕ್ಕೆ ಅದರ ಬೆಂಬಲ ವಸಾಹತುಶಾಹಿಯ ...ಮ ಚಿಹ್ನೆಗಳನ್ನು ಕೂಡಾ ಉರುಳಿಸಿ ಬಿಟ್ಟಿದೆ. ...ಡವಾಳಶಾಹೀ ದೇಶಗಳ ಕಾರ್ಮಿಕ ವರ್ಗದ ...ದೋಲನವೂ ಶಕ್ತಿಗೂಡಿಸಿಕೊಳ್ಳುತ್ತಿದೆ. ಹೀಗೆ ...ಅಂತರ್ರಾಷ್ಟ್ರೀಯ ಕಾರ್ಮಿಕದಿನದ ಈಶತಮಾನೋ... ...ದಂದು ಸಮಾಜವಾದೀ ಬಣ ಹಾಗೂ ಬಂಡ... ...ಳಶಾಹೀ ಜಗತ್ತಿನ ಕ್ರಾಂತಿಕಾರೀ ವಿಭಾಗಗಳು ...ಸ್ಪರ ಬಲಪಡಿಸಿಕೊಂಡು ಕಾರ್ಮಿಕ ವರ್ಗದ ...ಅಂತರ್ರಾಷ್ಟ್ರೀಯತೆಯಸ್ಫೂರ್ತಿಯಲ್ಲಿಬೆಳೆಯುತ್ತಿವೆ.

...ಗತಿಕ ವರ್ಗ ಸಮರ

ಆದರೆ ಸಮಾಜವಾದೀ ಶಕ್ತಿಗಳು ಬಲ...ಸಿಕೊಳ್ಳುತ್ತಿರುವಂತೆಅಮೇರಿಕಾದ ನೇತೃತ್ವದ ...ಮ್ರಾಜ್ಯಶಾಹೀ ಬಣ ಒಂದೆಡೆ ಪರಮಾಣು ...ಯುದ್ಧಕ್ಕೆ ತರಾತುರಿಯಿಂದ ಸಿದ್ಧತೆ ನಡೆಸುತ್ತಿದೆ ...ತ್ತು ಇನ್ನೊಂದೆಡೆ ನವ್ಯಂತಹ ದೇಶಗಳನ್ನು ...ಗೊಳಿಸಲು, ಕಾರ್ಮಿಕ ಆಂದೋಲನವನ್ನು ...ಚಿಸಲು ಯತ್ನಿಸುತ್ತಿದೆ.

ಅಮೇರಿಕಾ ಸಂಯುಕ್ತ ಸಂಸ್ಥಾನ ವಿಶ್ವದ ...ಲೀಸನಾಗುವ ಈ ಮಟ್ಟಕ್ಕೆ ಹೇಗೆ ಬೆಳೆಯಿತು ...ಬುದನ್ನು ಅರ್ಥಮಾಡಿಕೊಳ್ಳಲು ಕೆಲವು ವಿವರ ...ಅಗತ್ಯ.

ಎಂಗೆಲ್ಸ್ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ ...೦ ರ ಆವೃತ್ತಿಯ ಮುನ್ನುಡಿಯಲ್ಲಿ ಅಮೇರಿಕಾ ...ತು. ಲಂಡನ್‌ನಲ್ಲಿ 21-1-1882 ರಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ನೀಡಿದ ಹೇಳಿಕೆಯಿಂದ ಒಂದು ಪಂಕ್ತಿಯನ್ನು ಉದ್ಧರಿಸಿದ್ದಾರೆ. ಅದು ಹೀಗಿದೆ –

"ಇಂದು ಏಷ್ಟೊಂದು ಭಿನ್ನ! ಯುರೋಪಿನಿಂದ ವಲಸೆಯೇ ಉತ್ತರ ಅಮೇರಿಕಾವನ್ನು ಒಂದು ದೈತ್ಯಗಾತ್ರದ ಕೃಷಿ ಉತ್ಪಾದನೆಗೆ ಅನುವು ಮಾಡಿಕೊಟ್ಟಿದ್ದು. ಅದರದೆ ಸ್ಪರ್ಧೆ ಈಗ ಯುರೋಪಿನ ದೊಡ್ಡ ಹಾಗೂ ಸಣ್ಣ – ಜಮೀನು ಆಸ್ತಿಯ ಬುಡವನ್ನೇ ಅಲ್ಲಾಡಿಸುತ್ತಿದೆ. ಜತೆಗೆ ಅದೇ ಅಮೇರಿಕಾ ಸಂಯುಕ್ತ ಸಂಸ್ಥಾನ ತನ್ನ ಕೈಗಾರಿಕಾ ಸಂಪನ್ಮೂಲಗಳನ್ನು ಕೆಲವೇ ಸಮಯದೊಳಗೆ ಪಶ್ಚಿಮ ಯುರೋಪಿನ, ವಿಶೇಷವಾಗಿ ಇದುವರೆಗೆ ಇರುವ ಇಂಗ್ಲೆಂಡಿನ ಕೈಗಾರಿಕಾ ಗುತ್ತೇದಾರಿಕೆಯನ್ನು ಮುರಿಯಲು ಸಾಧ್ಯವಾಗುವಷ್ಟು ಬೃಹತ್ ಪ್ರಮಾಣದಲ್ಲಿ ಹಾಗೂ ಶಕ್ತಿಯೊಂದಿಗೆ ಪೂರ್ಣವಾಗಿ ಬಳಸಿಕೊಳ್ಳಲು ಕೂಡಾ ಅನುವು ಮಾಡಿಕೊಟ್ಟಿತು. ಇವೆರಡೂ ಸಂದರ್ಭಗಳು ಸ್ವತಃ ಅಮೇರಿಕಾದ ಮೇಲೂ ಕ್ರಾಂತಿಕಾರೀ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿವೆ. ಹಂತ ಹಂತವಾಗಿ ರೈತರ ಸಣ್ಣ ಹಾಗೂ ಮಧ್ಯಮ ಭೂ ಒಡೆತನ, ಸಮಸ್ತ ರಾಜಕೀಯ ಸಂವಿಧಾನದ ಆಧಾರವೇ ದೈತ್ಯಗಾತ್ರದ ಫಾರ್ಮ್‌ಗಳ ಪ್ರತಿಸ್ಪರ್ಧೆಯೆದುರು ಕುಸಿಯುತ್ತಿದೆ. ಅದೇ ಕಾಲದಲ್ಲಿ, ಕೈಗಾರಿಕಾ ವಲಯಗಳಲ್ಲಿ ಮೊತ್ತಮೊದಲ ಬಾರಿಗೆ ಕಾರ್ಮಿಕ ವರ್ಗದ ಒಂದು ಜನ ಸಮೂಹ ಹಾಗೂ ಬಂಡವಾಳದ ಅಗಾಧ ಕೇಂದ್ರೀಕರಣ ಬೆಳೆಯುತ್ತಿದೆ."

ಮಹಾ ಯುದ್ಧ ನಂತರ ನಡೆದ ವಸಾಹತುಶಾಹಿಯ ಕುಸಿತದಲ್ಲಿ ಕೂಡಾ ಅ. ಸಂ. ಸಂ. ಪ್ರಜಾಪ್ರಭುತ್ವದ ಭಾಷೆಯಲ್ಲಿ ಮಾತನಾಡಿದ್ದನ್ನು ನಾವು ಕಂಡಿದ್ದೇವೆ. ಇದಕ್ಕೆ ಕಾರಣ ಬ್ರಿಟನ್ ಮುಂತಾದವುಗಳನ್ನು ಹಿಂದೂಡಿ ಅವುಗಳ ಸ್ಥಾನದಲ್ಲಿ ತಾನು ಕಾಲಿಡುತ್ತಿದ್ದುದೇ ಆಗಿದೆ. ಈಗ ನವ ವಸಾಹತು ಶಾಹೀ ಮಿಲಿಟರಿ ಕೂಟ ಮುಂತಾದವುಗಳ ಮೂಲಕ ತನ್ನ ಜಾಗತಿಕ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೇಲೆ ಅಮೇರಿಕಾ ಒಂದೆಡೆ ಈ ಹಿಂದಿನ ದೊಡ್ಡ ಬಂಡವಾಳ ಶಾಹೀ ದೇಶಗಳೂ ಸೇರಿದಂತೆ ಜಗತ್ತನ್ನು ತನ್ನ ಬಹು ರಾಷ್ಟ್ರೀಯ ಕಂಪನಿಗಳ ಹಾಗೂ ಮಿಲಿಟರಿ ಶಕ್ತಿಯ ಮೂಲಕ ಆಳುತ್ತಿದೆ ಹಾಗೂ ಇನ್ನೊಂದೆಡೆ ಅದು ಆಂದೋಲನಗಳನ್ನು, ಸರಕಾರಗಳನ್ನು ಪರೋಕ್ಷವಾಗಿ ಛಿದ್ರಗೊಳಿಸುತ್ತಿದೆ ಇದಕ್ಕೆ ವಿಚ್ಛಿದ್ರಕಾರೀ ಶಕ್ತಿಗಳನ್ನು ಬಳಸಿ ಕಾರ್ಮಿಕ ವರ್ಗದ ಪಕ್ಷಗಳೂ ಸೇರಿದಂತೆ ರಾಜಕೀಯ ಆಂದೋಲನಗಳನ್ನು, ಕಾರ್ಮಿಕ ಆಂದೋಲನಗಳನ್ನು ದಿಕ್ಕು ತಪ್ಪಿಸುವ ದುಮುಂತಾದ ಕೆಲವು ವಿಧಾನಗಳನ್ನು ಅದು ಉಪಯೋಗಿಸುತ್ತಿದೆ. ಇದನ್ನು ಅರ್ಥಮಾಡಿಕೊಳ್ಳಲು ಈ ಲೇಖನ ಮಾಲೆಯಲ್ಲಿ ಮುಂದೆ ಸಾಮ್ರಾಜ್ಯಶಾಹಿಯ ಕೈವಾಡವನ್ನು ಬಯಲಿಗೆಳೆಯಲಾಗುವುದು ಮತ್ತು ಕಾರ್ಮಿಕ ವರ್ಗ ಇಂದು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ವಿವರಿಸಲಾಗುವುದು.

ಚಿಕಾಗೋ ಕಾರ್ಮಿಕರು 1886 ರಲ್ಲಿ ನಡೆಸಿದ ವರ್ಗ ಹೋರಾಟದ ಒಂದು ಪುಟ್ಟ ಘಟನೆಯೇ ಆಗಲಿ ಅಥವಾ ಸಮಾಜವಾದ ಮತ್ತು ಸಾಮ್ರಾಜ್ಯಶಾಹಿಯ ನಡುವಿನ ವೈರುಧ್ಯಗಳ ಜಾಗತಿಕ ಮಟ್ಟದ ವರ್ಗ ಹೋರಾಟವಾಗಲಿ ಅದರಲ್ಲಿ ಪ್ರಾಬಲ್ಯ ಮೆರೆಸುವ ಕೈಗಳೆಂದರೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಆಳುವ ವರ್ಗಗಳಕೈಗಳು ಎಂಬುದನ್ನು ನಾವು ನೋಡಿದ್ದೇವೆ. ಇದನ್ನು ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ ಇದಕ್ಕಿಂತಲೂ ಹೆಚ್ಚು ಶಕ್ತಿಶಾಲಿ ಹಾಗೂ ದೃಢ ಕೈಗಳಿಂದ ಎದುರಿಸಬೇಕಾಗಿದೆ.

ಕಾದು ನಿಂತಿದೆ ಮೇ ದಿನ

ನೂರು ವರುಷದ ಹಿಂದೆ
ಮಾಲಕರ ಗುಂಡುಗಳು
ಶೋಷಿತರ ಗುಂಡಿಗೆಯ ಸೀಳಿ
ನೆತ್ತರ ಚಿಲುಮೆಗಳ
ಚಿಲ್ಲನೆ ಚಿಮ್ಮಿಸಿದಾಗ
ಚಿಕಾಗೋದ ಬೀದಿಗಳಲ್ಲಿ
ಹೊಸ ಚರಿತೆಯ
ಚಿತ್ತಾರಗಳ ಬರಹ

ದುಡಿಯುವ ಜನತೆಯ ಎದೆಯಾಳದೊಳಗೆ
ವಿಶ್ವ ಭಾವನೆಯ ಜೀವ
ಸಮರಶೀಲತೆಯ ಭಾವ
ಕುಡಿಯೊಡೆಯ ತೊಡಗಿದಾಗ
ಭಾರತದ ನೆಲದಲ್ಲಿ
ಕ್ರಾಂತಿ ಸೂರ್ಯನ ಕಿರಣ ಕಾಣಲು
ಕಾದು ನಿಂತಿದೆ ಮೇ ದಿನ

"ಉದಯ"

ಚಿಕಾಗೊ ಮೇ 1, 1886 ದಿನಕ್ಕೆ ಎಂಟು ಗಂಟೆಗಳ
ಕಾಲದ ಕೆಲಸಕ್ಕೆ ಕೆಲಸಗಾರರು ಮುಷ್ಕರಹೂಡಿ ಅದು





ಕ್ರಾಂತಿಗೊಂಡು ಇತಿಹಾಸವನ್ನು ಸೃಷ್ಟಿಸಿತು ಪ್ರಪಂಚದಲ್ಲಿ
ದುಡಿಯುವ ಜನಗಳ ಬೆವರಿನಿಂದ ಆ ಚರಿತ್ರೆಯನ್ನು



ಬರೆಯಲ್ಪಟ್ಟಿದೆ ಅಂತರ ರಾಷ್ಟ್ರೀಯ ಕೆಲಸಗಾರರ
ಐಕ್ಯಮತದ ಇತಿಹಾಸವಾಗಿದೆ. ಇಂದು,





ಅನಿರತ ಯತ್ನದಿಂದ ಮೃತ್ಯುವನ್ನಪ್ಪಿ
ದವರೆಲ್ಲರಿಗೂ ಲೆಫ್ಟ್ ಫ್ರಂಟ್
ಸರ್ಕಾರ ವಂದಿಸುತ್ತದೆ. ಸಮೃದ್ಧಿಯನ್ನು



ಎತ್ತರಿಸೋಣ ಮತ್ತು ಕಾರ್ಲ್ ಮಾರ್ಕ್ಸ್‌ನ
ಮಾತುಗಳನ್ನು ಪ್ರತಿಧ್ವನಿಸೋಣ.

"ಕೆಲಸ ಮಾಡುವ ಎಲ್ಲಾದೇಶಗಳ ಜನರೇ ಒಂದಾಗಿ"



ಪಶ್ಚಿಮ ಬಂಗಾಳ
ಸರ್ಕಾರ

ನೂರು ವರ್ಷಗಳ ಹೋರಾಟಕ್ಕೆ ಲೆಫ್ಟ್ ಫ್ರಂಟ್ ಸರ್ಕಾರದ ಕಾಣಿಕೆ.

ಪೂರ್ವ ಯೂರೋಪಿನಲ್ಲಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಗಳು

ದ್ವಿತೀಯ ಮಹಾಯುದ್ಧದ ನಂತರ ವಿಶ್ವ ...ಗಳ ಸಮತೋಲನದಲ್ಲಿ ತೀವ್ರವಾದ ಜನಪರ ...ದ ಬದಲಾವಣೆ ಕಂಡುಬಂತು. ಫ್ಯಾಸಿಸ್ಟ್ ...ಳಿಕೋರರನ್ನು ಸೋಲಿಸುವಲ್ಲಿ ವಿಶ್ವದ ಪ್ರಥಮ ...ರ್ಮಿಕ ಪ್ರಭುತ್ವದ ಸೋವಿಯೆತ್ ಕೆಂಪು ...ಯ ನಿರ್ಣಾಯಕ ಪಾತ್ರ ಇದರಲ್ಲಿ ಒಂದು ...ಮುಖ ಅಂಶ.

ನಾಝಿ ದಾಳಿಕೋರರ ವಿರುದ್ಧ ಪ್ರತಿ...ಧ ಆಂದೋಲನಗಳಲ್ಲಿ ಫ್ಯಾಸಿಸಂ ವಿರುದ್ಧ ...ಬಿಡದ ಅವಿಚಲ ಹೋರಾಟ ನಡೆಸಿದ ...ರ್ಮಿಕರು ಹಾಗೂ ಅವರ ಮುಂಚೂಣಿಯಾದ ...ಮ್ಯುನಿಸ್ಟ್ ಪಕ್ಷಗಳು ರಾಷ್ಟ್ರೀಯ ವಿಮೋಚನಾ ...ಗೂ ಸಾಮಾಜಿಕ ವಿಮುಕ್ತಿಯ ಹೋರಾಟ...ಗೆ ದುಡಿಯುವ ಜನಗಳ ವಿಶಾಲ ಜನಸ್ತೋಮ...ನ್ನು ಸೆಳೆಯುವಲ್ಲಿ ಯಶಸ್ವಿಯಾದವು. ...ರಿಂದ ಫ್ಯಾಸಿಸಂನ ಪತನದೊಂದಿಗೆ ...ಮೂಾಯ ದೇಶಗಳ ಬೂರ್ಜ್ವಾಗಳನ್ನು ...ೇಲಿಸಿ ಒಂದಾದ ಮೇಲೊಂದರಂತೆ

ಸಮಾಜವಾದಿ (CMEA) ಮತ್ತು ಮುಂದುವರಿದ ಬಂಡವಾಳಶಾಹಿ ದೇಶಗಳ (OECD) (1950=1)



ರಾಷ್ಟ್ರೀಯ ಆದಾಯ ಹಾಗೂ ಕೈಗಾರಿಕಾ ಉತ್ಪಾದನೆ

	1960	1970	1980	1983
CMEA	2.5	4.8	8.0	8.6
OECD	1.5	2.4	3.3	3.4
CMEA	3.0	6.8	13.0	14.0
OECD	1.6	2.8	3.9	3.8

ಜನತಾ ಪ್ರಜಾಪ್ರಭುತ್ವಗಳನ್ನು ರಚಿಸಿಕೊಂಡು ಸಮಾಜವಾದೀ ರಚನೆಯಲ್ಲಿ ತೊಡಗುವುದು ಯೂರೋಪಿನ ಹಲವು ದೇಶಗಳಲ್ಲಿ ಸಾಧ್ಯವಾಯಿತು.

22 ಜುಲೈ 1944 : ಸೋವಿಯೆತ್ ಕೆಂಪುಸೇನೆ ಹಾಗೂ ಪೋಲಿಷ್ ವಿಮೋಚನಾ... ಸೇನೆಗಳಿಂದ ಪೋಲೆಂಡಿನ ವಿಮೋಚನೆಯ ಆರಂಭ. ವಿಮೋಚನೆಗೊಂಡ ಮೊತ್ತಮೊದಲ ನಗರ ಚೆಲ್ಮ್‌ನಲ್ಲಿ ಪೋಲೆಂಡ್‌ನ ಜನತಾ ಪ್ರಜಾ... ಪ್ರಭುತ್ವದ ರಚನೆಯ ಪ್ರಥಮ ಡಿಕ್ರಿ ಹೊರ...ಲ್ಪಟ್ಟಿತು. ಮೇ 1945ರ ಹೊತ್ತಿಗೆ ಪೋಲೆಂ... ಎಲ್ಲಾ ಪ್ರದೇಶಗಳು ವಿಮೋಚನೆಗೊಂ... ಪೋಲಿಷ್ ಜನತಾ ಗಣರಾಜ್ಯ ಸಮಾಜ... ಮಾರ್ಗ ಹಿಡಿಯಿತು.

ಆಗಸ್ಟ್ 23, 1944 : ರೊಮಾನಿ... ದಲ್ಲಿ ಫ್ಯಾಸಿಸ್ಟ್-ವಿರೋಧಿ, ಊಳಿಗಮ...

1983-84 ರ ಶಾಲಾ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆ

(ಪ್ರತಿ ಹತ್ತು ಸಾವಿರ ಜನಸಂಖ್ಯೆಯಲ್ಲಿ)



ವಿರೋಧಿ ಹಾಗೂ ಸಾಮ್ರಾಜ್ಯಶಾಹೀ ವಿರೋಧಿ ಸಶಸ್ತ್ರ ಬಂಡಾಯದ ಅರಂಭ. ರೊಮಾನಿಯಾ ಕಮ್ಯುನಿಸ್ಟ್ ಪಕ್ಷದ ಜನತಾ ಪ್ರಜಾಪ್ರಭುತ್ವ ರಂಗದ ಕರಡು ಕಾರ್ಯಕ್ರಮದ ಆಧಾರದ ಮೇಲೆ ಜನಸಮೂಹಗಳ ತೀವ್ರ ಚಟುವಟಿಕೆಗಳ ಮೂಲಕ ಪ್ರತಿಕ್ರಾಂತಿಯನ್ನು ವಿಫಲಗೊಳಿಸಲ್ಪಟ್ಟು ಅಧಿಕಾರ ಜನತಾ ಪ್ರಜಾಪ್ರಭುತ್ವ ರಂಗದ ಕೈಗೆ ಬಂತು.

19 ನವಂಬರ್ 1946. ಚುನಾವಣೆಗಳಲ್ಲಿ ಕಾರ್ಮಿಕ ವರ್ಗದ ಹಾಗೂ ಅದರ ಮಿತ್ರ ವರ್ಗಗಳ ಭಾರೀ ವಿಜಯದೊಂದಿಗೆ ಜನಪ್ರಿಯ ಪ್ರಜಾಪ್ರಭುತ್ವ ಕ್ರಾಂತಿ ಸಮಾಜವಾದೀ ಕ್ರಾಂತಿಯಾಗಿ ಪರಿಣಮಿಸಿತು.

ಸೆಪ್ಟೆಂಬರ್ 9,1944 : ಬಲ್ಗೇರಿಯನ್ ಕಾರ್ಮಿಕ ಪಕ್ಷದ ನೇತೃತ್ವದಲ್ಲಿದ್ದ 'ಪಿತೃಭೂಮಿ ರಂಗದ' ಉತ್ಕ್ರಾಂತಿಗೆ ಜಯ. ಬೂರ್ಜ್ವಾಗಳ ವಿರುದ್ಧ ವಿಶಾಲ ಜನಸ್ತೋಮಗಳ ಬೆಂಬಲ ಪಡೆಯುವಲ್ಲಿ ಕಮ್ಯುನಿಸ್ಟರ ಯಶಸ್ವಿ, ಪರಿಣಾಮವಾಗಿ ನವಂಬರ್ 18, 1945 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ "ಪಿತೃಭೂಮಿರಂಗ"ಕ್ಕೆ ಶೇ. 88.18 ಮತ ದೊರೆತು ಸಮಾಜವಾದದ ವಿರೋಧಿಗಳಿಗೆ ತೀವ್ರ ಸೋಲು.

ನವಂಬರ್ 24, 1944 : ಐದು ವರ್ಷಗಳ ತೀವ್ರ ಹೋರಾಟದ ನಂತರ ಅಲ್ಬೇನಿಯಾದ ಕಮ್ಯುನಿಸ್ಟರ ನೇತೃತ್ವದಲ್ಲಿದ್ದ ಅಲ್ಬೇನಿಯಾ ರಾಷ್ಟ್ರೀಯ ವಿಮೋಚನಾ ರಂಗ ಸೋವಿಯೆತ್ ಕೆಂಪು ಸೇನೆಯ ನೆರವಿನಿಂದ ಫ್ಯಾಸಿಸ್ಟರಿಂದ ಅಲ್ಬೇನಿಯಾವನ್ನು ವಿಮೋಚನೆಗೊಳಿಸಿದ ದಿನ. ಹೋರಾಟ ಮುಂದುವರಿದು ರಾಜ ಪ್ರಭುತ್ವ ಕಿತ್ತೊಗೆಯಲ್ಪಟ್ಟು ಜನವರಿ 11, 1946 ರಂದು ಜನತಾ ಗಣರಾಜ್ಯದ ಘೋಷಣೆ.

ಏಪ್ರಿಲ್ 4, 1945 : ಕಾರ್ಮಿಕ ವರ್ಗದ ನೇತೃತ್ವದ "ಹಂಗೇರಿಯನ್ ಸ್ವತಂತ್ರ ಜನತಾ ರಂಗದ ನೇತೃತ್ವದಲ್ಲಿ ಫ್ಯಾಸಿಸ್ಟರಿಂದ ಹಂಗೇರಿಯ ವಿಮೋಚನೆ. ವಿಮೋಚನೆಯ ನಂತರ ಜನತಾ ರಂಗದೊಳಗೆ ನುಗ್ಗಿದ ಪ್ರತಿಗಾಮಿಗಳ ವಿರುದ್ಧ ಕಾರ್ಮಿಕ ವರ್ಗ ಹಾಗೂ ರೈತಾಪಿವರ್ಗದ ಸಖ್ಯತೆ ಆಧಾರದ ಮೇಲೆ ನಡೆಸಿದ ಹೋರಾಟದ ಪರಿಣಾಮವಾಗಿ 1948ರ ಹೊತ್ತಿಗೆ ಹಂಗೇರಿಯನ್ ಜನತಾ ಕ್ರಾಂತಿ ಸಮಾಜವಾದೀ ಕ್ರಾಂತಿಯಾಗಿ ಪರಿಣಮಿಸುವುದು ಸಾಧ್ಯವಾಯಿತು.

ಚೀನಾದ ಜನತಾ ಕ್ರಾಂತಿ

ಅಕ್ಟೋಬರ್ 1, 1949. ಸಾಮ್ರಾಜ್ಯಶಾಹಿಗಳು, ಊಳಿಗಮಾನ್ಯ ಪದ್ಧತಿ ಹಾಗೂ ಆಂತರಿಕ ಪ್ರತಿಗಾಮಿಗಳ ವಿರುದ್ಧ ಚೀನಾ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಚೀನಾದ ದುಡಿಯುವ ಜನತೆ ರಾಜಕೀಯ ಹಾಗೂ ಸಾಮಾಜಿಕ ವಿಮೋಚನೆಗಾಗಿ ನಡೆಸಿದ ಧೀರ ಹಾಗೂ ದೀರ್ಘ ಹೋರಾಟ ಯಶಸ್ವಿಯಾಗಿ ಕೊನೆಗೊಂಡಿತು ಚೀನಾ ಜನತಾ ಗಣರಾಜ್ಯ ಸ್ಥಾಪನೆಗೊಂಡಿತು

1911 ರಲ್ಲಿ ನಡೆದ ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿ, ಶತಮಾನದ ಮೂರನೇ ದಶಕದಲ್ಲಿ ಕಾರ್ಮಿಕರ ಹಾಗೂ ಇತರ ದುಡಿಯುವ ಮತ್ತು ಪ್ರಗತಿಪರ ಜನವಿಭಾಗಗಳ ಸಾಮ್ರಾಜ್ಯಶಾಹೀ ವಿರೋಧಿ ಹೋರಾಟ, ಚೀಣೀ ರೈತರನ್ನು ಹಳ್ಳಿಗಳನ್ನು ಶೋಷಕರಿಂದ ಒಂದೊಂದಾಗಿ ವಿಮೋಚನೆಗೊಳಿಸುತ್ತಾ ನಡೆದ ಕಾಮ್ರೇಡ್ ಮಾವೋ ನೇತೃತ್ವದ ಚಾರಿತ್ರಿಕ ದೀರ್ಘ ಪಯಣ ಚೀನಾವನ್ನು ಮಹಾನ್ ಕ್ರಾಂತಿಗೆ ಸಜ್ಜುಗೊಳಿಸಿತ್ತು.

ಎರಡನೇ ಮಹಾಯುದ್ಧದಲ್ಲಿ ಯುರೋಪಿನ ರಣರಂಗದಲ್ಲಿ ನಾಝಿಗಳ ಹಾಗೂ ಪೂರ್ವರಂಗದಲ್ಲಿ ಜಪಾನೀ ಸೈನಿಕಶಾಹಿಗಳ ಸೋಲು ಚೀಣೀ ದುಡಿಯುವ ಜನಗಳ ಹೋರಾಟಕ್ಕೆ ಇನ್ನಷ್ಟು ಬಲ ನೀಡಿತು. ಸೋವಿಯೆತ್ ಕೆಂಪು ಸೇನೆಯ ನೆರವಿನಿಂದ ಚೀಣೀ ಜನತೆಯ ಸಹಕಾರದೊಂದಿಗೆ ಈಶಾನ್ಯ ಚೀನಾದಲ್ಲಿನ ಕೈಗಾರಿಕಾ ಪ್ರದೇಶಗಳ ವಿಮೋಚನೆ. ಮಂಚೂರಿಯಾದಲ್ಲಿ ಕ್ರಾಂತಿಕಾರೀ ನೆಲೆ ಸ್ಥಾಪನೆ. ಚಿಯಾಂಗ್ ಷೇಕ್‌ನ ಪ್ರತಿಗಾಮಿ ಸೈನಿಕ ಪಡೆಗಳೊಂದಿಗೆ ಜನತಾ ವಿಮೋಚನಾ ಪಡೆಗಳ ತೀವ್ರ ಸೆಣಸಾಟ. ಅಂತಿಮವಾಗಿ ಜಗತ್ತಿನ ಅತ್ಯಂತ ದಟ್ಟ ಜನಸಂಖ್ಯೆಯ ಹಾಗೂ ಏಶ್ಯಾದ ಈ ಪ್ರಾಚೀನ ಹಾಗೂ ದೊಡ್ಡ ದೇಶದಲ್ಲಿ ದುಡಿಯುವ ಜನರ ನೇತೃತ್ವದ ಪ್ರಭುತ್ವ ಸ್ಥಾಪನೆ ಗೊಂಡಿತು ; ಸಮಾಜವಾದೀ ಮಾರ್ಗದಲ್ಲಿ ತನ್ನ ಹಿಂದುಳಿಕೆಯನ್ನು ನೀಗಿಸಿಕೊಳ್ಳುತ್ತಾ ರಭಸದಿಂದ ಮುನ್ನಡೆಯಲಾರಂಭಿಸಿತು.

9 ಮೇ 1945 : ನಾಝೀ ದುರಾಕ್ರಮಣಕ್ಕೆ ಮೊದಲು ಬಲಿಯಾದ ಜೆಕೋಸ್ಲಾವಾಕಿಯಾ ಯೂರೋಪಿನಲ್ಲಿ ಫ್ಯಾಸಿಸಂನ ಪತನದೊಂದಿಗೆ ಪೂರ್ಣವಾಗಿ ವಿಮೋಚನೆಗೊಂಡಿತು. ಮೇ 1945 ರಿಂದ ಫೆಬ್ರವರಿ 1948ರ ವರೆಗೆ ಒಂದೆಡೆ ಕಾರ್ಮಿಕ ವರ್ಗ, ರೈತ ವರ್ಗ ಹಾಗೂ ಪ್ರಗತಿಪರ ಬುದ್ಧಿಜೀವಿಗಳು ಇನ್ನೊಂದೆಡೆ ಹಿರಿ ಬೂರ್ಜ್ವಾವರ್ಗ. ಇವುಗಳ ನಡುವೆ ತೀವ್ರ ಹೋರಾಟ. 1948ರ ಫೆಬ್ರವರಿ 20 ರಂದು ರಾಷ್ಟ್ರೀಯ ರಂಗದೊಳಗೆ ಬುಡಮೇಲು ಕೃತ್ಯ ನಡೆಸುತ್ತಿದ್ದ ಬೂರ್ಜ್ವಾಗಳ ಪ್ರತಿಕ್ರಾಂತಿ ಯತ್ನ ವಿಫಲಗೊಂಡು ಅಧಿಕಾರ ಕಾರ್ಮಿಕವರ್ಗ ಹಾಗೂ ಅದರ ಮಿತ್ರವರ್ಗಗಳ ಕೈಗೆ ಬಂತು.

9 ಮೇ 1945 : ಫ್ಯಾಸಿಸಂನ ಪತನದ ದಿನ ಮತ್ತು ಜರ್ಮನಿಯ ದುಡಿಯುವ ಜನಗಳ ವಿಮೋಚನೆಯ ದಿನ. 1946 ಜೂನ್ 10 ರಿಂದ ಸೋವಿಯೆತ್ ಕೆಂಪುಸೇನೆಯ ವಶವಾಗಿದ್ದ ಪ್ರದೇಶಗಳಲ್ಲಿ ರಾಜಕೀಯ ಚಟುವಟಿಕೆಗಳು ಆರಂಭ. 1946 ಏಪ್ರಿಲ್ 21 ರಂದು ಜರ್ಮನಿಯ ಕಮ್ಯುನಿಸ್ಟ್ ಪಕ್ಷ ಹಾಗೂ ಸಾಮಾಜಿಕ ಜನತಂತ್ರವಾದೀ ಪಕ್ಷ ಸೇರಿ ಜರ್ಮನಿಯ ಸಮಾಜವಾದೀ ಐಕ್ಯತಾ ಪಕ್ಷದ ಸ್ಥಾಪನೆ. ಇದರ ನೇತೃತ್ವದಲ್ಲಿ ಅಕ್ಟೋಬರ್ 7, 1949 ರಲ್ಲಿ ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯದ ಸ್ಥಾಪನೆ.

29 ನವಂಬರ್ 1945 : ಬೆಲ್‌ಗ್ರೇಡ್‌ನಲ್ಲಿ ಸಂವಿಧಾನ ಸಭೆ ಯುಗೋಸ್ಲಾವಿಯಾ ಒಂದು ಜನತಾ ಗಣರಾಜ್ಯ ಒಕ್ಕೂಟ ಎಂದು ಘೋಷಿಸಿತು. ಈ ದಿನದಿಂದ ಸರಿಯಾಗಿ ಎರಡು ವರ್ಷಗಳ ಹಿಂದೆ ಕಾರ್ಮಿಕ ವರ್ಗ ಹಾಗೂ ಅದರ ಮುಂಚೂಣಿ ಪಕ್ಷದ ನೇತೃತ್ವದಲ್ಲಿದ್ದ "ಯುಗೊಸ್ಲಾವಿಯಾ ರಾಷ್ಟ್ರೀಯ ವಿಮೋಚನೆಯ ಫ್ಯಾಸಿಸ್ಟ್ ವಿರೋಧಿ ಮಂಡಲಿ" ನಾಝಿಗಳಿಂದ ವಿಮೋಚನೆಹೊಂದಿದ ಜೈಸೆ ನಗರದಲ್ಲಿ ನಡೆಸಿದ ತನ್ನ ಎರಡನೇ ಅಧಿವೇಶನದಲ್ಲಿ ಒಂದು ಹೊಸ ಸಮಾಜವಾದೀ ಯುಗೋಸ್ಲಾವಿಯಾಕ್ಕೆ ಅಡಿಗಲ್ಲು ಹಾಕಿದ ಚಾರಿತ್ರಿಕ ನಿರ್ಣಯಗಳನ್ನು ಕೈಗೊಂಡಿತು.

ಕಾರ್ಮಿಕ ವರ್ಗದ ಒಂದು ಶತಕದ ಸಾಧನೆಗಳು

—ಸಿ. ನಂಜುಂಡಪ್ಪ

ಹಿಂದೆ ಕಾರ್ಮಿಕರು ಬೆಳಗಿನಿಂದ ರಾತ್ರಿಯವರೆಗೆ ದುಡಿಯಬೇಕಾಗಿದ್ದಿತು. ಕೆಲಸದ ವೇಳೆಗೆ ಅಂದು ನಿರ್ದಿಷ್ಟ ಮಿತಿ ಇರಲಿಲ್ಲ. ಎಂಟು ಗಂಟೆಗಳ ಕೆಲಸದ ದಿವಸಕ್ಕಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಎರಡುಲಕ್ಷ ಕಾರ್ಮಿಕರು ನೂರು ವರ್ಷಗಳ ಹಿಂದೆ 1886 ರಲ್ಲಿ ಮೇ ಒಂದರಂದು ಕೆಲಸವನ್ನು ನಿಲ್ಲಿಸಿ ಮುಷ್ಕರವಾಡಿದರು. ಅಂದು ಚಿಕಾಗೋ ನಗರದಲ್ಲಿ ಸಹಸ್ರಾರು ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡರು. ಆ ದೇಶದ ಬಂಡವಾಳಶಾಹಿ ಸರ್ಕಾರ ಮತ್ತು ಉದ್ಯೋಗಪತಿಗಳು ಈ ಹೋರಾಟವನ್ನು ಹತ್ತಿಕ್ಕಲು ಪಿತೂರಿ ಮಾಡಿದರು. ಮೇ ೩ ರಂದು ಪೋಲೀಸರು ಕಾರ್ಮಿಕರ ಪ್ರದರ್ಶನದ ಮೇಲೆ ಗೋಳಿಬಾರು ಮಾಡಿ ಆರು ಮಂದಿಯನ್ನು ಕೊಂದು, ಅನೇಕರನ್ನು ಗಾಯಗೊಳಿಸಿದರು. ಈ ಬರ್ಬರ ದಬ್ಬಾಳಿಕೆಯನ್ನು ಪ್ರತಿಭಟಿಸಲು ಮೇ 4 ರಂದು ಹೇಮಾರ್ಕೆಟ್ ಚೌಕದಲ್ಲಿ ನಡೆದ ಕಾರ್ಮಿಕ ಪ್ರದರ್ಶನದಲ್ಲಿ ಪ್ರಚೋದನಕಾರರು— ಮುಫ್ತಿಯಲ್ಲಿದ್ದ ಪೋಲಿಸರು ಕಾರ್ಮಿಕರ ಕಡೆಯಿಂದ ಜನರ ಗುಂಪಿನ ಮೇಲೆ ಬಾಂಬೊಂದನ್ನು ಎಸೆದು, ಆ ಘಟನೆಯಲ್ಲಿ ಒಬ್ಬ ಸಾರ್ಜೆಂಟ್ ಸತ್ತ. ಆ ನಂತರ ನಡೆದ ಗಲಭೆಯಲ್ಲಿ ಹಲವಾರು ಪೋಲೀಸರು ಮತ್ತು ನಾಲ್ವರು ಕಾರ್ಮಿಕರು ಸತ್ತರು. ಇಷ್ಟಕ್ಕೆ ತೃಪ್ತರಾಗದ ಅಧಿಕಾರಿಗಳು ನಾಲ್ವರು ಕ್ಷಾತ್ರಶೀಲ ಕಾರ್ಮಿಕ ನಾಯಕರನ್ನು -ಆಲ್ಬರ್ಟ್ ಆರ್. ಪ್ಯಾರ್ಸನ್ಸ್,ಅಗಸ್ಟ್ ಸ್ಪೇಸ್, ಅಡಾಲ್ಫ್ ಫಿಷರ್ ಮತ್ತು ಜಾರ್ಜ್ಎಂಗಲ್- ಎಂಬುವವರನ್ನು ಹೇಮಾರ್ಕೆಟ್ ಚೌಕದಲ್ಲಿ ಗಲ್ಲಿಗೇರಿಸಿ ಕೊಂದರು, ಅನೇಕರನ್ನು ದೀರ್ಘ ಕಾಲದ ಸಜಾ ಶಿಕ್ಷೆಯೊಂದಿಗೆ ಕಾರಾಗೃಹಕ್ಕೆ ಕಳುಹಿಸಿದರು. ಎಂಟು ಗಂಟೆಗಳ ಕೆಲಸದ ದಿನಕ್ಕಾಗಿ ನಡೆದ ಹೋರಾಟದಲ್ಲಿ ಈ ಚಿಕಾಗೋ ಮಾರಣ ಹೋಮ,ನಾಲ್ವರು ಕಾರ್ಮಿಕ ಮುಖಂಡರನ್ನು ಗಲ್ಲಿಗೇರಿಸಿದುದು ಜಗತ್ಪ್ರಖ್ಯಾತವಾದುವು

1889 ರಲ್ಲಿ ಫ್ರಾನ್ಸ್ ರಾಜಧಾನಿ ಪ್ಯಾರಿಸ್ಸ್‌ನಲ್ಲಿ ಸೇರಿದ ಎರಡನೆಯ ಅಂತರರಾಷ್ಟ್ರಿಯದ ಅಧಿವೇಶನ ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಎಂಟು ಗಂಟೆಗಳ ಕೆಲಸದ ದಿವಸ ಮತ್ತು ಇತರ ಬೇಡಿಕೆಗಳಿಗಾಗಿ ಮೇ 1 ರಂದು ಎಲ್ಲಾ ದೇಶಗಳಲ್ಲಿ ಕಾರ್ಮಿಕರು ಪ್ರದರ್ಶನಗಳನ್ನು ನಡೆಸಬೇಕೆಂದು ಕರೆಕೊಟ್ಟಿತು. ಅಂದಿನಿಂದ ಎಲ್ಲಾ ದೇಶಗಳಲ್ಲಿ ಕಾರ್ಮಿಕರು ಮೇ 1 ರಂದು ಮೇ ದಿನಾಚರಣೆಯನ್ನು ನಡೆಸುತ್ತಾ ಬಂದಿದ್ದಾರೆ.

ಎರಡನೆಯ ಅಂತರರಾಷ್ಟ್ರೀಯವು ಅಂಗೀಕರಿಸಿದ ತುರ್ತಿನ ಬೇಡಿಕೆಗಳ ಪಟ್ಟಿ ಹೀಗಿದೆ: 8 ಗಂಟೆ ಕೆಲಸದ ದಿನವನ್ನು ನಿಗದಿ ಮಾಡುವ ಕಾನೂನಾಗಬೇಕು; ಬಾಲ ಕಾರ್ಮಿಕರು ಕೆಲಸ ಮಾಡುವುದನ್ನು ನಿಷೇಧಿಸಬೇಕು; ಮಹಿಳೆಯರು ಮತ್ತು ಯುವಕರು ಮಾಡುವ ಕೆಲಸಕ್ಕೆ ಮಿತಿ ಇರಬೇಕು; ರಾತ್ರಿ ಕೆಲಸಕ್ಕೆ ಮತ್ತು ಕಷ್ಟಕರ ಕೆಲಸಕ್ಕೆ ವಿಶೇಷ ನಿಯಮಗಳಿರಬೇಕು; ವಾರದ ರಜೆ ಇರಬೇಕು.; ವಿಶ್ರಾಂತಿ ಇರಬೇಕು; ಕೆಲಸಕ್ಕೆ ಧಾನ್ಯಗಳ ರೂಪದಲ್ಲಿ ಸಂಭಾವನೆ ಕೊಡುವುದನ್ನು ನಿಷೇಧಿಸಬೇಕು; ಕಾರ್ಖಾನೆಗಳೇ ನಡೆಸುವ ಅಂಗಡಿಗಳ ಮೂಲಕ ಸಂಭಾವನೆಗೆ ಧಾನ್ಯಗಳನ್ನು ಕೊಡುವುದನ್ನು ನಿಷೇಧಿಸಬೇಕು; ಕಾರ್ಖಾನೆ ಇನ್ಸ್‌ಪೆಕ್ಟರ್‌ಗಳನ್ನು ಸರ್ಕಾರವು ನೇಮಿಸಬೇಕು; ಲಿಂಗಬೇಧವಿಲ್ಲದೆ ಗಂಡಿಗೂ ಹೆಣ್ಣಿಗೂ, ಎಲ್ಲಾ ರಾಷ್ಟ್ರೀಯರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ಕೂಡ ಬೇಕು, ಕಾರ್ಮಿಕ ಸಂಘಗಳಿಗೆ ಅನಿರ್ಬಂಧಿತವಾದ ಮತ್ತು ಸಂಪೂರ್ಣವಾದ ಸ್ವಾತಂತ್ರವಿರಬೇಕು.

ಈ ತುರ್ತಿನ ಬೇಡಿಕೆಗಳ ಪಟ್ಟಿಯನ್ನು ಒಳಗೊಂಡ ನಿರ್ಣಯದ ಕೊನೆಯ ಭಾಗದಲ್ಲಿ, "ಕಾರ್ಮಿಕವರ್ಗವು ಅಂತರರಾಷ್ಟ್ರೀಯವಾಗಿಒಂದು ವರ್ಗವಾಗಿ ಸಂಘಟಿತವಾಗಿ ರಾಜಕೀಯ ಅಧಿಕಾರವನ್ನು ಗಳಿಸಿ, ಉತ್ಪಾದನಾಸಾಧನಗಳನ್ನು ಸಾರ್ವಜನಿಕ ಸ್ವತ್ತನ್ನಾಗಿ ಪರಿವರ್ತಿಸಿದರೆ ಮಾತ್ರ ಕಾರ್ಮಿಕರನ್ನು ಮತ್ತು ಇಡೀ ಮಾನವಕೋಟಿಯನ್ನು ವಿಮೋಚನಗೊಳಿಸಲು ಸಾಧ್ಯ" ಎಂದು ಹೇಳಿದೆ. ಇದು ತುರ್ತಿನ ಬೇಡಿಕೆಗಳಿಗೆ ಮತ್ತು ಅಂತಿಮ ಗುರಿಯಾದ ಸಮಾಜವಾದಕ್ಕೆ ಸಂಬಂಧ ಕಲ್ಪಿಸುತ್ತದೆ.

ಈ ನಿರ್ಣಯವು ಯುದ್ಧಕ್ಕೆ ವಿರೋಧವನ್ನು ವ್ಯಕ್ತಪಡಿಸಿ, ಸೈನ್ಯಗಳನ್ನು ವಿಸರ್ಜಿಸಿ ಎಲ್ಲಾ ಜನರಿಗೂ ಶಸ್ತ್ರಾಸ್ತ್ರಗಳನ್ನು ಕೊಡಬೇಕೆಂದು ಹೇಳಿದೆ. ಕಾರ್ಮಿಕ ವರ್ಗವು ಪ್ರಾರಂಭದೆಸೆಯಿಂದಲೂ ಯುದ್ಧಕ್ಕೆ ವಿರೋಧವಾಗಿದೆ ಮತ್ತು ಶಾಂತಿಯನ್ನು ಬಯಸುತ್ತದೆ ಎಂಬುದನ್ನು ಇದರಿಂದ ತಿಳಿಯಬಹುದು.

1890ರ ಮೇ 1 ರಂದು ಯೂರೋಪು ಖಂಡದ ನಗರಗಳಲ್ಲಿ ಕಾರ್ಮಿಕರ ಭಾರೀ ಪ್ರದರ್ಶನಗಳು ನಡೆದುವು. ಬ್ರಿಟನ್ ಮತ್ತು ಸ್ಪೇನ್‌ಗಳಲ್ಲಿ ಮೇ 4 ರಂದು ಭಾನುವಾರ ಪ್ರದರ್ಶನಗಳು ನಡೆದವು. ಅಂದಿನ ರಷ್ಯದಲ್ಲಿ ಝಾರ್ ಆಡಳಿತವು ಮೇ ದಿನದಂದು ಸಾಮೂಹಿಕ ಬಂಧನಗಳು ಮತ್ತು ಗೋಳೀಬಾರುಗಳನ್ನು ಮಾಡಿತು.

ಆದರೆ ಪ್ರಪಂಚದಲ್ಲಿ ಮೊದಲ ಬಾರಿಗೆ ಅದೇ ರಷ್ಯದಲ್ಲಿ 1917 ರಲ್ಲಿ ಕಾರ್ಮಿಕ ವರ್ಗವು ಕ್ರಾಂತಿ ಮಾಡಿ ಎರಡನೆಯ ಅಂತರರಾಷ್ಟ್ರೀಯದ ಕರೆಯಂತೆ ರಾಜಕೀಯ ಅಧಿಕಾರವನ್ನು ಪಡೆದುಕೊಂಡಿತು. ಉತ್ಪಾದನಾ ಸಾಧನಗಳನ್ನು ಸಾರ್ವಜನಿಕ ಸ್ವತ್ತನ್ನಾಗಿ ಪರಿವರ್ತಿಸಿತು. ಆ ದೇಶದಲ್ಲಿ ಸಮಾಜವಾದದ ನಿರ್ಮಾಣವನ್ನು ಪ್ರಾರಂಭಿಸಿತು!

ಎರಡನೆಯ ಜಾಗತಿಕ ಮಹಾಯುದ್ಧ ಕೊನೆಯಾಗುವ ವೇಳೆಗೆ ಪೂರ್ವ ಯೂರೋಪಿನ ಹಂಗೇರಿ, ಜೆಕೋಸ್ಲೊವಾಕಿಯ, ಬಲ್ಗೇರಿಯ, ಪೂರ್ವ ಜರ್ಮನಿ, ಪೋಲೆಂಡ್, ರುಮಾನಿಯ, ಆಲ್ಬೇನಿಯ, ಯುಗೋಸ್ಲಾವಿಯಾ ಗಳಲ್ಲಿ ಕಾರ್ಮಿಕವರ್ಗವು ರಾಜಕೀಯ ಅಧಿಕಾರವನ್ನು

ಗಳು ಸಮಾಜವಾದದ ನಿರ್ಮಾಣವನ್ನು ಶುರು ಮಾಡಿತು.

1949 ರಲ್ಲಿ ಚೀನದಕ್ರಾಂತಿ [ಚೀನವೆಂದರೆ ಪ್ರಪಂಚದ ಜನಸಂಖ್ಯೆಯ ಕಾಲುಭಾಗ]ಯು ಯಶಸ್ವಿಯಾಯಿತು. ಸಮಾಜವಾದವನ್ನು ಕಟ್ಟೋಣ ಆರಂಭವಾಯಿತು. 1953ರ ವೇಳೆಗೆ ಉತ್ತರ ಕೊರಿಯದಲ್ಲಿ, 1990ರ ವೇಳೆಗೆ ಕ್ಯೂಬದಲ್ಲಿ ಕ್ರಾಂತಿಗಳಾಗಿ ಸಮಾಜವಾದದ ನಿರ್ಮಾಣ ನಡೆಯಲಾರಂಭಿಸಿತು.

1975ರ ವೇಳೆಗೆ ವಿಯಟ್ನಾಮ್ ಐಕ್ಯ ಸಮಾಜವಾದಿ ಗಣತಂತ್ರವಾಯಿತು. ಲಾವೋಸ್, ಕಂಪೂಚಿಯಗಳು ಸಮಾಜವಾದಿ ಪಥವನ್ನು ಅನುಸರಿಸಿದುವು.

ಕಾರ್ಮಿಕವರ್ಗದ ಅಧಿಕಾರವಿರುವ ಸಮಾಜವಾದಿ ದೇಶಗಳಲ್ಲಿ ಎರಡನೆಯ ಅಂತರರಾಷ್ಟ್ರೀಯದ 1889ರ ಬೇಡಿಕೆಗಳ ಪಟ್ಟಿಯಲ್ಲಿನ ತುರ್ತಿನ ಬೇಡಿಕೆಗಳು ಎಂದೋ ಈಡೇರಿ ಹೋಗಿವೆ. ಸೋವಿಯತ್ ಒಕ್ಕೂಟದಲ್ಲಿ ಏಂಟಕ್ಕಿಂತಲೂ ಕಡಿಮೆ ಗಂಟೆಗಳ ಕೆಲಸದ ದಿವಸ ರೂಢಿಗೆ ಬಂದಿದೆ.

ಪ್ರಪಂಚದ ಒಟ್ಟು ಜನಸಂಖ್ಯೆಯ ಮೂರನೆಯ ಒಂದು ಭಾಗಕ್ಕಿಂತಲೂ ಹೆಚ್ಚು ಜನರು ಇಂದು ಸಮಾಜವಾದಿ ದೇಶಗಳಲ್ಲಿದ್ದು ಸುಖ ಸಂತೋಷಗಳಿಂದ ಬದುಕುತ್ತಿರುವುದು, ಸತತವಾಗಿ ಪ್ರಗತಿಯನ್ನು ಸಾಧಿಸುತ್ತಿರುವುದು ಜಾಗತಿಕ ಕಾರ್ಮಿಕ ವರ್ಗದ ಈ ಒಂದು ಶತಕದ ಅತಿ ಮಹತ್ವದ ಸಾಧನೆಯಾಗಿದೆ.

ಲ್ಯಾಟಿನ್ ಅಮೆರಿಕದಲ್ಲಿರುವ ನಿಕರಾಗುವ, ಎಲ್‌ಸಾಲ್ವಡಾರ್, ಆಫ್ರಿಕ ಖಂಡದಲ್ಲಿರುವ ಅಂಗೋಲ, ಮೊಜಾಂಬಿಕ್, ಗಿನಿಬಿಸಾವೋ, ಇಥಿಯೋಪಿಯ; ಪಶ್ಚಿಮ ಏಷ್ಯದಲ್ಲಿರುವ ದಕ್ಷಿಣ ಯೆಮೆನ್ ಸಮಾಜವಾದದತ್ತ ನೋಡುತ್ತಿವೆ.

ಮೊದಲನೆಯ ಜಾಗತಿಕ ಮಹಾಯುದ್ಧ ಪ್ರಾರಂಭವಾಗುವ ವೇಳೆಗೆ ತಲೆದೋರಿದ್ದ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟು ಸತತವಾಗಿ ಮುಂದುವರಿಯುತ್ತಾ ಬಂದಿದ್ದು ಈಗ ಮೂರನೆಯ ಹಂತದಲ್ಲಿದೆ. ಬಂಡವಾಳಶಾಹಿ ವ್ಯವಸ್ಥೆ ಸಂಪೂರ್ಣವಾಗಿ ಬೆಳೆದಿರುವ ಉತ್ತರ ಅಮೆರಿಕ, ಯೂರೋಪ್‌ನ ದೇಶಗಳು ಮತ್ತು ಜಪಾನಿನಲ್ಲಿ ಇಂದು ಹಣದುಬ್ಬರ, ಬೆಲೆಏರಿಕೆ, ಕಾರ್ಮಿಕರ ಮತ್ತು ಜನರ ಜೀವನಮಟ್ಟದಲ್ಲಿ ಕುಸಿತ, ನಿರುದ್ಯೋಗ, ಬಡತನ, ಹಸಿವುಗಳನ್ನು ಅನುಭವಿಸುತ್ತಿವೆ.

ಅದೇ ವೇಳೆ ಸಮಾಜವಾದಿ ದೇಶಗಳಲ್ಲಿ ಈ ಯಾವ ಸಮಸ್ಯೆಯೂ ಇಲ್ಲದೆ ಜನರ ಜೀವನಮಟ್ಟ ಸತತವಾಗಿ ಏರುತ್ತಿದೆ. ಈ ನೂರು ವರ್ಷಗಳಲ್ಲಿ ಸಾರಿಗೆ ಸಂಪರ್ಕಗಳಲ್ಲಿ ತಾಂತ್ರಿಕತೆಯಲ್ಲಿ ಕ್ರಾಂತಿಕಾರಿ ಬೆಳವಣಿಗೆಗಳಾಗಿವೆ. ಈ ಬೆಳವಣಿಗೆಗಳನ್ನು ಸಮಾಜವಾದಿ ದೇಶಗಳಲ್ಲಿ ಜನರ ಶ್ರಮವು ಕಡಿಮೆ ಮಾಡಲು ಬಳಸಿದರೆ, ಬಂಡವಾಳಶಾಹಿ ದೇಶಗಳಲ್ಲಿ ಖಾಸಗಿ ಲಾಭಕ್ಕಾಗಿ, ನಿರುದ್ಯೋಗವನ್ನು, ಜನರ ಸಂಕಷ್ಟಗಳನ್ನು ಹೆಚ್ಚಿಸಲು ಬಳಸಲಾಗುತ್ತಿದೆ. ಈ ಕಾರಣಗಳಿಂದಾಗಿ ವಸಾಹತುಶಾಹಿಯಿಂದ ಸ್ವಾತಂತ್ರ್ಯ ಪಡೆದ ಮೂರನೆಯ ಜಗತ್ತಿನ ದೇಶಗಳ ಜನರು ತಮ್ಮ ದೇಶಗಳ ಅಭಿವೃದ್ಧಿಯ ಬಗ್ಗೆ ವಿಚಾರ ಮಾಡುವಾಗ ಸಹಜವಾಗಿಯೇ ಸಮಾಜವಾದಿ ದೇಶಗಳ ಸತತವಾದ ಪ್ರಗತಿಯಿಂದ ಪ್ರಭಾವಿತರಾಗುತ್ತಾರೆ.

ಹೇಮಾರ್ಕೆಟ್ ಮಾರಣಹೋಮದ ನಂತರದ ನೂರು ವರ್ಷಗಳಲ್ಲಿ ಜಾಗತಿ ಕಕಾರ್ಮಿಕವರ್ಗದ ಸಾಧನೆಗಳ ಕುರಿತು ವಿಚಾರ ಮಾಡುವಾಗ ಜಾಗತಿಕ ಕಾರ್ಮಿಕ ವರ್ಗದ ಒಂದು ಗಣನೀಯ ಭಾಗವಾಗಿರುವ ಭಾರತದ ಕಾರ್ಮಿಕ ವರ್ಗವು ಇಂದು ಎದುರಿಸುತ್ತಿರುವ ಸಮಸ್ಯೆಗಳ ಪ್ರಸ್ತಾಪ ಅಪ್ರಸ್ತುತವಾಗಲಾರದು.

ಭಾರತದಲ್ಲಿ ಎಲ್ಲಾ ಕೈಗಾರಿಕೆಗಳಲ್ಲೂ ಎಂಟುಗಂಟೆಗಳ ಕೆಲಸದ ದಿನ ಇನ್ನೂ ಕಾರ್ಯರೂಪಕ್ಕೆ ಬರಬೇಕಾಗಿದೆ. ರೈಲ್ವೆಯ ಲೋಕೋ ಸಿಬ್ಬಂದಿ, ಚಾಲಕ ಸಿಬ್ಬಂದಿ ಇದಕ್ಕೆ ಉತ್ತಮ ಉದಾಹರಣೆ. 1974 ರಲ್ಲಿ ವಿಜಯವಾಡದಲ್ಲಿ ಒಬ್ಬ ರೈಲ್ವೆ ಕಾರ್ಮಿಕನನ್ನು ಸತತವಾಗಿ 16 ಗಂಟೆಗಳ ಕಾಲ ದುಡಿಸಿದುದರ ಪರಿಣಾಮವಾಗಿ ಆತ ಮೃತನಾದುದು, ಅದನ್ನು ಪ್ರತಿಭಟಿಸಿ ಅಲ್ಲಿಯ ರೈಲ್ವೆ ಕಾರ್ಮಿಕರು ಮುಷ್ಕರ ಮಾಡಿದುದನ್ನು ಈ ಲೇಖಕರು ನೋಡಿರುತ್ತಾರೆ.

ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುದವುನ್ನು ಪ್ರತಿಯೊಬ್ಬರೂ ಕಾಣಬಹುದಾಗಿದೆ. ಲಿಂಗ ಭೇದವಿಲ್ಲದ ಗಂಡಿಗೂ ಹೆಣ್ಣಿಗೂ ಸಮಾನ ಕೆಲಸಕ್ಕೆ ಸಮಾನವೇತನ ಕೊಡಬೇಕು ಎಂದು ಭಾರತ ಸರ್ಕಾರವು ಕಾಯಿದೆ ಮಾಡಿದ್ದ ಅನೇಕ ಕೈಗಾರಿಕೆಗಳಲ್ಲಿ ಇದು ಇನ್ನೂ ಕಾಯ ಗತವಾಗಬೇಕಷ್ಟೆ.

ಕಾರ್ಮಿಕ ಸಂಘಗಳಿಗಿರುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಇಲ್ಲವೇ ಮೊಟಕು ಮಾಡುವ ಶಾಸನಗಳನ್ನು ಭಾರತ ಸರಕಾರ ಮಾಡುತ್ತಿದೆ. ಸಾರ್ವಜನಿಕ ಕ್ಷೇತ್ರದಲ್ಲಿರು ಕಾರ್ಮಿಕರಿಗೆ ರಾಜಕೀಯ ಹಕ್ಕುಗಳನ್ನು, ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕಿತ್ತುಕೊಳ್ಳು ಸನ್ನಾಹ ನಡೆದಿದೆ. ಭಾರತ ಸರ್ಕಾರ ಕಾರ್ಮಿಕ ವಿರೋಧಿ ಕೃತ್ಯಗಳ ವಿರುದ್ಧ ಅಂತ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ಐ ಎಲ್ ಒ ಮುಂದೆ ದೂರುಗಳಿವೆ.

ಭಾರತದಲ್ಲಿ ಕಾರ್ಮಿಕ ಸಂಘಗಳು ಕಾರ್ಮಿ ಕರ ಮತ್ತು ರೈತರ ಬೇಡಿಕೆಗಳಿಗಾಗಿ ಪ್ರಜಾಪ್ ಭುತ್ವಕಾಗಿ 1982 ಜನವರಿ 19 ರಂದು ಚಾರಿ ತ್ರಿಕವಾದ ಅಖಿಲ ಭಾರತ ಮುಷ್ಕರವನ್ನು ನಡೆಸಿವೆ, ಬೆಲೆ ಏರಿಕೆಯ ವಿರುದ್ಧ 198 ಫೆಬ್ರವರಿ 26 ರಂದು ನಡೆದ ಭಾರತ್ ಬಂದ್ ನಲ್ಲಿ ಕಾರ್ಮಿಕ ಸಂಘಗಳು ಕ್ರಿಯಾಶೀಲವಾ ಭಾಗವಹಿಸಿವೆ.

ಸಾಮ್ರಾಜ್ಯಶಾಹಿಗಳು ಭಾರತದ ಐಕ್ಯ ಮತ್ತು ಸಮಗ್ರತೆಗಳಿಗೆ ಸವಾಲೊಡ್ಡಿದ್ದಾ ಪಾಕಿಸ್ತಾನಕ್ಕೆ 2 ಶತಕೋಟಿ ಡಾಲರುಗ ಅತ್ಯಾಧುನಿಕವಾದ ವಿನಾಶಕಾರಿ ಶಸ್ತ್ರಾಸ್ತ್ರಗಳನ್ ರೇಗನ್ ಸರ್ಕಾರವು ಕೊಟ್ಟಿದೆ. ಅ. ಸಂ. ಸ ಸಾಮ್ರಾಜ್ಯಶಾಹಿಗಳು ಡಿಯಾಗೋಗಾರ್ಸಿಯ ದಲ್ಲಿ ಅಣ್ವಸ್ತ್ರ ನೆಲೆಯನ್ನು ಸ್ಥಾಪಿಸಿದ್ದಾರೆ ಬಾಂಗ್ಲಾ ದೇಶದ ಚಿತ್ತಗಾಂಗ್ ಮತ್ತು ಶ್ರೀಲಂಕಾದ ಟ್ರಿಂಕೋಮಲೆ ಬಂದರುಗಳನ್ ಅವರ ನೌಕಾಸೈನ್ಯದ ಹಡಗುಗಳು ಉಪಯೋ ಸುತ್ತಿವೆ. ಸಾಮ್ರಾಜ್ಯ ಶಾಹಿಗಳು ನಮ್ಮ ದೇಶದೊಳಗೆ ಪ್ರತ್ಯೇಕತಾವಾದಿ, ವಿಭಜನಕಾ ಶಕ್ತಿಗಳಿಗೆ, ಧಾರ್ಮಿಕ ಮೂಲಭೂತವಾದಿಗಳಿ ಪ್ರಚೋದನೆ ಮತ್ತು ಸಹಾಯಗಳನ್ನು ಕೊಡು ತ್ತಿದ್ದಾರೆ. ಇದು ಕಾರ್ಮಿಕ ವರ್ಗದ ಐಕ್ಯತೆ ಬಾಧಕವಾಗುತ್ತಿದೆ

ರಾಜೀವಗಾಂಧಿ ಸರ್ಕಾರವು ಅನುಸರಿಸ ತ್ತಿರುವ ಹೊಸ ಆರ್ಥಿಕ ಧೋರಣೆ, ಹೊ

ವಳಿ ಧೋರಣೆ, ಶ್ರೀಮಂತರ ಲಾಭವನ್ನು ಚ್ಚಿಸಿ ಕಾರ್ಮಿಕರ ಮತ್ತು ಜನಸಾಮಾನ್ಯರ ೀಲೆ ಹೊರೆಗಳನ್ನು ಹೆಚ್ಚಿಸಿದೆ, ನಿರುದ್ಯೋಗ ನ್ನು ಹೆಚ್ಚಿಸುತ್ತಿದೆ, ೪8000 ಕಾರ್ಖಾನೆ ು ಮುಚ್ಚಿ ಹೋಗಿ ಅನೇಕ ಲಕ್ಷ ಕಾರ್ಮಿಕರು ದಿಪಾಲಾಗಿದ್ದಾರೆ. ಅವರ ಹೊಸ ಶಿಕ್ಷಣ ತಿಯು ಸಾಮೂಹಿಕ ಅನಕ್ಷರತೆಯನ್ನು ುಂದುವರೆಸುತ್ತದೆ.

ಸಂಕುಚಿತವಾಗುತ್ತಾ ಬಂದಿರುವ ಜಾಗತಿಕ ಡವಾಳಶಾಹಿ ಮಾರುಕಟ್ಟೆ, ಅಭಿವೃದ್ಧಿಶೀಲ ಶಗಳ ಮೇಲೆ ಸಮಾಜವಾದಿ ಪ್ರಭಾವ, ತ್ತು ಬೆಳೆಯುತ್ತಾ ಮುಂದುವರಿದಿರುವ ಗತಿಕ ಬಂಡವಾಳ ಶಾಹಿ ವ್ಯವಸ್ಥೆಯ ಕಟ್ಟು ಸಾಮ್ರಾಜ್ಯಶಾಹಿಗಳಿಗೆ ದೊಡ್ಡ ವಲುಗಳಾಗಿವೆ. ಈ ಪರಿಸ್ಥಿತಿಯಿಂದ ಪಾರಾ ು ಮತ್ತೆ ಇಡೀ ಪ್ರಪಂಚವನ್ನು ತಮ್ಮ ಹೋಟಗೊಳಪಡಿಸಲು ಪರಮಾಣು ುದ್ಧ ಸಿದ್ಧತೆಗಳನ್ನು ನಡೆಸಿದ್ದಾರೆ. ಸಂ. ಸಂ. ಅಧ್ಯಕ್ಷ ರೋನಾಲ್ಡ್ ರೇಗನ್‌ರ ಾಯುದ್ಧದ ಯೋಜನೆ ಈ ಪ್ರಯತ್ನಗಳ ಚಿನ ಹಂತವಾಗಿದೆ.

ಮೇ ದಿನದ ಶತಮಾನೋತ್ಸವದ ಸಂದ ದಲ್ಲಿ ಜಾಗತಿಕ ಕಾರ್ಮಿಕವರ್ಗದ ಈ ಬಂದು ದ ಸಾಧನೆಗಳನ್ನು ಅವಲೋಕಿಸುವಾಗ ಮ್ರಾಜ್ಯಶಾಹಿಗಳ ಅಣುಯುದ್ಧ ಯೋಜನೆಗಳ ುದ್ಧವಾಗಿ, ವಿಶ್ವಶಾಂತಿ ರಕ್ಷಣೆಗಾಗಿ, 2000 ು ವರ್ಷದ ವೇಳೆಗೆ ಅಣ್ವಸ್ತ್ರಗಳನ್ನು ಸಂಪೂರ್ಣ ಿ ನಾಶ ಮಾಡಲು ಮಿಖಾಯಿಲ್ ಗೋರ್ಬ ವ್ ಕೊಟ್ಟಿರುವ ಸೂಚನೆಗಳನ್ನು ಭಾರತದ ರ್ಮಿಕ ವರ್ಗವು ಬೆಂಬಲಿಸಿ ಕಾರ್ಮಿಕ ವರ್ಗದ ತರರಾಷ್ಟ್ರೀಯತೆಯ ನಿಶಾನೆಯನ್ನು ಎತ್ತಿ ಯಬೇಕು ಮತ್ತು ದೇಶದ ಐಕ್ಯತೆ ಸಮಗ್ರತೆ ರಕ್ಷಣೆಗಾಗಿ, ಭಾರತ ಸರ್ಕಾರದ ದಿವಾಳಿಕೋರ ರ್ಥಿಕ ನೀತಿಗಳ ವಿರುದ್ಧವಾಗಿ ಕಾರ್ಮಿಕ— ರ ಸಖ್ಯತೆಗಾಗಿ ಮತ್ತು ತನ್ನ ತುರ್ತಿನ ಡಿಕೆಗಳಿಗಾಗಿ ಹೋರಾಡಲು ಪಣತೊಡ ಾಗಿದೆ. ಇಡೀ ಪ್ರಪಂಚದಲ್ಲಿ ಶೋಷಣೆಯನ್ನು ೊನೆಗೊಳಿಸಲು ತನ್ನ ಕರ್ತವ್ಯವನ್ನು ನಿರ್ವ ಬೇಕಾಗಿದೆ.

ಪ್ರಥಮ ಮಹಾಯುದ್ಧದ ನಂತರ

ಹೋರಾಟದ ಮಹಾಪೂರ

ರಶ್ಯಾದ ಅಕ್ಟೋಬರ್ ಕ್ರಾಂತಿಯ ಬೆನ್ನ ಹಿಂದೆಯೇ ರಶ್ಯನ್ ಕಾರ್ಮಿಕ ವರ್ಗದ ಧೀರ ಹೋರಾಟಗಳಿಂದ, ಯಶಸ್ಸಿನಿಂದ ಸ್ಫೂರ್ತಿ ಪಡೆದು ಯುರೋಪಿನಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಕ್ರಾಂತಿಯ ಅಲೆಯೇ ಎದ್ದಿತು.

1918ರ ಜನವರಿಯಲ್ಲಿ ಫಿನ್‌ಲೆಂಡ್‌ನಲ್ಲಿ ಕಾರ್ಮಿಕ ವರ್ಗದ ಸರಕಾರದ ಸ್ಥಾಪನೆಯಾಯಿತು. ಅಕ್ಟೋಬರ್ ಅಂತ್ಯದ ವೇಳೆಗೆ ಆಸ್ಟ್ರಿಯಾ ಹಾಗೂ ಹಂಗೆರಿಗಳಲ್ಲಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ಕ್ರಾಂತಿಗಳು ನಡೆದವು. ಹಂಗೆರಿಯಲ್ಲೂ ಇದು ಇನ್ನೂ ಮುಂದುವರಿದು ಮಾರ್ಚ್ 1919ರಲ್ಲಿ ಹಂಗೆರಿಯನ್ ಸೋವಿಯತ್ ಗಣರಾಜ್ಯ ಘೋಷಿಸಲ್ಪಟ್ಟಿತು 1918ರ ನವೆಂಬರ್‌ನಲ್ಲಿ ಜರ್ಮನಿಯಲ್ಲೂ ಕೈಸರ್ ಹಾಗೂ ಇತರ ರಾಜಪ್ರಭುತ್ವಗಳು ಕೊನೆಗೊಂಡವು. ಬೂರ್ಜ್ವಾ ಪ್ರಜಾಪ್ರಭುತ್ವ ಕ್ರಾಂತಿ ನಡೆಯಿತು. ಬವೇರಿಯಾ ಎಂಬ ನಗರದಲ್ಲಿ ಸೋವಿಯತ್ ಗಣರಾಜ್ಯ ಸ್ಥಾಪನೆಯಾಯಿತು.

ಆಸ್ಟ್ರಿಯಾ, ಹಂಗೆರಿ ಹಾಗೂ ಜರ್ಮನ್ ರಾಜಪ್ರಭುತ್ವಗಳ ಅಂತ್ಯದೊಂದಿಗೆ ಪೋಲೆಂಡ್, ಜೆಕೋಸ್ಲೋವಾಕಿಯಾ, ಯುಗೋಸ್ಲಾವಿಯಾ, ರೊಮೇನಿಯಾ, ಬಲ್ಗೇರಿಯಾಗಳಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳು.

ಇವೆಲ್ಲಾ ಹೋರಾಟಗಳಲ್ಲಿ, ಕ್ರಾಂತಿಗಳಲ್ಲಿ ಈ ದೇಶಗಳ ಕಾರ್ಮಿಕವರ್ಗ ಮುಂಚೂಣಿಯಲ್ಲಿತ್ತು. ಆದರೆ ಹೋರಾಟದ ನಾಯಕತ್ವವನ್ನು ತನ್ನ ಕೈವಶ ಮಾಡಿಕೊಳ್ಳುವಲ್ಲಿ ಅದು ಯಶಸ್ವಿಯಾಗಲಿಲ್ಲ ಈ ದೇಶಗಳ ಬೂರ್ಜ್ವಾಗಳು ಬಲಪಂಥೀಯ ಸಾಮಾಜಿಕ ಜನತಂತ್ರವಾದಿ (ಸೋಶಿಯಲ್ ಡೆಮಾಕ್ರೆಟ್) ಗಳ ನೆರವಿನಿಂದ ಕ್ರಾಂತಿಯ ಉಬ್ಬರವನ್ನು ಕೆಲವು ಸುಧಾರಣೆಗಳಿಗಷ್ಟೇ ಸೀಮಿತಗೊಳಿಸಿದರು.

ಆದರೂ ಈ ಅವಧಿಯಲ್ಲಿ ಕಾರ್ಮಿಕ ವರ್ಗದ ಹೋರಾಟ ಚಾರಿತ್ರಿಕ. ಮುಷ್ಕರದ ಆಂದೋಲನಕ್ಕೆ ರಾಜಕೀಯ ಸ್ವರೂಪ ದೊರೆತ ಅವಧಿಯದು. ಕ್ರಾಂತಿಕಾರಿ ಮಂಡಳಿಗಳನ್ನು ರಚಿಸಿಕೊಂಡು ರೈತರ, ಸೈನಿಕರ ಸಹಕಾರದೊಂದಿಗೆ ಹೊಸ ಸಂಘಟನೆಗಳನ್ನು ಹೋರಾಟದ ಹೊಸ ವಿಧಾನಗಳನ್ನು ಕಾರ್ಮಿಕವರ್ಗ ಬಳಸಿತು. ಈ ಹೋರಾಟಗಳು ಸೀಮಿತವಾದರೂ ಪ್ರಮುಖವಾದ ಸಾಧನೆಗಳೆಂದರೆ ದುಡಿಮೆಯ ಅವಧಿಯಲ್ಲಿ ಕಡಿತ, ಸಾಮಾಜಿಕ ಸಾಧನೆಗಳು ಹಾಗೂ ಕಾರ್ಮಿಕ ಸಂಘಗಳ ಹಕ್ಕುಗಳ ವರ್ಧನೆ.

ಈ ಅವಧಿಯಲ್ಲಿ ಪಶ್ಚಿಮ ಯುರೋಪ್ ಹಾಗೂ ಅಮೆರಿಕಾದ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲೂ ಕಾರ್ಮಿಕ ವರ್ಗದ ನೇತೃತ್ವದ ಹೋರಾಟಗಳಿಂದ ಕ್ರಾಂತಿಕಾರಿ ಸ್ಥಿತಿ ಏರ್ಪಟ್ಟರೂ ಬೂರ್ಜ್ವಾಗಳು ತಮ್ಮ ಪ್ರಭುತ್ವ ಕಾಯ್ದುಕೊಳ್ಳಲು ಸಮರ್ಥರಾದರು. ಈ ದೇಶಗಳ ಕಾರ್ಮಿಕವರ್ಗ ತನ್ನ ಹೋರಾಟದಿಂದ ಸಾಧಿಸಿದ ಸೀಮಿತ ಗುರಿಗಳೆಂದರೆ ಎಂಟು ಗಂಟೆಯ ದುಡಿಮೆ, ರಾಜಕೀಯ ವ್ಯವಸ್ಥೆಯ ತುಸು ಹೆಚ್ಚು ಪ್ರಜಾಪ್ರಭುತ್ವೀಕರಣ ಹಾಗೂ ಸಾಮಾಜಿಕ ಶಾಸನಗಳಲ್ಲಿ ಸುಧಾರಣೆ.

ಪ್ರಥಮ ಮಹಾಯುದ್ಧ ನಂತರ ಕಂಡು ಬಂದ ಈ ಎಲ್ಲಾ ಕ್ರಾಂತಿಕಾರಿ ಉಬ್ಬರದ ಈ ಒಂದು ಪ್ರಮುಖ ರಾಜಕೀಯ ಫಲಿತಾಂಶವೆಂದರೆ ಅದುವರೆಗೆ ಕಾರ್ಮಿಕ ಆಂದೋಲನ ಕ್ರಾಂತಿಕಾರಿ ಹೋರಾಟಗಳಿಗೆ ತಡೆಯಂತೆ ಹಿಂದೆಳೆಯುತ್ತಿದ್ದ ಸುಧಾರಣಾವಾದೀ ಮುಖಂಡರ ಪ್ರಭಾವದಲ್ಲಿ ಇಳಿಮುಖತೆ, ಸಮರಧೀರ ಕ್ರಾಂತಿಕಾರಿಗಳ ಗುಂಪುಗಳ ಉದಯ, ಫಲವಾಗಿ ಕಮ್ಯುನಿಸ್ಟ್ ಪಕ್ಷಗಳ ಸ್ಥಾಪನೆ.

ಅಮೇರಿಕಾ ಖಂಡದಲ್ಲಿ

ಸ್ವಾತಂತ್ರ್ಯ ದೀಪಗಳ ಉದಯ

ಕ್ಯೂಬಾ

ಜಮೀನು 8 ಶೇಕಡ ಭೂಮಾಲಕರಲ್ಲಿ ಕೇಂದ್ರೀಕೃತಗೊಂಡು, ದೇಶದ ಕೈಗಾರಿಕೆಗಳೆಲ್ಲ ಬಹುದಾದ ಸಕ್ಕರೆ ಕಾರ್ಖಾನೆಗಳು ಹಾಗೂ ತೈಲಾಗಾರಗಳು ಅಮೇರಿಕನ್ ಗುತ್ತೇದಾರಿಗಳ ಹಿಡಿತದಲ್ಲಿದ್ದುದರಿಂದ ಅತ್ಯಂತ ಕ್ರೂರ ಶೋಷಣೆ, ಸಾಮಾಜಿಕ ದಮನ, ರಾಜಕೀಯ ಅಧಿಕಾರಗಳ ಅಭಾವದಿಂದ ಕ್ಯೂಬಾದ ಜನತೆ ನರಳುತ್ತಿದ್ದಾಗ ಸಹಜವಾಗಿಯೇ ಸಾಮ್ರಾಜ್ಯ ಶಾಹಿಗಳು ಹಾಗೂ ಅವರ ಏಜೆಂಟರ ವಿರುದ್ಧ ಶಕ್ತಿಶಾಲೀ ಹೋರಾಟಗಳು ನಡೆಯುತ್ತಿದ್ದವು. 1952 ರಲ್ಲಿ ಅಮೆರಿಕನ್ ದಲ್ಲಾಳಿ ಬಾಟಿಸ್ಟಾ ನಡೆಸಿದ ಪ್ರತಿಗಾಮಿ ಮಿಲಿಟರಿ ಕ್ಷಿಪ್ರ ಕ್ರಾಂತಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿತು.

ಬಾಟಿಸ್ಟಾ ಸರ್ವಾಧಿಕಾರದ ವಿರುದ್ಧ ಹೋರಾಟ ನಡೆಸುತ್ತಿದ್ದ ಮುಖ್ಯ ಸಂಘಟನೆಗಳೆಂದರೆ, ಫಿಡೆಲ್ ಕ್ಯಾಸ್ಟ್ರೋ ನೇತೃತ್ವದ ಯುವ ಕ್ರಾಂತಿಕಾರಿಗಳ ಒಂದು ಗುಂಪು ಹಾಗೂ ಕ್ಯೂಬಾ ಕಮ್ಯುನಿಸ್ಟರ ಜನತಾ ಸಮಾಜವಾದಿ ಪಕ್ಷ.

ಜುಲೈ 26, 1953. ಮೊಂಕಾಡಾ ಮಿಲಿಟರಿ ಬ್ಯಾರಾಕುಗಳ ಮೇಲೆ ಕ್ರಾಂತಿಕಾರಿಗಳ ಸುಪ್ರಸಿದ್ಧ ದಾಳಿ. ಕ್ಯೂಬಾಜನತೆಯ ಹೋರಾಟದಲ್ಲಿ ಹೊಸ ಘಟ್ಟ. ಬಂಧನಕ್ಕೊಳಗಾದ ಕಾಸ್ಟ್ರೋರವರ ವಿಚಾರಣೆಯ ಸಮಯದಲ್ಲಿ ಸುಪ್ರಸಿದ್ಧ "ಇತಿಹಾಸ ನನ್ನನ್ನು ದೋಷ ಮುಕ್ತಗೊಳಿಸುತ್ತದೆ" ಭಾಷಣ. "ಜುಲೈ 26 ಆಂದೋಲನ".

1955 ರಲ್ಲಿ ಜನತೆಯ ಒತ್ತಡದಿಂದಾಗಿ ಬಿಡುಗಡೆ ಹೊಂದಿದ ಕ್ಯಾಸ್ಟ್ರೋ ಹಾಗೂ ಸಂಗಡಿಗರು ಮೆಕ್ಸಿಕೋಗೆ ತೆರಳಿ ಬಾಟಿಸ್ಟಾ ಸರ್ವಾಧಿಕಾರದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಸಿದ್ಧಗೊಳ್ಳಲಾರಂಭಿಸಿದರು.

ಪರ್ವತ ಪ್ರದೇಶಗಳಿಂದ, ರೈತ ಜನಗಳ ಸಹಕಾರದಿಂದ ಬಾಟಿಸ್ಟಾ ವಿರುದ್ಧ ಗೆರಿಲ್ಲಾ ಹೋರಾಟ 1956ರ ಅಂತ್ಯದಲ್ಲಿ ಆರಂಭ. ಜನತಾ ಸಮಾಜವಾದಿ ಪಕ್ಷದಿಂದ ಗೆರಿಲ್ಲಾ ಹೋರಾಟಕ್ಕೆ ಸರ್ವ ರೀತಿಯ ಬೆಂಬಲ. ಈ ಹೋರಾಟ ನಗರಗಳಲ್ಲಿ ಬೆಂಬಲ ಪಡೆಯಲು ಕಾರ್ಮಿಕ ವರ್ಗದ ಬೆಂಬಲದ ಅವಶ್ಯಕತೆಯಅರಿವು ಗೆರಿಲ್ಲಾ ಹೋರಾಟಗಾರರಿಗೆ ಉಂಟಾದ ಪರಿಣಾಮವಾಗಿ 1958 ರಲ್ಲಿ ಕಾರ್ಮಿಕರ ವಿವಿಧ ಸಮರಧೀರ ಸಂಘಟನೆಗಳನ್ನು ಐಕ್ಯಗೊಳಿಸಿ ಸಂಯುಕ್ತ ರಾಷ್ಟ್ರೀಯ ಕಾರ್ಮಿಕರ ಸಂಘದ ರಚನೆಯಾಯಿತು.

ಗೆರಿಲ್ಲಾ ಆಂದೋಲನ ತನ್ನ ಕಾರ್ಯಕ್ರಮ ಹಾಗೂ ಗುಣಗಳಿಂದಾಗಿ ಹೆಚ್ಚುಹೆಚ್ಚು ಜನ ಬೆಂಬಲಗಳಿಸಲಾರಂಭಿಸಿತು. 1958ರ ಅಂತ್ಯದ ವೇಳೆಗೆ ಬಾಟಿಸ್ಟಾ ಆಡಳಿತದ ವಿರುದ್ಧ ಸರ್ವತೋಮುಖ ದಾಳಿ.

ಜನವರಿ 1, 1959. ಫಿಡೆಲ್ ಕಾಸ್ಟ್ರೋ ಹಾಗೂ ರಾವುಲ್ ಕ್ಯಾಸ್ಟ್ರೋ ನೇತೃತ್ವದ ಬಂಡಾಯ ಪಡೆಗಳು ಸಾಂಟಿಯಾಗೋ ಡೆ ಕ್ಯೂಬಾ ನಗರವನ್ನು ಪ್ರವೇಶಿಸಿದವು. ಅತ್ತ ಚೆಗೆವಾರ ನೇತೃತ್ವದ ಪಡೆಗಳು ಸಾಂತಾ ಕ್ಲಾರಾ ನಗರ ವಶಪಡಿಸಿಕೊಂಡು ಹವಾನಾದತ್ತ ಸಾಗಿದವು.

ಇನ್ನು ಉಳಿಗಾಲವಿಲ್ಲವೆಂದು ಕಂಡುಕೊಂಡ ಬಾಟಿಸ್ಟಾ ಹಾಗೂ ಅತನ ಚಮಚಾಗಳು ಪರಾರಿಯಾದರು. ಜನವರಿ 8, 1959. ಹವಾನಾದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಜನತೆಯ ವಿಜಯದ ಘೋಷಣೆ.

ನಿಕಾರಾಗುವಾ

ಮಧ್ಯ ಅಮೆರಿಕಾದ ಅತೀ ದೊಡ್ಡದಾದ ಪ್ರಾಕೃತಿಕ ಸಂಪನ್ಮೂಲಗಳಿಂದ ತುಂಬಿದ, ಹಾಗೂ ಭೌಗೋಳಿಕವಾಗಿ ಮಹತ್ವದ ಸ್ಥಾನದಲ್ಲಿರುವ ನಿಕಾರಾಗುವಾ ಅತಿಕ್ರಮಣಕಾರರ ಬಾಯಲ್ಲಿ ಹಲವು ಬಾರಿ ನೀರೂರಿಸಿದೆ. ಈಗಲೂ ಕೂಡಾ 16 ರಿಂದ 19ನೇ ಶತಮಾನದವರೆಗೆ ಸ್ಪಾನಿಷ್ ವಸಾಹತು ಶಾಹಿಗಳ ಅಧೀನವಿದ್ದ ಈ ದೇಶ ನಂತರ ಬ್ರಿಟಿಷ್ ಮತ್ತು ಅಮೆರಿಕನ್ನರ ನಡುವಿನ ಪ್ರತಿಸ್ಪರ್ಧೆಯ ತಾಣವಾಯಿತು. ಅಮೇರಿಕನ್ ನಾವಿಕ ಪಡೆಗಳ ಬೂಟುಗಾಲುಗಳು ಈ ಸುಂದರ ದೇಶವನ್ನು ಹಲವು ಬಾರಿ ಪುಡಿಗೈದಿದೆ. 2 ಲಕ್ಷ ನಿಕಾರಾಗುವಾ ನಿವಾಸಿಗಳ ಆಹುತಿ ಪಡೆದಿದೆ. ಈಗಲೂ ಮತ್ತೊಂದು ಅವಕಾಶ ಪಡೆಯಲು ಯತ್ನಿಸುತ್ತಿವೆ.

1933. ನಿಕಾರಾಗುವಾದ ರಾಷ್ಟ್ರೀಯ ನಾಯಕ "ಸ್ವತಂತ್ರ ಜನತೆಯ ಸೇನಾಧಿಪತಿ" ಎಂದು ಹೆಸರಾದ ಸ್ಯಾಂಡಿನೋ ರವರ ನೇತೃತ್ವದಲ್ಲಿ ನಡೆದ ಜನತಾ ಹೋರಾಟದ ಪರಿಣಾಮವಾಗಿ ಅಮೆರಿಕನ್ ಅತಿಕ್ರಮಣಗಾರರು ದೇಶ ಬಿಟ್ಟೋಡಬೇಕಾಯಿತು.

ಆದರೆ ಅಮೆರಿಕನ್ ರಾಯಭಾರಿ ಕಚೇರಿಯ ನೆರವಿನಿಂದ ನಡೆಸಿದ ಪಿತೂರಿಯಲ್ಲಿ ಸ್ಯಾಂಡಿನೋ ಕೊಲೆಯಾದರು. ಈ ಪಿತೂರಿಯ ಪ್ರಮುಖ ವ್ಯಕ್ತಿಸೊಮೋಝಾ ಆರಂಭಿಸಿದ "ರಾಜವಂಶ" 45 ವರ್ಷಗಳ ಕಾಲ ಸುಲಿಗೆ ನಡೆಸಿ ದೇಶವನ್ನು ಅಮೇರಿಕಾದ ಅರೆ ವಸಾಹತುವನ್ನಾಗಿಸಿಬಿಟ್ಟಿತು.

ಆದರೆ ಸ್ಯಾಂಡಿನೋ ಹೊತ್ತಿಸಿದ ಸ್ವಾತಂತ್ರ್ಯ ಹೋರಾಟದ ಕಿಡಿ ನಂದಿರಲಿಲ್ಲ. 1961 ರಲ್ಲಿ ದೇಶಪ್ರೇಮಿಗಳ ಒಂದು ಗುಂಪು ಸ್ಯಾಂಡಿನಿಸ್ಟಾ ರಾಷ್ಟ್ರೀಯ ವಿಮೋಚನಾ ರಂಗ ಸ್ಥಾಪಿಸಿ ಸೊಮೋಝಾ ಸರ್ವಾಧಿಕಾರದ ವಿರುದ್ಧ ಭೀಷಣ ಸಶಸ್ತ್ರ ಹೋರಾಟ ನಡೆಸಿ ಅಂತಿಮವಾಗಿ ಜುಲೈ 19, 1979 ರಲ್ಲಿ ಕ್ರಾಂತಿ ಯಶಸ್ವಿಯಾಯಿತು. 20 ವರ್ಷಗಳ ಈ ಹೋರಾಟದಲ್ಲಿ ಮಡಿದ ನಿಕಾರಾಗುವಾನ್ನರ ಸಂಖ್ಯೆ 50 ಸಾವಿರ. ಇವರಲ್ಲಿ 90 ಶೇ. 8 ರಿಂದ 20 ವಯಸ್ಸಿನ ಮಕ್ಕಳು.

ನದಿಯಲಿ ಬೆಳಗಿದ ಕೆಂಬಾವುಟ

ಆ ವರ್ಷ ವಸಂತವು ತಡವಾಗಿ ಅಲ್ಲಿನ ಬೀದಿಗಳಲ್ಲಿ ಕಾಲಿಟ್ಟಿತ್ತು. ಮಾಗಿಯ ಚಳಿಯಲ್ಲಿ ಹೆಪ್ಪುಗಟ್ಟಿದ್ದ ನದಿಗಳೆಲ್ಲ ಮೇ ಒಂದರ ವೇಳೆಗೆ ಕರಗಲು ಪ್ರಾರಂಭಿಸಿತ್ತು.

ಆ ಊರಿನಲ್ಲಿ ಮೇ ಒಂದರಂದು ಹೆಪ್ಪುಗಟ್ಟಿದ್ದ ನದಿ ಕರಗುವುದನ್ನು ನೋಡಲು ಜನರಿಗೆ ಒಬ್ಬವೋ ಹಬ್ಬ. ಎಲ್ಲರೂ ಒಬ್ಬೊಬ್ಬರಾಗಿ ನದಿ ದಡಕ್ಕೆ ಬಂದು ಸೇರುತ್ತಿದ್ದರು. ಕೆಲವು ಕ್ಷಣಗಳಲ್ಲಿ ಅಲ್ಲಿ ಜಾತ್ರೆಯೇ ಸೇರಿಬಿಟ್ಟಿತು. ಜನರ ಗಲಾಟೆ, ನಗುವ, ಕೇಕೆಗಳ ಮಧ್ಯೆ ಮಂಜು ನೀರಾಗಿ ಕರಗುತ್ತಾ, ಕುಣಿಯುತ್ತಾ ಗಾಳಿಗೆ ಹನಿಗಳ ತೂರುತ್ತಾ ಸಾಗಿತ್ತು.

ಜನರ ಉತ್ಸಾಹದ ಕೇಕೆ, ಗದ್ದಲ, ಕೂಗಾಟಗಳು ಬಹುದೂರದವರೆಗೂ ಕೇಳಿಸುತ್ತಿತ್ತು. ಆ ದಿನ ನದಿಯ ದಡದ ಉಸ್ತುವಾರಿಗಾಗಿ ಓಕ್ರಾಪ್ಕಿನ್, ಸ್ಥಳೀಯ ಪೋಲೀಸ್ ಕಛೇರಿಯಿಂದ ನೇಮಿಸಲ್ಪಟ್ಟಿದ್ದ. ಜನರ ಕೂಗು ತಾರಕಕ್ಕೇರುತ್ತಿದ್ದಂತೆ "ಅವರು ಏನೂ ತೊಂದರೆ ಕೊಡದಿದ್ದಲ್ಲಿ, ಈ ಜನಜಂಗುಳಿ ಏನೂ ಗಲಾಟೆ ಹುಟ್ಟು ಹಾಕದಿದ್ದಲ್ಲಿ ಓ! ನಾನು ಗೆದ್ದೆ. ಅದೇ ನನ್ನ ಮೇ ದಿನ" ಎಂದುಕೊಳ್ಳುತ್ತಿದ್ದಂತೆ ಹರಿಯುತ್ತಿದ್ದ ನೀರಿನ ಮೇಲೆ ತೇಲುತ್ತಿದ್ದ ಐಸ್ ತುಂಡುಗಳನ್ನು ನೋಡಿ ಒಂದು ಕ್ಷಣ ಗಾಬರಿಯಾದ. ತೇಲುತ್ತಿದ್ದ ಐಸ್ ತುಂಡಿನ ಮೇಲೆ ಪುಟ್ಟದಾದ ಕೆಂಪು ಧ್ವಜವೊಂದು ಗಾಳಿಗೆ ಪಟಪಟ ರೆಕ್ಕೆ ಬಡಿಯುತ್ತಿತ್ತು.

ಜನರು ಐಸ್ ತುಂಡನ್ನೇ ಹಿಂಬಾಲಿಸುತ್ತಾ ಉತ್ಸಾಹದ ಕೂಗು ಹಾಕುತ್ತಾ ಒಂದೆಡೆ ಗುಂಪಾಗುತ್ತಿದ್ದರು. ಇದ್ದಕ್ಕಿದ್ದಂತೆ ಓಕ್ರಾಪ್ಕಿನ್ ಬೆನ್ನ ಹಿಂದೆ "ಮೇ ದಿನ ಚಿರಾಯುವಾಗಲಿ" ಎಂಬ ಘೋಷಣೆ ಕೇಳಿಸಿತು. ಅದರ ಹಿಂದೆಯೇ ಸಾವಿರಾರು ಕಂಠಗಳು ಮಾರ್ದನಿಗೊಂಡವು. ಬೆಚ್ಚಿಬಿದ್ದ ಪೋಲೀಸ್ ಅಧಿಕಾರಿ ಗುಂಪನ್ನು ಕಂಡು ಭೀತನಾಗಿ ಜೇಬಿನಲ್ಲಿದ್ದ ಸೀಟಿಯಿಂದ ಜೋರಾಗಿ ಜನ ಚದುರಲು ಆಜ್ಞೆ ಮಾಡಿದ.

ಆದರೆ ಅದು ಮೇ ದಿನವಲ್ಲವೆ. ರೆಕ್ಕೆ ಬಡಿಯುತ್ತಾ ಹಾರುತ್ತಿದ್ದ ಕೆಂಪುಧ್ವಜ ನಿರ್ಭೀತವಾಗಿ ತೇಲುತ್ತಿತ್ತು. ಅದರ ಹಿಂದೆಯೇ ಸಮಸ್ತ ಗುಂಪೂ ಕೇಕೆಹಾಕುತ್ತಾ ನದಿ ದಡದಲ್ಲಿ ಹಿಂಬಾಲಿಸುತ್ತಿತ್ತು. ಪೋಲೀಸ್ ಅಧಿಕಾರಿಯ ಆಜ್ಞೆಗಳು ಕೇಕೆಗಳ ಮಧ್ಯೆ ಎಲ್ಲಿ ಮಾಯವಾಯಿತೋ. ಸೀಟಿ ಊದಿ ಸುಸ್ತಾದ ಪೋಲಿಸ್ ಮುಖ ಕೆಂಪಗಾಗತೊಡಗಿತ್ತು.

ಓಕ್ರಾಪ್ಕಿನ್, ಪಾಪದ ಪೋಲೀಸ್ ಅಧಿಕಾರಿ ಸೀಟಿ ಊದುತ್ತಲೇ ಇದ್ದ. ಕೆಂಪುಧ್ವಜ ಹೊತ್ತ ಐಸ್ ತುಂಡು ತೇಲುತ್ತಾ ತೇಲುತ್ತಾ ಕೊನೆಗೆ ಅವನು ನಿಂತಿದ್ದ ಕಡೆಗೇ ಬಂದು ಸೇರಿತು. ಜನರು ಅದನ್ನೇ ಹಿಂಬಾಲಿಸಿ ಬಂದರು. ತಕ್ಷಣವೇ ಪೋಲೀಸ್ ಅಧಿಕಾರಿಯ ತಲೆಯಲ್ಲಿ ಒಂದು ಮಿಂಚು ಹಾದು ಹೋಯಿತು. 'ನಾನು ನೀರಿಗೆ ನೆಗೆದು 'ಆ ಕೆಂಪು ಧ್ವಜವನ್ನು ಕಿತ್ತೆಸೆದರೆ.... ಈ ಗೋಳೇ ತಪ್ಪುತ್ತದೆ'.

ಕೇವಲ ಒಂದು ಕ್ಷಣ ಅಷ್ಟೆ. ತಕ್ಷಣವೇ ಅಧಿಕಾರಿ ನದಿಯ ದಡದಿಂದ ಮಾಯವಾಗಿದ್ದ. ಊದುತ್ತಿದ್ದ ಸೀಟಿ ಎಲ್ಲೋ ಬಿದ್ದಿತ್ತು. ತಲೆಯ ಪೋಲೀಸ್ ಟೋಪಿ ನೀರಿನಾಳ ಕಾಣುತ್ತಿತ್ತು. ನೀರಿನ ಮಧ್ಯೆ ಕೈಯೆತ್ತಿ ಸಹಾಯಕ್ಕೆ ಕಿರುಚುತ್ತಿದ್ದ ಅಧಿಕಾರಿಯ ತಲೆಯಿಂದ ಕೆಂಪು ಧ್ವಜ ಯಾವಾಗಲೋ ಮಾಯವಾಗಿತ್ತು. ಆದರೆ ಕೊರೆಯುವ ನೀರಿಗೆ ಧುಮುಕಿ ಆತನನ್ನು ಬದುಕಿಸಲು ಯಾರೂ ಸಿದ್ಧರಿರಲಿಲ್ಲ.

"ಹೇ ! ಸುಖ ಪ್ರಯಾಣ ನಿನ್ನದಾಗಲಿ" ದಡದಿಂದ ಧ್ವನಿಯೊಂದು ಕೇಳಿಸಿತು.

"ದೂರದ ಸಮುದ್ರಕ್ಕೆ ನಮ್ಮ ಶುಭಾಶಯಗಳನ್ನು ತಿಳಿಸು".

ಮತ್ತೊಂದು ಧ್ವನಿ.

ಮರುಕ್ಷಣವೇ ಒಕ್ಕೊರಲಿನಿಂದ ಕೂಗಿದರು- "ಮೇ ದಿನದ ಶುಭಾಶಯಗಳು ಹೋಗಿಬಾ"

ಪೋಲೀಸ್ ಅಧಿಕಾರಿ ಸ್ವಾಧೀನ ಕಳೆದುಕೊಳ್ಳುತ್ತಿದ್ದ. ಜೀವ ತೂಗುಯ್ಯಾಲೆಯಾಡತೊಡಗಿತ್ತು. ನೀರಿನಲ್ಲಿ ಮುಳುಗಲು ಪ್ರಾರಂಭಿಸಿದ "ಸಹಾಯ" ಕೂಗು ಮಾತ್ರ ಇನ್ನೂ ನಿಂತಿರಲಿಲ್ಲ.

— ನಾಲ್ಕು ಜನರ ಉತ್ಸಾಹಿ ಗುಂಪೊಂದು ತಕ್ಷಣವೇ ನೀರಿಗೆ ಧುಮುಕಿತು. ಓಕ್ರಾಪ್ಕಿನ್‌ನನ್ನು ದಡ ಸೇರಿಸುವಷ್ಟರಲ್ಲಿ ಆತನ ಬದುಕು ಸಾಕುಸಾಕಾಗಿತ್ತು. ನಡುಗುತ್ತಾ ಅಧಿಕಾರಿ ನಿಂತೊಡನೆ ಜನಜಂಗುಳಿ ಕೇಕೆ ಹಾಕತೊಡಗಿತು. ಜನರು ವಿನೋದದಲ್ಲಿ ಮುಳುಗಿದ್ದಾಗ ಕೆಂಪು ಧ್ವಜ ಹೊತ್ತ ಐಸ್ ತುಂಡು ರೆಕ್ಕೆ ತೆರೆದ ಹಕ್ಕಿಯಂತೆ ಹಾರುತ್ತಾ, ಈಜುತ್ತಾ ವಸಂತದ ಗಾಳಿಯಲ್ಲಿ ರೆಕ್ಕೆ ಬಡಿಯುತ್ತಿತ್ತು.

"ಮೇ ದಿನ ಚಿರಾಯುವಾಗಲಿ" ದಡದಿಂದ ಸಹಸ್ರ ಕಂಠಗಳ ಕೂಗು ಮೊರೆದೆದ್ದಿತು. ಪೋಲೀಸ್ ಅಧಿಕಾರಿ ಓಕ್ರಾಪ್ಕಿನ್‌ನ ಸದ್ದು ಮಾಡಬೇಕಾಗಿದ್ದ ಸೀಟಿ ಮಾತ್ರ ಸುಸ್ತಾಗಿ ನೆಲಕ್ಕೊರಗಿತ್ತು.

ಲೆನಿನ್, ನಿನ್ನ ಕೈಗಳು ಕೆಲಸ—
ಮಾಡುತ್ತಲೇ ಇದ್ದವು
ನಿನ್ನ ಮನಸ್ಸೆಂದೂ ವಿಶ್ರಾಂತಿ ಅರಿತಿರಲಿಲ್ಲ
ಕೊನೆಗೆ
ದಿಗಂತದ ಅಗಲದಲ್ಲಿ
ಹೊಳೆಯುವ ಪ್ರತಿಮೆಯೊಂದೆದ್ದಿತು
ಮೂರ್ತಿಯ ಹಾಗೆ
ರಕ್ತಮಯವಾಗಿತ್ತು ಅದು
ಚಿಂದಿ ಬಟ್ಟೆ ತೊಟ್ಟ ವಿಜಯ
ಸೂರ್ಯಪ್ರತಿಭೆಗಿಂತ ಸುಂದರ ಹೆಂಗಸು
ಮೈಯೆಲ್ಲ ಗಾಯದ ಕಲೆ, ಹೊಗೆ
ಮುಸುಕಿದವಳು,
ಬಲು ದೂರ ದೇಶಗಳ ಜನ ತಲೆ ಎತ್ತಿ
ನೋಡಿದರು :
ಹೌದು, ಆಕೆಯೇ, ನಿಸ್ಸಂದೇಹವಾಗಿ-
ಅದು ಕ್ರಾಂತಿ.
ವಿಶ್ವದ ಹಳೆ ಹೃದಯ ಹೊಸ ತಾಳ ಹಾಕಿತು

ಪಾಬ್ಲೊ ನೆರೂದ

ಸಮಾಜವಾದಿ ದೇಶಗಳಲ್ಲಿ

ಎಲ್ಲರಿಗೂ ಶಿಕ್ಷಣ, ಆರೋಗ್ಯ

ಭಾರತದಂತಹ ಮತ್ತು ಅಮೆರಿಕಾದಂತಹ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲೂ ಒಬ್ಬ ದುಡಿಮೆಗಾರ ತನ್ನ ಶ್ರಮಕ್ಕೆ ಪ್ರತಿಫಲವೆಂದು ಪಡೆಯುವ ಸಂಬಳದಲ್ಲೇ ತನ್ನ ಮಕ್ಕಳ ಪಾಲನೆ, ಪೋಷಣೆ, ವಿದ್ಯಾಭ್ಯಾಸಕ್ಕೆ ಖರ್ಚು ಮಾಡಬೇಕು, ಔಷಧಿಗೆ ತೆರಬೇಕು, ಮನೋರಂಜನೆಗೆ ತೆರಬೇಕು ಹಾಗೂ ತನ್ನ ವೃದ್ಧಾಪ್ಯಕ್ಕೆ ವ್ಯವಸ್ಥೆ ಮಾಡಿಕೊಳ್ಳಬೇಕು. ಆದರೆ ಸಮಾಜವಾದಿ ದೇಶಗಳಲ್ಲಿ ಹಾಗಿಲ್ಲ. ಮೂರು ವರ್ಷಗಳ ಹಿಂದೆ ಕಾರ್ಲ್‌ಮಾರ್ಕ್ಸ್ ತನ್ನ ಕೃತಿ "ಗೋಥಾ ಕಾರ್ಯಕ್ರಮ ವಿಮರ್ಶೆ"ಯಲ್ಲಿ ಸೂಚಿಸಿದಂತೆ ಪ್ರತಿಯೊಬ್ಬನ ಶಿಕ್ಷಣ, ಆರೋಗ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗಾಗಿ ಸಮಾಜವಾದೀ ಪ್ರಭುತ್ವಗಳು ಪ್ರತ್ಯೇಕ ನಿಧಿಯೊಂದನ್ನು— ಸಾಮಾಜಿಕ ಬಳಕೆಯ ನಿಧಿ–ಸ್ಥಾಪಿಸಿವೆ.

ಪುಕ್ಕಟೆ ಶಿಕ್ಷಣ ಹಾಗೂ ನೈಪುಣ್ಯ ಹೆಚ್ಚಿಸಲು, ಪುಕ್ಕಟೆ ವೈದ್ಯಕೀಯ ನೆರವು, ಭತ್ಯೆ, ಪಿಂಚಣಿ ಹಾಗೂ ಇತರ ಸೌಲಭ್ಯಗಳಿಗಾಗಿ, ಸಂಬಳ ಸಹಿತ ವಾರ್ಷಿಕ ರಜಾ, ಪುಕ್ಕಟೆ ಹಾಗೂ ಇಳಿಸಿದ ಬೆಲೆಗಳಲ್ಲಿ ಪ್ರವಾಸೀ ಗೃಹ ಸೌಲಭ್ಯ, ಶಾಲಾ–ಪೂರ್ವ ಆರೈಕೆ ಸಂಸ್ಥೆಗಳಲ್ಲಿ ಮಕ್ಕಳಿಗಾಗಿ ಈ "ಸಾಮಾಜಿಕ ಬಳಕೆ ನಿಧಿ" ಯನ್ನು ವಿನಿಯೋಗಿಸಲಾಗುತ್ತಿದೆ.

ಈ ನಿಧಿ ಸೋವಿಯೆತ್ ಒಕ್ಕೂಟದಲ್ಲಿ 1928 ರಿಂದ 1980ರ ಮಧ್ಯೆ ತಲಾ 37 ಪಟ್ಟು ಹೆಚ್ಚಿದೆ.

ಬುಲ್ಗೇರಿಯಾದಲ್ಲಿ 1960 ರಿಂದ 1980ರ ನಡುವೆ ತಲಾ 6.4 ಪಟ್ಟು ಹೆಚ್ಚಿದೆ.

ಇದೇ ಅವಧಿಯಲ್ಲಿ ಹಂಗೇರಿಯಲ್ಲಿ 6.3 ಹೆಚ್ಚಿದೆ.

ಜರ್ಮನ್ ಪ್ರಜಾ ಸತ್ತಾತ್ಮಕ ಗಣರಾಜ್ಯದಲ್ಲಿ 4.2 ಪಟ್ಟು ಹೆಚ್ಚಿದೆ.

ರೋಮಾನಿಯಾದಲ್ಲಿ 4.5 ಪಟ್ಟು ಹೆಚ್ಚಿದೆ.


ಜೆಕೋಸ್ಲೋವಾಕಿಯಾದಲ್ಲಿ 3.1 ಪಟ್ಟು ಹೆಚ್ಚಿದೆ.

ಅಂತರ. ರಾಷ್ಟ್ರೀಯ ಬ್ಯಾಂಕ್ ಎರಡು ಭಿನ್ನ ಮಾದರಿಗಳು

ಹಲವು ಸಮಾಜವಾದಿ ದೇಶಗಳು ಸೇರಿ ರಚಿಸಿಕೊಂಡ ಬ್ಯಾಂಕಿನ ಹೆಸರು ಅಂತರ್ರಾಷ್ಟ್ರೀಯ ಆರ್ಥಿಕ ಸಹಕಾರ ಬ್ಯಾಂಕ್. ಈ ಬ್ಯಾಂಕಿನಲ್ಲಿ ವಿವಿಧ ಸದಸ್ಯ ರಾಷ್ಟ್ರಗಳ ಹಣಕಾಸಿನ ವಂತಿಗೆ (ಪರಸ್ಪರರಫ್ತಿನಲ್ಲಿ ಆಯಾದೇಶದಪಾಲಿನಅನುಪಾತದಲ್ಲಿರುತ್ತದೆ.) ಯ ಗಾತ್ರ ಬೇರೆಬೇರೆಯಾಗಿದ್ದರೂ ಬ್ಯಾಂಕಿನ ವ್ಯವಹಾರ ನಿರ್ಣಯಗಳಲ್ಲಿ ಎಲ್ಲಾ ದೇಶಗಳಿಗೂ ಸಮಾನವಾಗಿ ಒಂದೊಂದೇ ಮತಗಳು ಉದಾಹರಣೆಗೆ ಶೇ. 38 ರಷ್ಟು ಪಾಲು ಹೊಂದಿರುವ ಸೋವಿಯತ್ ಒಕ್ಕೂಟಕ್ಕೂ ಈ ಬ್ಯಾಂಕಿನ ಆಡಳಿತ ಮಂಡಳಿಯಲ್ಲಿ ಮತಾಧಿಕಾರ ಕೇವಲ ಒಂದೇ.

ಅಂತರ್ರಾಷ್ಟ್ರೀಯ ಹಣಕಾಸು (IMF) ಬಂಡವಾಳಶಾಹಿ ದೇಶಗಳ ನೇತೃ ದಲ್ಲಿರುವ ಬ್ಯಾಂಕ್. ಅಲ್ಲಿಯ ನೀತಿಯೇ ಭಿ ಇಲ್ಲಿ ಆಯಾಯ ದೇಶಕ್ಕೆ ತನ್ನ ಪಾಲಿಗೆ ಅನುಗ ವಾಗಿ ಮತಾಧಿಕಾರ. ಅಂದರೆ ಶ್ರೀಮಂತ ದ ಗಳಿಗೆ ಬಡ ದೇಶಗಳಿಗಿಂತ ಹೆಚ್ಚು ಅಧಿಕಾರ. ಉದಾಹರಣೆಗೆ ಅ. ಸಂ. ಸಂ. ದ ಅಭಿಪ್ರಾಯ ಈ ನಿಧಿಯಲ್ಲಿರುವ ಮಹತ್ವ 80 ಅಭಿವೃದ್ಧಿ ಶೀ ದೇಶಗಳನ್ನೆಲ್ಲಾ ಸೇರಿಸಿದಾಗ ಇರುವಷ್ಟು. ರಿಂದಾಗಿ ಅ. ಸಂ. ಸಂ. ಹಾಗು ಇತರ ಮುಂ ವರಿದ ಬಂಡವಾಳಶಾಹೀ ದೇಶಗಳು ಅಭಿವೃದ್ಧಿ ಶೀ ದೇಶಗಳ ಮೇಲೆ ಈ ಹಣಕಾಸು ನಿಧಿಯು ಸಾ ಮೂಲಕ ಒತ್ತಡ ಹಾಕಲು ಸಾಧ್ಯವಾಗಿದೆ.

ಎರಡು ಜರ್ಮನಿಗಳಲ್ಲಿ ಕೈಗಾರಿಕಾಭಿವೃದ್ಧಿ ದರ
(1950=1)



ಸಮಾಜವಾದಿ ಪ್ರಭುತ್ವದಲ್ಲಿ ಹಳ್ಳಿ ಪಟ್ಟಣ

ಸೋವಿಯೆತ್ ಒಕ್ಕೂಟದಲ್ಲಿ 1920 ರಲ್ಲಿ ಅಕ್ಷರಸ್ಥರ ಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ 378. ನಗರಗಳಲ್ಲಿ 735 ಪ್ರತಿ ಸಾವಿರ ಜನರಲ್ಲಿ

1984 ರಲ್ಲಿ ಅನಕ್ಷರತೆ ಪೂರ್ಣ ನಿರ್ನಾಮವಾಗಿದೆ. ಈಗ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರತಿ ಸಾವಿರದಲ್ಲಿ 655 ಸಾಮೂಹಿಕ ರೈತರು ಉಚ್ಚ ಅಥವಾ ಮಾಧ್ಯಮಿಕ ಶಿಕ್ಷಣ ಪಡೆದಿದ್ದರೆ ನಗರಗಳಲ್ಲಿ ಈ ಸಂಖ್ಯೆ 800. 1940 ರಿಂದ 1982 ರ ಅವಧಿಯಲ್ಲಿ ಸಾಮೂಹಿಕ ರೈತರ ಆದಾಯ 7.3 ರಷ್ಟು ಏರಿದೆ. ಕಾರ್ಮಿಕ ಆದಾಯದ ಏರಿಕೆ 4.1 ಪಟ್ಟು. 1965 ನಗರ—ಹಳ್ಳಿಯ ಆದಾಯದ ಅಂತರ ಶೇ. ಕ್ಕಿಳಿಯಿತು 1984 ರಲ್ಲಿ ಇದು ಶೇ. 10 ಕ್ಕಿಳಿಯಿತು.

1960 ರಿಂದೀಚೆಗೆ ಗ್ರಾಮಾಂತರ ಸಾಮೂಹಿಕ ರೈತರಿಗೆ ಪೆಂಶನ್ ಆರಂಭಿಸಲಾಗಿದೆ. ಕಳೆದ 15 ವರ್ಷಗಳಲ್ಲಿ ಅರ್ಧದಷ್ಟು ಗ್ರಾಮವಾಸಿಗ ಹೊಸ ಮನೆ ಪಡೆದಿದ್ದಾರೆ.

ಆರಂಭವಾಗುವ ಮೊದಲೇ ತಡೆಯಬೇಕಾದ
ಮೂರನೇ ಮಹಾಯುದ್ಧ

ಕೇರಳದ ಒಬ್ಬ 14 ವರ್ಷದ ಬಾಲಕಿಯಿಂದ ಮೇರಿಕ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷ ಗನರಿಗೊಂದು ಪತ್ರ. ಪತ್ರ, ಬರೆಯುವ ಅಭ್ಯಾಸ ನ್ನೂ ಬೆಳೆಯದ ನಮ್ಮ ನಾಡಿನ ಒಬ್ಬ ಹುಡುಗಿ ಸಸಾರು ಮೈಲಿದೂರದ, ಎಂದೂ ಕಾಣದ ಕ್ತಿಗೆ ಪತ್ರ.

ಅಮೇರಿಕಾದ 12 ವರ್ಷದ ಪುಟ್ಟ ಬಾಲಕಿ ಮಂತಾಸ್ಮಿತ್ ಳಿಂದ ಸೋವಿಯೆತ್ ದೇಶದ ಧ್ಯಕ್ಷರಿಗೊಂದು ಪತ್ರ. ಎಲ್ಲಿಂದೆಲ್ಲಿಯ ಸಂಬಂಧ-

ರೀಗನರಿಗೆ ಅವರದೇ ದೇಶದ ಪೆನ್ಸಿಲ್ವೇನಿಯಾ ಜ್ಯದ 4,5,6,ನೇ ತರಗತಿಯ 4,000 ಮಕ್ಕ ದ ಪತ್ರ. ಬ್ರಿಟನ್ನಿನ, ತಾಯಿಮಮತೆಯನ್ನು ರೆತ ಕಬ್ಬಿಣದ ಮಹಿಳೆ ಮಾರ್ಗರೆಟ್ ಥ್ಯಾಚರ್‌ಗೆ ಟನ್ನಿನ ಮಕ್ಕಳಿಂದ ಒಂದೇ ಬಾರಿಗೆ 5 ಲಕ್ಷ ತ್ರಗಳು। ಇಟಲಿಯಲ್ಲಿ 10–15 ಸಾವಿರ ಸ್ಕೂಲು ವಿದ್ಯಾರ್ಥಿಗಳಿಂದ ಮತ ಪ್ರದರ್ಶನ. ಟನ್ನಿನ ಒಂದು ಸಣ್ಣ ಊರು ಗ್ರೀನ್ ್ಯಮ್ ಕಾಮನ್ ನಲ್ಲಿ ಮೂರು ವರ್ಷಗಳಿಂದ ತಿದಿನವೂ ಧರಣಿ, ಕೊರೆವ ಮಂಜಿನ ಸುರಿತಕ್ಕೆ, ಟಿಷ್ ಪೋಲಿಸರ ಕ್ರೌರ್ಯದ ಹೊಡೆತಕ್ಕೆ ಲೆಕ್ಕಿ ಬ್ರಿಟನ್ ತಾಯಂದಿರಿಂದ. ಇವೆಲ್ಲಾ ಒಂದೇ ದ್ದೇಶದಿಂದ ಜಗತ್ತಿನ ಉಳಿವಿಗಾಗಿ ತಪಿಸು ುವ ಮಾನವೀಯ ಹೃದಯಗಳಿಂದ. ೋಟ್ಯಾಂತರ ವರ್ಷಗಳ ಪ್ರಕೃತಿಯ ಶ್ರಮದ ಾರ್ಣವಾದ ಈ ಭೂಮಿಯನ್ನು ಹತ್ತಾರು ವಿರ ವರ್ಷಗಳ ಬೆಳೆ ಮಾನವ ಜನಾಂಗವನ್ನು, ಕೃತಿಯನ್ನು ಹಾನಿಯಾಗದಂತೆ ಉಳಿಸಿ ಳ್ಳುವ ಛಲದಿಂದ.

ಎರಡನೇ ಮಹಾಯುದ್ಧದಲ್ಲಿ 5 ಕೋಟಿ ರು ಆಹುತಿಯಾಗಿ, ಹತ್ತಾರು ಕೋಟಿ ಜನರು ತ್ರ ನೆಲೆಗಳನ್ನು ಕಳೆದುಕೊಂಡ ನೆನಪಿನ್ನೂ ಹಸಿರಾಗಿದೆ. ಬೆಂದುಹೋದ ಹಳ್ಳಿಗಳು, ನಾಶವಾದ ನಗರಗಳು ಇನ್ನೂ ಕಣ್ಣಿಗೆ ಕಟ್ಟಿವೆ. 1945ರ ಆಗಸ್ಟ್ 6, ಆಗಸ್ಟ್ 9 ರಂದು ಹಿರೋಷಿಮಾ–ನಾಗಸಾಕಿಯ ಮೇಲೆ ಬಿದ್ದ ಎರಡು ಅಣುಬಾಂಬುಗಳು ಇನ್ನೂ ಮಾನವತೆಯನ್ನು ಕರಾಳ ಸ್ವಪ್ನದಂತೆ ಕಾಡುತ್ತಿವೆ. ಹಿರೋಷಿಮಾದ, ನಾಗಸಾಕಿಯ ಗಂಟೆಗಳು ಇನ್ನೂ ಬಾರಿಸುತ್ತಾ ಮಾನವತೆಯನ್ನು ಎಚ್ಚರಿಸುತ್ತಿವೆ.

ಮುಂಬರುವ ಮಹಾ ಯುದ್ಧದ ಕರಿ ನೆರಳು

ಆಗಲೇ ಮುಂದಿನ ಮಹಾಯುದ್ಧದ ಕರಿನೆರಳು ಜಗತ್ತಿನ ಪ್ರತಿಯೊಬ್ಬ ಪ್ರಜೆಯ ಮೇಲೂ ಪ್ರತಿ ಹಸುಳೆಯ ಮೇಲೂ ಚಾಚಿದೆ.

ಬಂಡವಾಳಶಾಹಿ ಜಗತ್ತಿನ ತುಂಬೆಲ್ಲಾ ಕೋಟ್ಯಾಂತರ ಕಾರ್ಮಿಕರನ್ನು ಕೆಲಸದಿಂದ ಬೀದಿಗೆಸೆಯುವುದರಲ್ಲಿ,ನಿರುದ್ಯೋಗ, ಅಲ್ಲಿನ ಬಡವರಿಗೆ ಸಹಾಯಧನದ ಕಡಿತ, ಆರೋಗ್ಯ, ಶಾಲೆ, ಕಾಲೇಜುಗಳ ಅವಶ್ಯಕ ವೆಚ್ಚದ ಕಡಿತದ ಮೂಲಕ ಭೂತವಾಗಿ ಕಾಡುತ್ತಿದೆ.

ಬೆಳೆಯುತ್ತಿರುವ, ವಿಕಾಸಹೊಂದುತ್ತಿರುವ ಭಾರತದ ಮೇಲೆ, ಭಾರತದಂತಹ ಮೂರನೇ ಜಗತ್ತಿನ ದೇಶಗಳ. ಮೇಲೆ ಸಾಲದ ಶೂಲವಾಗಿ ಕೋಟ್ಯಾಂತರ ಕೋಟಿಗಳ ವಿದೇಶಿ ಸಾಲದ, ಸಾಲದ ಮೇಲಿನ ಬಡ್ಡಿಯ ಹೊರೆಯಾಗಿ ಕಾಡುತ್ತಿದೆ. ಈ ಸಾಲ, ಈ ಬಡ್ಡಿ ಮೂರನೇ ರಾಷ್ಟ್ರಗಳ ಮೇಲಿನ ಅಮೇರಿಕಾ, ಬ್ರಿಟನ್, ಪ. ಜರ್ಮನ್ ಮೊದಲಾದ ರಾಷ್ಟ್ರಗಳ ಜನತೆಯ ಸೌಲಭ್ಯಗಳಲ್ಲಿ ಕೋಟ್ಯಾಂತರ ರೂ. ಗಳ ಕಡಿತ ಎಲ್ಲವೂ ಯುದ್ಧ ಬಕಾಸುರನ ತಣಿಯದ ಹಸಿವಿಗೆ ತುತ್ತಾಗಿವೆ.

ಶಾಂತಿಯ ರಣಕಹಳೆ

ಈ ಬೇಗೆಯಿಂದ ದಿನ ದಿನ ದಹನವಾಗುತ್ತಿರುವ ಜನ, ಹಿಂದಿನ ಯುದ್ಧದ ಪರಿಣಾಮಗಳನ್ನು ಕಂಡುಂಡ ಜನ, ಮುಂದಿನ ಯುದ್ಧದ ಪರಿಣಾಮಗಳನ್ನರಿತ ಜನ ಈ ಜಗತ್ತು, ಈ ಭೂಮಿ ಸುಂದರ ಬದುಕಿನ ತಾಣವಾಗಿ, ಜೀವಕೋಟಿಗೆ ಆಶ್ರಯವಾಗಿ ಉಳಿಯಬೇಕೆಂದಾಶಿಸುವ ಜನ ಇಂದು, ಹಿಂದೆಂದೂ ಇಲ್ಲದಂತೆ, ಸಾಮ್ರಾಜ್ಯಶಾಹಿಗಳಿಗೆ ನಡುಕ ಹುಟ್ಟಿಸುವಂತೆ ಯುದ್ಧ ಪಿಪಾಸುಗಳ ಬಯಕೆಗೆ ಬಗೆಹರಿಸಲಾರದ ಕುತ್ತಾಗಿ ಎದ್ದುನಿಂತಿದ್ದಾರೆ. ನಡೆಯುತ್ತಿದ್ದಾರೆ— ಕಾರ್ಮಿಕರು, ರೈತರು, ಮಹಿಳೆಯರು, ಮಕ್ಕಳು ಎಲ್ಲಾ ಬೇಧಗಳನ್ನು ತೊಡೆದು ಒಂದಾಗಿ ಪೋಲಿಸರ ಲಾಠಿ ಗುಂಡುಗಳನ್ನು ಎದುರಿಸಿ ಮುನ್ನುಗ್ಗುತ್ತಿದ್ದಾರೆ. ಮೊದಲನೆ ಮಹಾಯುದ್ಧ, ಎರಡನೆ ಮಹಾಯುದ್ಧಗಳು ಆರಂಭವಾಗುವ ಮೊದಲು ಯುದ್ಧ ಬೇಡ, ಯುದ್ಧ ನಿಲ್ಲಿಸಿ ಎಂದು ಕ್ರಾಂತಿಕಾರಿ ಹಾದಿಯನ್ನು ತುಳಿದ, ಅಂತರ ರಾಷ್ಟ್ರೀಯ ಕರ್ತವ್ಯವನ್ನು ಮೆರೆದ, ಕಾರ್ಮಿಕರ ಧ್ವನಿ ಮಾತ್ರ ಕೇಳಿದ್ದರೆ, ಇಂದು ಈ ಧ್ವನಿಗೆ ಕೋಟ್ಯಾಂತರ ಧ್ವನಿಗಳು ಸೇರಿ "ಶಾಂತಿ" ಎಂಬುದು, "ಯುದ್ಧ ನಿಲ್ಲಿಸಿ" ಎಂಬುದು, ಅಣ್ವಸ್ತ್ರಗಳ ಆಸ್ಫೋಟ ಇನ್ನೊಂದು ಬೇಡ ಎಂಬುದು ರಣಕಹಳೆಯಾಗಿ ಮೊರೆಯುತ್ತಿವೆ.

ಯೂರೋಪಿನಲ್ಲಿ ಕ್ಷಿಪಣಿ ಸ್ಥಾಪನೆಗೆ ಬಲವದ್ವಿರೋಧ

ಅಥೆನ್ಸ್‌ನಲ್ಲಿ 1984 ರ ಮೇ 21 ರಂದು ಸಾವಿರಾರು ಮಂದಿ 49–12 ಕಿ ಮಿ. ದೂರದ ವರೆಗೆ ಪ್ರತಿಭಟನಾ ಮ್ಯಾರಥಾನ್ ಓಟ ಓಡಿ

ಯುರೋಪಿನಲ್ಲಿ ಅಣ್ವಸ್ತ್ರ ನೆಲೆಗೊಳಿಸುವುದನ್ನು ವಿರೋಧಿಸಿದರು. ಅಮೇರಿಕನ್ ಸೈನಿಕ ನೆಲೆಯ ಬಳಿ ಬಂದಾಗ ಈ ಜನ ಕೈ ಕೈ ಹಿಡಿದುಕೊಂಡು ಅದನ್ನು ಸುತ್ತುವರಿದರು. ವಿನಾಶದ ಸಂಕೇತವಾಗಿ ಕೊನೆಗೆ ಹಠಾತ್ತನೆ ನೆಲದ ಮೇಲೆ ಬಿದ್ದು ಪ್ರತಿಭಟನೆ ವ್ಯಕ್ತಪಡಿಸಿದರು. ಜೂನ್ 3, 1984 ರಂದು ಸ್ಪೇನಿನ ಮಾಡ್ರಿಡ್‌ನಲ್ಲಿ ಅರ್ಧ ಮಿಲಿಯ ಜನ ಮೆರವಣಿಗೆ ಕೊಂಡೊಯ್ದು ಸ್ಪೇನ್ ನ್ಯಾಟೋದಿಂದ ಹೊರ ಬರಬೇಕೆಂದೂ ಅಮೇರಿಕನ್ ಸೈನಿಕ ನೆಲೆಗಳನ್ನು ಕಿತ್ತೊಗೆಯಬೇಕೆಂದೂ ಒತ್ತಾಯಿಸಿದರು. 'ನ್ಯಾಟೋ ಬೇಡ, ಸೈನಿಕ ನೆಲೆ ಬೇಡ' ಎನ್ನುವುದು ಅವರ ಘೋಷಣೆ. ಜೂನ್ 9, 1984 ರಂದು ಮಾರ್ಗರೆಟ್ ಥ್ಯಾಚರ್ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಲಂಡನ್ ಶೃಂಗ ಸಮ್ಮೇಳನದ ತೀರ್ಮಾನಗಳನ್ನು ಪರ್ಶಿಂಗ್, ಕ್ರೂಯಿಸ್ ಕ್ಷಿಪಣಿ ಸ್ಥಾಪಿಸುವ ನಿರ್ಧಾರವನ್ನು ಘೋಷಿಸುತ್ತಿರುವಂತೆಯೇ ಎರಡು ಲಕ್ಷ ಜನ ಲಂಡನ್ ರಸ್ತೆಗಳಲ್ಲಿ ಮೆರವಣಿಗೆ ಹೊರಟು ಬ್ರಿಟನ್ ಮತ್ತು ಅಮೇರಿಕೆಯ ನೀತಿಯನ್ನು ಖಂಡಿಸಿದರು. ಕ್ರೂಯಿಸ್ ಕ್ಷಿಪಣಿಗಳನ್ನು ಅಮೇರಿಕೆಗೆ ವಾಪಸು ಕಳಿಸಿ ಎಂಬುದು ಅವರ ಬೇಡಿಕೆ.

ಲಂಡನ್, ಬ್ರುಸೆಲ್ಸ್, ರೋಮ್, ಬಾನ್, ಹೇಗ್, ಸ್ಟಾಕ್‌ಹೋಂ, ಲಿಸ್ಬನ್, ಪ್ಯಾರಿಸ್ ಮತ್ತು ವಿಯನ್ನಾಗಳಲ್ಲಿ ಅಕ್ಟೋಬರ್ 22, 23, 1983ರಲ್ಲಿ 572 ಕ್ರೂಯಿಸ್ ಮತ್ತು ಪರ್ಶಿಂಗ್ ಕ್ಷಿಪಣಿಗಳನ್ನು ಯೂರೋಪಿನ ನೆಲದಲ್ಲಿ ನೆಲೆಗೊಳಿಸುವ ಅಮೇರಿಕಾದ ನಿರ್ಧಾರದ ವಿರುದ್ಧ ನಡೆದ ಪ್ರತಿಭಟನೆ ಚರಿತ್ರಾರ್ಹವಾದದ್ದು. ಅಮೇರಿಕಾದ ಒಳಗಡೆ ನ್ಯೂಯಾರ್ಕ್, ನ್ಯೂ ಮೆಕ್ಸಿಕೊ, ಲಾಸ್ ಎಂಜಲಿಸ್, ಚಿಕಾಗೊ, ಬೋಸ್ಟನ್ ಮತ್ತು ವಾಷಿಂಗ್‌ಟನ್‌ನಲ್ಲಿ ಇಂತಹ ಪ್ರದರ್ಶನಗಳು ನಡೆದಿವೆ. ಪ. ಜರ್ಮನಿಯ ಪ್ರದೇಶದೊಳಗೆ 108 ಪರ್ಶಿಂಗ್ - 2 ಕ್ಷಿಪಣಿಗಳನ್ನು 464 ಕ್ರೂಯಿಸ್ ಕ್ಷಿಪಣಿಗಳಲ್ಲಿ ಹೆಚ್ಚಿನದನ್ನು ಸ್ಥಾಪಿಸಬೇಕಾಗಿತ್ತು. ಇಲ್ಲಿ ಅಕ್ಟೋಬರ್ 23, 1983 ರಂದು ಹದಿನೂರು ಲಕ್ಷ ಜನ ಪ್ರದರ್ಶನ ನಡೆಸಿದರು. ಹ್ಯಾಂಬರ್ಗ್‌ನಲ್ಲಿ ನಾಲ್ಕು ಲಕ್ಷ ಮಂದಿ ಮತ್ತು ಪ. ಬರ್ಲಿನ್‌ನಲ್ಲಿ 1½ ಲಕ್ಷ ಮಂದಿ ಭಾಗವಹಿಸಿದ್ದ ಈ ಶಾಂತಿ ಯಾತ್ರೆ ಅನೇಕ ಅಮೇರಿಕನ್ ನೆಲೆಗಳಿಗೂ ಪ. ಜರ್ಮನಿಯ ರಕ್ಷಣಾ ಸಚಿವಾಲಯಕ್ಕೂ ಮುತ್ತಿಗೆ ಹಾಕಿತು. ಬಾನ್ ನಗರದಲ್ಲಿ ಹತ್ತಾರು ಸಾವಿರ ಜನ ಕೈ ಕೈ ಹಿಡಿದುಕೊಂಡು ಸರಕಾರಿ ಕಚೇರಿಗಳನ್ನು ಸುತ್ತುವರಿದರು. ಆ ಬಳಿಕ ನಗರ ಕೇಂದ್ರದಲ್ಲಿ ನಡೆದ ಸಭೆಯನ್ನುದ್ದೇಶಿಸಿ ಪ. ಜರ್ಮನಿಯ ಮಾಜಿ ಚಾನ್ಸಲರ್ ವಿಲಿ ಬ್ರಾಂಡ್ ಮಾತನಾಡಿದರು. ಅಮೇರಿಕಾದ ಮಾಜಿ ಸೇನಾ ಅಡ್ಮಿರಲ್ ಜನರಲ್ ಲಾರೋಗ್ ಈ ಸಭೆಯಲ್ಲಿ ಅಮೇರಿಕನ್ ಕ್ಷಿಪಣಿಗಳನ್ನು ತಿರಸ್ಕರಿಸುವಂತೆ ಕರೆನೀಡಿದರು. ಪ. ಜರ್ಮನಿಯ ದಕ್ಷಿಣ ಭಾಗದಲ್ಲಿ ಅಮೇರಿಕನ್ ಸೈನಿಕ ನೆಲೆಯ ಕೇಂದ್ರವಾದ ಸ್ಟಟ್‌ಗಾರ್ಟ್ ಮತ್ತು ಪರ್ಶಿಂಗ್ ಕ್ಷಿಪಣಿಗಳನ್ನು ನೆಲೆಗೊಳಿಸಲು ಉದ್ದೇಶಿಸಲಾಗಿದ್ದ ನ್ಯೂಹಲ್ಮ್ ನಗರಗಳ ನಡುವೆ 108 ಕಿ ಮೀ. ಉದ್ದದ ಮಾನವ ಸರಪಳಿಯನ್ನು ರಚಿಸಿ ಪ್ರತಿಭಟನೆ ವ್ಯಕ್ತ

" ಮಾನವ ಹಕ್ಕುಗಳ "
ಕೂಗು ಹಾಕುವ ದೇಶಗಳಲ್ಲಿ

ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಶಾಂತಿ ಹೋರಾಟಗಾರರ ಎದುರು ಇರುವ ಆಯ್ಕೆ ಎರಡೇ. ಜೇಲುವಾಸ ಅಥವಾ ಯುದ್ಧ ವಿರೋಧಿ ರ‍್ಯಾಲಿಗಳಲ್ಲಿ ಬಾಗವಹಿಸುವುದಿಲ್ಲವೆಂಬ ಮುಚ್ಚಳಿಕೆ.

ಬ್ರಿಟನ್ನಿನ ಗ್ರೀನ್‌ಹಾಂ ಕಾಮನ್‌ನ ಶಾಂತಿ ಕ್ಯಾಂಪಿನ ಸದಸ್ಯರನ್ನು ಇದುವರೆಗೆ 2000 ಬಾರಿ ಬಂಧಿಸಲಾಗಿದೆ.

ಪಡಿಸಲಾಯಿತು. ಲಂಡನ್‌ನ ಹೈಡ್‌ಪಾರ್ಕ್‌ನಲ್ಲಿ ಸೇರಿದ್ದ ಎರಡೂವರೆ ಲಕ್ಷ ಜನರನ್ನುದ್ದೇಶಿಸಿ ಲೇಬರ್ ಪಾರ್ಟಿಯ ಮುಖಂಡ ನೀಲ್ ಕಿನ್ನೋಕ್ ಮಾತನಾಡಿದರು. ರೋಮ್‌ನಲ್ಲಿ 3 ಲಕ್ಷ ಮತ್ತು ಹೇಗ್‌ನಲ್ಲಿ ನಾಲ್ಕು ಲಕ್ಷ ಜನ ಯುದ್ಧ ವಿರೋಧಿ ಪ್ರದರ್ಶನದಲ್ಲಿ ಪಾಲುಗೊಂಡರು. ಇತರ ಕಡೆ ನಡೆದ ಪ್ರದರ್ಶನಗಳೂ ಅಭೂತ ಪೂರ್ವವೆನಿಸಿವೆ.

ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಆರ್ಥಿಕ, ಸಾಮಾಜಿಕ ಮುಗ್ಗಟ್ಟಿನ ಹೊರೆಯನ್ನು ತೃತೀಯ ಜಗತ್ತಿನ ಹಿಂದುಳಿದ ರಾಷ್ಟ್ರಗಳ ಮೇಲೂ ಹೊರಿಸಿ ಬಿಡಲು ಹವಣಿಸುತ್ತಿವೆ. ಇದರಿಂದಾಗಿ ತೃತೀಯ ಜಗತ್ತಿನ ರಾಷ್ಟ್ರಗಳಿಗೂ ಸಾಮ್ರಾಜ್ಯಶಾಹಿ ರಾಷ್ಟ್ರ

ಗಳಿಗೂ ನಡುವೆ ವೈರುದ್ಧ್ಯಗಳು ತೀವ್ರವಾಗು
ತೃತೀಯ ಜಗತ್ತಿನ ಅನೇಕ ರಾಷ್ಟ್ರಗಳು ವ
ಅಲಿಪ್ತ ಚಳುವಳಿಗೆ ಸೇರಿದ ದೇಶಗಳು ಯು
ಕುಂಠಿತವಾದ ತಮ್ಮ ವಿರೋಧ ಮತ್ತು ವಿಶ್ವಶಾಂ
ಹಂಬಲವನ್ನು ಒತ್ತಿ ಹೇಳಲಾರಂಭಿಸಿರುವ
ಈ ವೈರುಧ್ಯಗಳು ಕಾರಣ.

ಕೊನೆಯದಾಗಿ ವಿಶ್ವ ಮಾರುಕಟ್ಟೆಯ
ತಮಗೆ ಬೇಕಾದಂತೆ ಪಾಲು ಮಾಡಿ ಕೊ
ಮತ್ತು ಹಿಂದುಳಿದ ರಾಷ್ಟ್ರಗಳನ್ನು ಶೋಷಿ
ಸಾಮ್ರಾಜ್ಯಶಾಹಿಗಳ ಲಾಲಸೆಗೆ ಸಮಾಜ
ವ್ಯವಸ್ಥೆಯೊಂದು ಪರಿಹರಿಸಲಾಗದ ತೊಡ
ಪರಿಣಮಿಸಿದೆ. ಸಾಮ್ರಾಜ್ಯಶಾಹಿಗಳ ಯ
ಪಿಪಾಸೆಗೂ ಸಮಾಜವಾದಿ ರಾಷ್ಟ್ರಗಳೇ ದೊ
ಆತಂಕ. ಆದಕ್ಕೆ ಸಾಮ್ರಾಜ್ಯಶಾಹಿ
ಯುದ್ಧ ತಯಾರಿಯೆಲ್ಲ ಸಮಾಜವಾದಿ ಬ
ವಿರುದ್ಧ, ಅದರಲ್ಲೂ ಸೋವಿಯತ್ ಒಕ್ಕೂ
ವಿರುದ್ಧ ಕೇಂದ್ರೀಕೃತವಾಗಿದೆ. ಸಮಾಜ
ವ್ಯವಸ್ಥೆಯ ನಾಶವೇ ಸಾಮ್ರಾಜ್ಯಶಾಹಿ
ಯುದ್ಧ ಸಿದ್ಧತೆಯ ಮೊದಲ ಉದ್ದೇಶ. ಸಮ
ವಾದಿ ರಾಷ್ಟ್ರಗಳಿಗೆ ಯುದ್ಧದಲ್ಲಿ ಆಸಕ್ತಿ ಇ
ಅವುಗಳಿಗೆ ಯುದ್ಧ ಬೇಕಾಗಿಲ್ಲ. ಯುದ್ಧವ
ರುವ ವ್ಯವಸ್ಥೆಯೇ ಸಮಾಜವಾದಿ ವ್ಯ
ಆದರೆ ಸಾಮ್ರಾಜ್ಯಶಾಹಿಗಳು ತಮ್ಮ ಯು
ಸಿದ್ಧತೆಗೆ ಸಮಾಜವಾದಿ ಬಣವನ್ನೇ ಗುರಿಯಾ
ಕೊಂಡಿರುವುದರಿಂದ ಮತ್ತು ಅವುಗಳ ಆಕ್ರ
ವೆಲ್ಲ ಸಮಾಜವಾದಿ ರಾಷ್ಟ್ರಗಳ ಮೇಲೆ ಕೇ
ಕೃತವಾಗಿರುವುದರಿಂದ ಸಮಾಜವಾದಿ ರಾ
ಗಳೂ ಅನಿವಾರ್ಯವಾಗಿ ಸಾಕಷ್ಟು ರಕ್ಷ
ವ್ಯವಸ್ಥೆಯನ್ನು ಬಲಪಡಿಸಿಕೊಳ್ಳಲೇ ಬೇಕಾ
ಸಾಮ್ರಾಜ್ಯಶಾಹಿ ರಾಷ್ಟ್ರಗಳಿಗೆ ವಿರುದ್ಧ
ಹೆಚ್ಚು ಕಡಿಮೆ ಸರಿ ಸಮಾನವಾದ ಪ್ರತಿ
ಮಾಡಿಕೊಳ್ಳುತ್ತಿರುವಾಗಲೂ ಸಮಾಜವಾ
ರಾಷ್ಟ್ರಗಳು ಶಾಂತಿಗಾಗಿ ಹೋರಾಡುತ್ತಿ
ವಿಶ್ವಾದ್ಯಂತ ನಡೆಯುತ್ತಿರುವ ಶಾಂತಿ ಚಳುವ
ಸಮಾಜವಾದಿ ರಾಷ್ಟ್ರಗಳು ನೀಡುತ್ತಿ
ಉತ್ತೇಜನ ಮತ್ತು ಬೆಂಬಲ ಅಪಾರವಾದ
ವಿಶ್ವಶಾಂತಿ ಚಳುವಳಿಗೆ ಸಮಾಜವಾದಿ ಬ
ಮುಂದಾಳುತ್ವ ನೀಡುತ್ತಿದೆ.

ಯುದ್ಧ ವಿರೋಧಿ ಚಳುವಳಿ ಹುಟ್ಟಿಕೊ
ರುವುದೇ ಸಾಮ್ರಾಜ್ಯಶಾಹಿ ಮತ್ತು ಸಮಾಜವ
ಬಣಗಳ ನಡುವಣ ವೈರುದ್ಧ್ಯದಿಂದ. ಈ ಕಾರಣ

ಶಾಂತಿ ಚಳುವಳಿ ಗೆಲ್ಲಬೇಕಾದರೆ ಅದು
ಯುವ ಜನತೆಯ ಮುಂದಾಳುತ್ವದಲ್ಲಿರ
ಾದುದು ಅಗತ್ಯ. ಇತ್ತೀಚಿಗಿನವರೆಗೆಸುಧಾರಣ
ಗಳ ಪ್ರಭಾವದಲ್ಲಿದ್ದ ಯುರೋಪಿನ ಕಾರ್ಮಿಕ
ಟನೆಗಳು ಯುದ್ಧ ಮತ್ತು ಶಾಂತಿಯ
ಯ ಬಗ್ಗೆ ಗಂಭೀರವಾಗಿ ಯೋಚಿಸಿರಲಿಲ್ಲ.
1983 ರ ಬಳಿಕ ಅವೂ ಯುದ್ಧ ಮತ್ತು
ಯ ಪ್ರಶ್ನೆಯನ್ನು ಬಹು ಮುಖ್ಯ ಪ್ರಶ್ನೆ
ಗಿ ಪರಿಗಣಿಸಿ ಹೋರಾಡುತ್ತಿವೆ. ಬ್ರಿಟಿಷ್
ಯೂನಿಯನ್ ಕಾಂಗ್ರೆಸ್, ಪ. ಜರ್ಮ
ಜರ್ಮನ್ ಟ್ರೇಡ್ ಯೂನಿಯನ್ ಅಸೋಸಿ
ನ್, ಫ್ರಾನ್ಸಿನ ಜನರಲ್ ಕಾನ್ಫಿಡೆರೇಶನ್
ಲೇಬರ್ ಇವೇ ಮೊದಲಾದ ಬೃಹತ್
ಯೂನಿಯನ್ ಸಂಘಟನೆಗಳು ವಿಶ್ವಶಾಂತಿ.
ಮತ್ತು ಅಮೇರಿಕನ್ ಕ್ಷಿಪಣಿಗಳನ್ನು
ಸುವುದರ ವಿರುದ್ಧ 1983 ರಿಂದ ವ್ಯಾಪಕ
ಾಟಗಳನ್ನು ನಡೆಸುತ್ತಿವೆ. ಜೂನ್ 1983
ಡೆದ ಇಂಟರ್ ನ್ಯಾಶನಲ್ ಫ್ರೀ ಟ್ರೇಡ್
ಯನ್‌ನ 13 ನೇ ಕಾಂಗ್ರೆಸ್ ಶಸ್ತ್ರಾಸ್ತ್ರ
ೀಟಿಯನ್ನು ವಿರೋಧಿಸಿ ಶಾಂತಿಯನ್ನು
ಬಿಸಿದೆ.

ತನ್ನ ಜೀವನ ಮಟ್ಟದ ಮೇಲಾಗುತ್ತಿರುವ
ಣದ ವಿರುದ್ಧ ಹೋರಾಡುತ್ತಿರುವಂತೆಯೇ
ೋಪಿನ ಕಾರ್ಮಿಕ ವರ್ಗ ಶಾಂತಿಗಾಗಿಯೂ
ಾಟ ಮಾಡುತ್ತಿದೆ. ಹೆಚ್ಚಿನ ರಾಷ್ಟ್ರಗ
ಶಾಂತಿ ಹೋರಾಟದ ಮುಂದಾಳುತ್ವ
ಕ ವರ್ಗದ ಕೈಯಲ್ಲಿದೆ.

ಪ.ಜರ್ಮನಿಯ ಕಾರ್ಮಿಕ ವರ್ಗ 1.1.84
ಎರಡನೇ ಜಾಗತಿಕ ಸಮರದ 45ನೇವರ್ಷಾ
ಅಂಗವಾಗಿ ಬೃಹತ್ ಮೆರವಣಿಗೆ ಏರ್ಪಡಿ
ಶಸ್ತ್ರಾಸ್ತ್ರ ಪೈಪೋಟಿ ನಿಲ್ಲಿಸಬೇಕೆಂದೂ
ೀಕರಣ ಮತ್ತು ವಿಧಾಯಕ ಕ್ರಮ ಕೈ
ಬೇಕೆಂದೂ ಇಲ್ಲಿ ಕರೆ ನೀಡಲಾಯಿತು.
ವರ್ಷ ಸೆಪ್ಟಂಬರ್ 1 ರಂದು ಯುದ್ಧ
ಧಿ ದಿನ ಆಚರಿಸಲು ಜರ್ಮನ್ ಕಾರ್ಮಿಕ
ಗಳು ನಿರ್ಧರಿಸಿವೆ. ಹನೋವರ್, ಡಸೆಲ್
ರ್ಫ ಮುಂತಾದ ಕಡೆ ನಡೆದ ಸಭೆಯಲ್ಲಿ
0 ಮಕ್ಕಳು ಉಪವಾಸದಿಂದ ಸಾಯುತ್ತಿರು
ಟನ್ ಗಟ್ಟಲೆ ಬಾಂಬುಗಳನ್ನು ಉತ್ಪಾದಿಸು
ಅಕ್ಷಮ್ಯಅಪರಾಧವೆಂದು ಘೋಷಿಸಲಾಗಿದೆ.



ಇಂಗ್ಲೆಂಡಿನ ಬರ್ಕ್‌ಶೈಯರ್‌ನಲ್ಲಿ ಸಾವಿರಾರು ಜನ ಯುದ್ಧ ವಿರೋಧಿ ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು. ಅಲ್ಡರ್‌ಮಾಸ್ಟನ್‌ನಲ್ಲಿರುವ ಪರಮಾಣು ಸಂಶೋಧನಾ ಕೇಂದ್ರ ಮತ್ತು ಬರ್ಗ್‌ಫೀಲ್ಡ್‌ನಲ್ಲಿರುವ ಅಣ್ವಸ್ತ್ರ ತಯಾರಿಸುವ ಕಾರ್ಖಾನೆಯ ಮಧ್ಯೆ ಒಬ್ಬರ ಕೈ ಒಬ್ಬರು ಹಿಡಿದು ಜೀವಂತ ಸರಪಳಿ ರಚಿಸಿರುವದನ್ನು ಕಾಣಬಹುದು.


ಸೆಪ್ಟಂಬರ್ 29, 1984ರಂದು ಜರ್ಮನಿಯಫುಲ್ಡಾ ಮತ್ತು ಹೆಸೆನ್ ರಾಜ್ಯಗಳ 30,000 ಕಾರ್ಮಿಕರು ನ್ಯಾಟೊದ ಶರದೃತು ಸೈನಿಕ ಕವಾಯತನ್ನು ವಿರೋಧಿಸಿ ಹಲವು ಕಿಲೋಮೀಟರ್ ಉದ್ದದ ಮಾನವ ಸಂಕೋಲೆ ರಚಿಸಿದರು. ಬೆಲ್ಜಿಯಂ, ಬಿಟ್ರನ್ ಮತ್ತು ನಾರ್ಡಿಕ್ ದೇಶಗಳ ಕಾರ್ಮಿಕರೂ ಈ ಪ್ರತಿಭಟನೆಯಲ್ಲಿ ಪಾಲುಗೊಂಡಿದ್ದರು. ಅಮೇರಿಕವು ಜರ್ಮನಿಯನ್ನು ಅಪಾಯದ ವಲಯವಾಗಿ ಪರಿವರ್ತಿಸುತ್ತಿದೆಯೆಂದು ಅವರೆಲ್ಲ ಆಪಾದಿಸಿದರು. ಜಪಾನಿನಲ್ಲಿ ಒಂದು ಲಕ್ಷಕ್ಕೂ ಮಿಕ್ಕಿದ ಕಾರ್ಮಿಕರು ಜುಲೈ 29, 1984 ರಂದು ಟೊಮಹಾಕ್ ಕ್ರೂಯಿಸ್ ಕ್ಷಿಪಣಿಗಳ ವಿರುದ್ಧ ಪ್ರತಿಭಟಿಸಿದರು. ಪ್ರತಿನಿತ್ಯ ಇಂತಹ ಪ್ರತಿಭಟನೆ ನಡೆಯುತ್ತಿದೆ. ಜಪಾನ್ ಕಮ್ಯುನಿಸ್ಟ್ ಪಕ್ಷವು ಶಾಂತ ಸಾಗರಕ್ಕೆ ಬರುವ ಅಮೇರಿಕದ ನೌಕೆಗಳಲ್ಲಿ ಟೊಮಹಾಕ್ ಕ್ಷಿಪಣಿಗಳಿರುವುದನ್ನು ಖಂಡಿಸಿ ಈ ರೀತಿ ನೆಲೆಗೊಳಿಸುವುದರಿಂದ ಜಪಾನನ್ನು ಅಣು ಯುದ್ಧ ರಂಗಕ್ಕೆ ಬಲವಂತವಾಗಿ ಎಳೆದಂತಾಗುತ್ತದೆಂದು ಆಪಾದಿಸಿದೆ. ಬ್ರಿಟನ್ನಿನ ಲಿಬರಲ್ ಪಕ್ಷದ ಸಮ್ಮೇಳನವು ಬ್ರಿಟಿಷ್ ನೆಲದಿಂದ ಕ್ರೂಯಿಸ್ ಕ್ಷಿಪಣಿಗಳನ್ನು ಕೀಳಬೇಕೆಂಬ ನಿರ್ಣಯ ಅಂಗೀಕರಿಸಿದೆ. ಸೆಪ್ಟಂಬರ್ 1984 ರಲ್ಲಿ ನಡೆದ ಬ್ರಿಟಿಷ್ ಟ್ರೇಡ್ ಯೂನಿಯನ್ ಕೌನ್ಸಿಲಿನ ಸಭೆಯಲ್ಲೂ ಇದನ್ನು ಒತ್ತಾಯಿಸಲಾಗಿದೆಯಲ್ಲದೆ ಬ್ರಿಟಿಷ್ ಜಲಾಂತರ್ಗಾಮಿಗಳಿಗೆ ಟ್ರೈಡೆಂಟ್ ಕ್ಷಿಪಣಿಗಳನ್ನು ಜೋಡಿಸುವ ಕಾರ್ಯಕ್ರಮವನ್ನು ಕೈಬಿಡಬೇಕೆಂದೂ ಹೇಳಲಾಗಿದೆ. ಇಂಗ್ಲೆಂಡಿನ ಗ್ರೀನ್ ಹ್ಯಾಮ್ ಕಾಮನ್

ನೆಲೆಯಲ್ಲಿ ಕಳೆದಮೂರು ವರ್ಷಗಳಿಂದ ಬ್ರಿಟಿಷ್ ಮಹಿಳೆಯರು ನಡೆಸುತ್ತಿರುವ ಹೋರಾಟ ಅಸದೃಶವಾದದ್ದು. ಪೋಲಿಸರು, ಗೂಂಡಾಗಳು ಮುಂತಾದವರ ಕೈಯಲ್ಲಿ ಸಾಕಷ್ಟು ತೊಂದರೆ ಅನುಭವಿಸುತ್ತಿರುವ ಈ ಮಹಿಳೆಯರು ಗ್ರೀನ್‌ಹ್ಯಾಮ್ ಕಾಮ್ನನ್ ಇಳ್ಳಿಯಿಂದ ಕ್ರೂಯಿಸ್ ಕ್ಷಿಪಣಿಗಳನ್ನು ಕಿತ್ತು ಹಾಕಬೇಕೆಂದು ಒತ್ತಾಯಿಸಿ ಹಗಲೂ ರಾತ್ರಿ ಕೊರೆಯುವ ಚಳಿಯಲ್ಲಿ ಧರಣಿ ಮುಷ್ಕರ ನಡೆಸುತ್ತಿದ್ದಾರೆ.

ವಿಶ್ವಾದ್ಯಂತ ಸಾಮ್ರಾಜ್ಯಶಾಹಿಗಳ ಪಿತೂರಿಗೆದುರಾಗಿ ನಡೆದಿರುವ ಈ ಸಾಮುದ್ಧಾಯಿಕ ಪ್ರತಿಭಟನೆಗಳಿಂದಾಗಿ ಸಾಮ್ರಾಜ್ಯಶಾಹಿಗಳು ತಮ್ಮ ಯುದ್ಧ ಸಿದ್ಧತೆಯನ್ನು ಸಂಪೂರ್ಣವಾಗಿ ನಿಲ್ಲಿಸದೇ ಹೋದರೂ ರೇಗನ್ ಕೂಡಾ ತನ್ನ ಕಾರ್ಯತಂತ್ರವನ್ನು ಬದಲಾಯಿಸಿ ಶಾಂತಿಪ್ರಿಯನೆಂಬ ಸೋಗು ಹಾಕುವಷ್ಟರ ಮಟ್ಟಿಗಾದರೂ ವಿಶ್ವಶಾಂತಿ ಚಳುವಳಿ ತನ್ನ ಪ್ರಭಾವ ಬೀರಿದೆ

ವಿಶ್ವಶಾಂತಿ ಚಳುವಳಿಯೆಂದರೆ - ಕೇವಲ ಶಾಂತಿ ಮಂತ್ರದ ಪಠಣ ಅಲ್ಲ. ಅದು ಶಾಂತಿಗಾಗಿ ನಡೆಸುವ ಭಿಕ್ಷಾಟನೆಯೂ ಅಲ್ಲ. ಶಾಂತಿಯನ್ನು ಬೇಡಿ ಪಡೆಯಲು ಸಾಧ್ಯವಿಲ್ಲ. ಆದುದರಿಂದಲೇ ಸಮಾಜವಾದಿ ರಾಷ್ಟ್ರಗಳ ಸ್ಫೂರ್ತಿಯ ನೆರವಿನಿಂದ ಮುನ್ನಡೆಸಲಾಗುತ್ತಿರುವ ಈ ಚಳುವಳಿ ಒಂದು ಸಮರಶೀಲ ಹೋರಾಟ. ಅದು ಸಾಮ್ರಾಜ್ಯಶಾಹಿಗೆ ವಿರುದ್ಧವಾದ ಹೋರಾಟ. ಶಾಂತಿಗಾಗಿ ನಡೆಸಲಾಗುತ್ತಿರುವ ಸಮರ ; ಮತ್ತು ಸಮಾಜವಾದಕ್ಕಾಗಿ ನಡೆಸಲಾಗುತ್ತಿರುವ ಹೋರಾಟದ ಅಂಗ. ಯುದ್ಧಕೋರರ ಮೇಲೆ ರಕ್ತದಾಹಿಗಳ ಮೇಲೆ ಅವರು ಬಲ್ಲದ ಶಾಂತಿಯನ್ನು ಬಲವಂತವಾಗಿ ಹೇರುವ ಹೋರಾಟ. ಸಮಾಜವಾದಿ ರಾಷ್ಟ್ರಗಳ ಜನತೆ ಮಾತ್ರವಲ್ಲದೆ ಬಂಡವಾಳಶಾಹಿ ರಾಷ್ಟ್ರದ ಜನತೆ - ಕಾರ್ಮಿಕ ವರ್ಗ ಮತ್ತು ತೃತೀಯ ಜಗತ್ತಿನ ಜನತೆಯನ್ನೊಳಗೊಂಡ ವಿಶಾಲ ಜನಸಾಗರದ ಪ್ರತಿಭಟನೆಯ ಮಹಾಪೂರ. ನಾವೆಲ್ಲರೂ ಈ ಮಹಾ ಸಾಗರವನ್ನು ಸೇರುವಾ. ಸೋವಿಯೆತ್ ದೇಶದ ಕ್ರಾಂತಿಕಾರಿನಾಯಕ ಗೋರ್ಬಾಚೇವ್‌ರವರು ಹೇಳಿದಂತೆ ಮೂರನೆಯ ಮಹಾಯುದ್ಧವನ್ನು ಆರಂಭವಾಗುವ ಮೊದಲೇ ತಡೆಯೋಣ.

ಓ, ಸಮಂತಾ...



ಅಮೇರಿಕಾ ದೇಶದಲ್ಲಿ ಒಂದಾನೊಂದು ಊರು. ಊರಿನ ಹೆಸರು ಮ್ಯಾಂಚೆಸ್ಟರ್. ಆ ಊರಿನಲ್ಲಿ ಒಬ್ಬ ಹುಡುಗಿ, ಎಲ್ಲರಂತೆಯೇ ಇದ್ದ ಒಬ್ಬ ಹುಡುಗಿ. ಹೆಸರು –ಸಮಂತಾಸ್ಮಿತ್.

ಎಲ್ಲರಂತೆ ಆಕೆ ಶಾಲೆಗೆ ಹೋಗುತ್ತಿದ್ದಳು. ಸಹಪಾಠಿಗಳೊಂದಿಗೆ ಆಟವಾಡುತ್ತಿದ್ದಳು. ಆದರೆ ಆಕೆಗೆ ಒಂದು ಅಷ್ಟೊಂದು ಸರಳವೇನೂ ಅಲ್ಲದ ಒಂದು ಪ್ರಶ್ನೆಗೆ ಉತ್ತರ ಬೇಕೆನಿಸಿತು ಏನಂತಹ ಪ್ರಶ್ನೆ ? ಮುಂದಿನ ಭವಿಷ್ಯವೇನು ? ಶಾಂತಿಯೇ ಅಥವಾ ಯುದ್ಧವೇ ? “ಸೋವಿಯತ್ ಬೆದರಿಕೆ”ಯ ಕರ್ಕಶ ಕೂಗು ಆ ದೇಶದ ಆಳುವ ರಾಜಕಾರಣಿಗಳು ಪತ್ರಿಕೆ, ಟಿ. ವಿ ಗಳಿಂದ ಪದೇ ಪದೇ ಮೊಳಗುತ್ತಿತ್ತು.

ಸರಿ, ಮಾಸ್ಕೋದ ವಿಳಾಸಕ್ಕೆ ಯೂರಿ ಆಂದ್ರೊಪೊವ್‌ಗೆ ನೇರವಾಗಿ ಪತ್ರ ಬರೆದಳು ಆ ಬಾಲಿಕೆ–ರಶ್ಯನ್‌ರಿಗೆ ಯುದ್ಧ ಬೇಕೇ ಎಂದು.

1983 ರ ಬೇಸಗೆ. ಸೋವಿಯೆತ್ ಒಕ್ಕೂಟ ಈ 12 ವರ್ಷದ ಅಮೆರಿಕನ್ ಶಾಲಾ ಬಾಲಕಿಗೆ ಆಹ್ವಾನನೀಡಿತು. ತನ್ನ ದೇಶಕ್ಕೆ ಭ ಕೊಟ್ಟು “ನೀನೇ ನೋಡುವಿಯಂತೆ, ರಶ್ಯನ್ನ ಯುದ್ಧ ಬೇಕೆ, ಶಾಂತಿ ಬೇಕೇ ಎಂದು.”

ಆಕೆ ಸೊವಿಯೆತ್ ಒಕ್ಕೂಟದಲ್ಲಿ ಮುಖ ರನ್ನು ಭೇಟಿಯಾದಳು. ತನ್ನ ವಯಸ್ಸಿನ ಬಾ ಬಾಲಿಕೆಯರನ್ನು ಭೇಟಿಯಾದಳು. “ನಾ ‘ಸೋವಿಯೆತ್ ಬೆದರಿಕೆ’ ಯೆಂಬ ಮಾತ ನಂಬುವುದಿಲ್ಲ” ಎಂದು ತನ್ನ ದೇಶ ಬಾಂಧವ ತಿಳಿಸಿದಳು ಆ ಬಾಲಕಿ ಸ್ವದೇಶಕ್ಕೆ ವಾಪಾಸ ಮೇಲೆ. ರಶ್ಯನ್ನರಿಗೆ ಶಾಂತಿ ಬೇಕು ಎಂಬುದ ಅರಿಯಬೇಕೆಂದು ಅಮೆರಿಕನ್ನರಿಗೆ ಕರೆ ನೀಡಿದ ಆ ಪುಟ್ಟ ಬಾಲಕಿ.

ಅಗಸ್ಟ್ ಅಂತ್ಯ. ಅಮೆರಿಕನ್ನರನ್ನು ನಿ ಯಿಂದ ಎಬ್ಬಿಸಿದ ಈ ಬಾಲಕಿ ತನ್ನ ಊರಿ ಪಯಣಿಸುತ್ತಿದ್ದ ವಿಮಾನ ನೆಲಮುಟ್ಟುತ್ತಿದ್ದ ಸ್ಫೋಟಗೊಂಡಿತು. ಸುದ್ದಿ ಕೇಳಿ ದಿಗ್ಭ್ರ ಗೊಂಡ ಸಮಸ್ತ ಸೊವಿಯೆತ್ ಒಕ್ಕೂಟಸಮಂ ಶ್ರದ್ಧಾಂಜಲಿ ಅರ್ಪಿಸಿತು. ಸಮಂ ಇನ್ನಿಲ್ಲ. ಆದರೆ ಆಕೆಯ ಕರೆಯು ಇನ್ನೂ ಇದ

ಸಂತೋಷದತ್ತ ಮುನ್ನಡೆ

ಬಡತನವು ಮಾನವ ಜೀವನದಲ್ಲೊಂದು ಕ್ರೂರ ಸಮಸ್ಯೆ ಆಗಿರುವುದು, ನಿರುದ್ಯೋಗ ಹಾಗೂ ಅಲ್ಪ ಉದ್ಯೋಗದಿಂದ ಬಳಲುವ, ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಅಧಿಕ ಸಂಖ್ಯೆಯಲ್ಲಿರುವ ಭೂರಹಿತ ಕಾರ್ಮಿಕರ ಹಾಗೂ ಚಿಕ್ಕಪುಟ್ಟ ರೈತರಿಗೆ ಖಾಯಂ ಉದ್ಯೋಗವನ್ನು ಕಲ್ಪಿಸಿ ಅವರ ಬಡತನವನ್ನು ನಿವಾರಿಸುವಲ್ಲಿ ಅವರನ್ನು ಸ್ವಾವಲಂಬಿಗಳಾಗಿ ಅಭಿವೃದ್ಧಿಪಡಿಸುವಲ್ಲಿ ಬೀಡಿ ಉದ್ಯಮವು ಮಹತ್ತ್ವದ ಪಾತ್ರವನ್ನು ವಹಿಸುತ್ತಿದೆ.

ನಿಮ್ಮ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ "ಮಂಗಳೂರು ಪ್ರಕಾಶ್ ಬೀಡಿಗಳು" ಈ ಗ್ರಾಮೀಣ ಕಾರ್ಮಿಕರಿಗೆ ಉದ್ಯೋಗ ಕಲ್ಪಿಸುವಷ್ಟೇ ಅಲ್ಲದೆ ಅವರ ಜೀವನ ಸುಧಾರಣೆಯತ್ತಲೂ ತನ್ನ ಕಿಂಚಿತ್ ಪಾತ್ರ ನಿರ್ವಹಿಸುತ್ತಿದೆ. ಮಾತ್ರವಲ್ಲ ಉದ್ಯಮದ ಪ್ರಗತಿಯಲ್ಲಿ ತಾವು ಸಕ್ರಿಯ ಪಾಲುಗಾರರೆಂಬ ಮನೋಭಾವವನ್ನು ತಾಳುವಂಥ ಅವಕಾಶವನ್ನು ಕಲ್ಪಿಸಿರುತ್ತದೆ. ಲಾಭಗಳಿಸುವಷ್ಟರಲ್ಲೇ ಹರ್ಷಿಸದೇ ಗಳಿಸಿದ ಲಾಭವನ್ನು ಕಾರ್ಮಿಕರ ಹಿತರಕ್ಷಣೆಗೆ ಉಪಯೋಗಿಸುವಲ್ಲಿ ಅತೀವ ಹರ್ಷಪಡುತ್ತದೆ.

ಈ ಧೋರಣೆಯಿಂದಲೂ ಪರಿಣಾಮವಾಗಿ ಕಾರ್ಮಿಕರ ವಿಪುಲ ಸಹಕಾರದಿಂದಲೂ ನಮ್ಮ ಉದ್ಯಮ ಬೆಳೆದಿದೆ. ಉದ್ಯಮದ ಬೆಳವಣಿಗೆಯ ಮೂಲಕ ಕಾರ್ಮಿಕರ ಸ್ಥಿತಿಗಳೂ ಸುಧಾರಿಸಿವೆ. ಫಲರೂಪವಾಗಿ ನಮ್ಮ ಉತ್ಪನ್ನಗಳ ಗುಣಮಟ್ಟ ಹಾಗೂ ಬೆಲೆ ಮಟ್ಟಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗಿರುತ್ತದೆ.

ಉದ್ಯೋಗವನ್ನು ಕಲ್ಪಿಸುವಲ್ಲಿ ಉದ್ಯಮವನ್ನು ಬೆಳೆಸುವ ನಮ್ಮ ಪಾತ್ರ ನಿಮಿತ್ತ ಮಾತ್ರದೆಂದು ನಾವೆಂದೂ ಮರೆಯಲಾರೆವು. ಪೋಷಕರಾದ ಸೇದುಗರು ತಾವು ಉರಿಸುವ ಪ್ರತಿಯೊಂದು ಬೀಡಿಯೂ ಗ್ರಾಮೀಣ ಗುಡಿಸಲೊಂದರಲ್ಲಿ ಬಡಕುಟುಂಬವೊಂದರ ಬಾಳ ಬೆಳಕನ್ನು, ಭವಿಷ್ಯದ ಆಶಾಜ್ಯೋತಿಯನ್ನು ಬೆಳಗಿಸುವತ್ತ ಸಹಕರಿಸುವುದೆಂದು ಮನಗಂಡಲ್ಲಿ ನಮ್ಮ ಸಾಧನೆಗೆ ಗರಿಷ್ಠ ಪ್ರೋತ್ಸಾಹ ದೊರೆಯುವುದು. ಈ ಉದಾತ್ತ ಧೋರಣೆಯತ್ತ ಮುನ್ನಡೆಯಲು ಕಾರಣ ಕರ್ತರಾದ ಪೋಷಕರಾದ ನಿಮಗೆಲ್ಲರಿಗೂ ಶುಭಾಶಯಗಳನ್ನರ್ಪಿಸುವೆವು-

ಪ್ರಕಾಶ್ ಬೀಡೀಸ್ ಲಿಮಿಟೆಡ್.
ಕೊಡಿಯಾಲಬೈಲ್, ಮಂಗಳೂರು-575003

Printed & Published by P. Ramachandra Rao on behalf of the Communist Party of India [Marxist] Karnataka State Committee, K. V. Temple Street, Sultanpet, Bangalore-560053
Editorial and manageriel office: L-56, L. V. Temple Street, Sultanpet B-53 Phone : 75331
Editor P. Ramachandra Rao   Managing Editor : N K. Upadhaya

"... ಈ ಶಾಂತಿ ಘೋಷಣೆಯನ್ನು ಮಾಡುವಾಗ ಯುದ್ಧನಿರತ ಮೂರು ದೇಶಗಳ ಪ್ರಜ್ಞಾವಂತ ಕಾರ್ಮಿಕ ಸಮುದಾಯಕ್ಕೆ ವಿಶೇಷವಾದ ಮನವಿ ಮಾಡುತ್ತದೆ.

ಈ ಕಾರ್ಮಿಕರು ಯುದ್ಧದ ಭಯಾನಕ ಪರಿಣಾಮಗಳಿಂದ ಮಾನವತೆಯನ್ನು ವಿಮೋಚನೆಗೊಳಿಸುವ ತಮ್ಮ ಕರ್ತವ್ಯವನ್ನು ಅರ್ಥಮಾಡಿಕೊಳ್ಳುತ್ತಾರೆ. ತಮ್ಮ ನಿರ್ಧಾರಕವಾದ, ಉತ್ಸಾಹಪೂರ್ಣವಾದ ನಿರಂತರ ಕಾರ್ಯಾಚರಣೆಯಿಂದ ಶಾಂತಿಯನ್ನು ಯಶಸ್ವಿಯಾಗಿ ನೆಲೆಗೊಳಿಸುವ ಕರ್ತವ್ಯದಲ್ಲಿ ನಮಗೆ ಸಹಾಯ ಮಾಡುತ್ತಾರೆ ಅದರ ಜೊತೆಗೆ, ಎಲ್ಲ ಗುಲಾಮತನದಿಂದ, ಎಲ್ಲ ಶೋಷಣೆಯಿಂದ ಶೋಷಿತ ದುಡಿವ ಜನಸಮುದಾಯವನ್ನು ವಿಮೋಚನೆಗೊಳಿಸುವ ಕರ್ತವ್ಯದಲ್ಲಿಯೂ ಸಹಾಯ ಮಾಡುತ್ತಾರೆ."

—ಜಗತ್ತಿನ ಮೊದಲ ಕಾಮಿಕರ ಪ್ರಭುತ್ವ ತನ್ನ ಮೊದಲ ದಿನದಂದು,
8·11·1917 ರಂದು ಹೊರಡಿಸಿದ ಶಾಂತಿ ಘೋಷಣೆಯಿಂದ



ರೂ. 3/-